ಬುಧವಾರ, ಆಗಸ್ಟ್ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 230 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಇತ್ತೀಚಿನ ಕೆಲವು ವರ್ಷಗಳಲ್ಲಿ ಕೃಷಿಯ ಪ್ರತಿ ಹಂತಕ್ಕೂ ಆ್ಯಪ್‌ಗಳು ಲಭ್ಯವಿವೆ. ಪ್ರತಿ ಬೆಳೆಯ ಬಗ್ಗೆಯೂ ಮಾಹಿತಿ ನೀಡುವ ಹಲವು ಆ್ಯಪ್‌ಗಳಿವೆ.



ಆಳ-ಅಗಲ
ಅರಣ್ಯ ಭೂಮಿ: ಹಕ್ಕುಪತ್ರ ಪಡೆಯಲು ಅಡ್ಡಿ ಹಲವು

ಭೂ ಕಬಳಿಕೆಗೆ ನಕಲಿ ದಾವೆ: ವಕೀಲರ ಪರಿಷತ್ತು, ಸಂಘವೂ ಪಾರ್ಟಿ 10

‘ಕೋವಿಡ್: ಗುಣವಾದವರಿಗೆ ಕ್ಷಯರೋಗ ಪರೀಕ್ಷೆ’ 10

ಸೆನ್ಸೆಕ್ಸ್	ನಿಫ್ಟಿ	₹/$
55,792 ▲	16,614 ▲	74.35 ▼

ರಾಜ್ಯ ಕೋವಿಡ್ ಅಂಕಿ-ಅಂಶ

29,31,827 ಒಟ್ಟು ಸೋಂಕಿತರು (29,30,529 ನಿನ್ನೆಯ ವಿವರ) ▲

21,481 ಸಕ್ರಿಯ ಪ್ರಕರಣಗಳು ▼

28,73,281 ಗುಣಮುಖರಾದವರು ▲

37,039 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	1,298	▲
ಗುಣಮುಖ	1,833	▲
ಸಾವು	32	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ತೆರವು ಕಾರ್ಯ ಯಶಸ್ವಿ

ಅಫ್ಗನ್‌ನಿಂದ ಭಾರತಕ್ಕೆ ಬಂದಿಳಿದ 150 ಮಂದಿ: ಉಳಿದವರ ಕರೆಸಲು ಸಿದ್ಧತೆ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಸಂಘರ್ಷಭರಿತ ಪರಿಸ್ಥಿತಿಯು ಮುಂದುವರಿದಿದೆ. ಅದರ ನಡುವೆಯೇ ಭಾರತದ ರಾಯಭಾರಿ ಮತ್ತು ರಾಯಭಾರ ಕಚೇರಿಯ ಸಿಬ್ಬಂದಿಯನ್ನು ಸುರಕ್ಷಿತವಾಗಿ ಮಂಗಳವಾರ ತೆರವು ಮಾಡಲಾಗಿದೆ. ದೇಶವು ತಾಲಿಬಾನ್ ಸಂಘಟನೆಯ ವಶವಾದ ಬಳಿಕ ಅಫ್ಗಾನಿಸ್ತಾನ ರಾಜಧಾನಿಯಲ್ಲಿ ಭೀತಿ ಮತ್ತು ಅನಿಶ್ಚಿತ ಸ್ಥಿತಿ ಇದೆ. ಅದರ ನಡುವೆಯೇ ಕಾರ್ಯಾಚರಣೆ ನಡೆಸಲಾಗಿದೆ.

ಭಾರತೀಯ ವಾಯುಪಡೆಯ ಗ್ಲೋಬ್‌ಮಾಸ್ಟರ್ ಸಿ–17 ವಿಮಾನವು ಸುಮಾರು 150 ಜನರೊಂದಿಗೆ ಗುಜರಾತ್‌ನ ಜಾಮ್‌ನಗರಕ್ಕೆ ಮಂಗಳವಾರ ಬೆಳಿಗ್ಗೆ ಬಂದಿಳಿಯಿತು. ಇಂಧನ ಮರುಪೂರಣದ ಬಳಿಕ, ಸಂಜೆ ಐದು ಗಂಟೆ ಸುಮಾರಿಗೆ ವಿಮಾನವು ದೆಹಲಿ ಸಮೀಪದ ಹಿಂಡನ್ ವಾಯುನೆಲೆಗೆ ತಲುಪಿತು.

ಕಾಬೂಲ್‌ನಲ್ಲಿ ಪರಿಸ್ಥಿತಿ ಸಂಕೀರ್ಣವಾಗಿದ್ದು, ನಾಗರಿಕ ವಿಮಾನ ಸೇವೆಗಳು ಪುನರಾರಂಭವಾದಾಗ ಅಲ್ಲಿ ಸಿಲುಕಿರುವ ಭಾರತೀಯರನ್ನು ತವರಿಗೆ ಕರೆತ-ರಲಾಗುವುದು ಎಂದು ಅಫ್ಗಾನಿಸ್ತಾನದ ಭಾರತೀಯ ರಾಯಭಾರಿ ರುದ್ರೇಂದ್ರ ಟಂಡನ್ ಅವರು ಜಾಮ್‌ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದರು.

‘ಸುರಕ್ಷಿತವಾಗಿ ಮನೆಗೆ ಮರಳಿದ್ದರಿಂದ ಸಂತೋಷವಾಗಿದೆ. 192 ಸಿಬ್ಬಂದಿಯನ್ನು ಕರೆತರುವ ಬೃಹತ್ ಕಾರ್ಯಾಚರಣೆ ಇದಾಗಿತ್ತು. ಅಫ್ಗಾನಿಸ್ತಾನದಿಂದ ಕೇವಲ ಮೂರು ದಿನಗಳ ಅವಧಿಯಲ್ಲಿ ಎರಡು ಹಂತಗಳಲ್ಲಿ ಜನರನ್ನು ಸ್ಥಳಾಂತರ ಮಾಡಲಾಗಿದೆ’ ಎಂದರು.

6ನೇ ಪುಟ ನೋಡಿ



ಅಫ್ಗನ್‌ನ ಭಾರತೀಯ ರಾಯಭಾರ ಕಚೇರಿ ಸಿಬ್ಬಂದಿ ಜಾಮ್‌ನಗರದ ವಾಯುನೆಲೆಗೆ ಮಂಗಳವಾರ ಬಂದಿಳಿದರು –ಪಿಟಿಐ ಚಿತ್ರ

ಕಾಶ್ಮೀರದಲ್ಲಿ ಕಳವಳ

ಶ್ರೀನಗರ: ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಪ್ರಾಬಲ್ಯವು ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನೆ ತೀವ್ರಗೊಳ್ಳುವ ಆತಂಕಕ್ಕೆ ಕಾರಣವಾಗಿದೆ.

ಉಗ್ರರಿಗೆ ತರಬೇತಿ ನೀಡುವುದನ್ನು ಪಾಕಿಸ್ತಾನದ ಸೇನೆ ಮತ್ತು ಗುಪ್ತಚರ ಸಂಸ್ಥೆ ಐಎಸ್‌ಐ, ಪಾಕ್ ಆಕ್ರಮಿತ ಕಾಶ್ಮೀರದ ಬದಲು ಅಫ್ಗಾನಿಸ್ತಾನಕ್ಕೆ ಸ್ಥಳಾಂತರಿಸಬಹುದು. ಅಂತರ-ರಾಷ್ಟ್ರೀಯ ಸಮುದಾಯದ ಕಣ್ಣಿಗೆ ಮಣ್ಣೆರಚಲು ಇದರಿಂದ ಸಾಧ್ಯವಾಗುತ್ತದೆ ಎಂದು ಭದ್ರತಾ ಪರಿಣತರು ಹೇಳುತ್ತಾರೆ.

‘ಭಾರತ ವಿರೋಧಿ ಭಯೋತ್ಪಾದನಾ ಗುಂಪುಗಳು ಅಫ್ಗಾನಿಸ್ತಾನದಲ್ಲಿ ಸುರಕ್ಷಿತ ತಾಣಗಳನ್ನು ಕಂಡುಕೊ-ಳ್ಳಬಹುದು. ತಾಲಿಬಾನ್‌ನ ಕೆಲವು ಉಗ್ರರನ್ನು ಜಮ್ಮು-ಕಾಶ್ಮೀರಕ್ಕೆ ಕಳುಹಿಸಿ ಅಲ್ಲಿನ ಭಯೋತ್ಪಾದನಾ ಚಟುವ-ಟಿಕೆಗಳಿಗೆ ಮರು ಜೀವ ನೀಡುವಂತೆಯೂ ತಾಲಿಬಾನ್ ಅನ್ನು ಐಎಸ್‌ಐ ಕೋರಬಹುದು’ ಎಂದು ಜಮ್ಮು-ಕಾಶ್ಮೀರ ಪೊಲೀಸ್ ಮುಖ್ಯಸ್ಥ ಶೇಷ್ ಪಾಲ್ ವೈದ್ ಹೇಳಿದ್ದಾರೆ.

ಪರಿವರ್ತನೆಯ ಸೋಗು

ಎಲ್ಲರಿಗೂ ‘ಕ್ಷಮಾದಾನ’ ನೀಡುವುದಾಗಿ ತಾಲಿಬಾನ್ ಘೋಷಿಸಿದೆ. ಜತೆಗೆ, ಮಹಿಳೆಯರು ಕೂಡ ತಮ್ಮ ಸರ್ಕಾರ ಸೇರಬೇಕು ಎಂದು ಮಂಗಳವಾರ ಹೇಳಿದೆ. ತಾಲಿಬಾನ್ ಕೈಗೆ ಅಫ್ಗಾನಿಸ್ತಾನ ಸಿಕ್ಕಿತು ಎಂದಾಕ್ಷಣವೇ ಜನರು ದೇಶ ತೊರೆಯಲು ಹಾತೊರೆದಿದ್ದರು. ವಿಮಾನ ನಿಲ್ದಾಣಕ್ಕೆ ನುಗ್ಗಿದ್ದರು. ಅದರ ಮರು ದಿನವೇ ತಾಲಿಬಾನ್ ಈ ಘೋಷಣೆಗಳನ್ನು ಮಾಡಿದೆ.

1990ರ ದಶಕದಲ್ಲಿ ಅಧಿಕಾರಕ್ಕೆ ಬಂದಿದ್ದ ತಾಲಿಬಾನ್ ಇಸ್ಲಾಂ ಕಾನೂನು ಅನ್ವಯ ಕಠಿಣ ನಿಯಮಗಳನ್ನು ಜಾರಿಗೆ ತಂದಿತ್ತು. ಆದರೆ, ಈ ಬಾರಿ ಆಳ್ವಿಕೆ ಹೆಚ್ಚು ಮಾನವೀಯವಾಗಿರಲಿದೆ ಎಂಬ ಸಂದೇಶ ರವಾನೆಯು ತಾಲಿಬಾನ್‌ನ ಈಗಿನ ಘೋಷಣೆಗಳ ಹಿಂದಿನ ಉದ್ದೇಶ ಎಂದು ಹೇಳಲಾಗುತ್ತಿದೆ. ಆದರೆ, ತಾಲಿಬಾನ್ ಬಗ್ಗೆ ಜನರಲ್ಲಿ ಅನುಮಾನ ಇದ್ದೇ ಇದೆ.

ಸಂಪಾದಕೀಯ 8

ಒಳ ಪುಟ



ಸಕ್ಕರೆ ರಫ್ತು ಸಬ್ಸಿಡಿ ಹಿಂದಕ್ಕೆ? 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆರೆ ಒತ್ತುವರಿ ತೆರವು

ಬೆಂಗಳೂರು: ಯಲಹಂಕ ವಲಯದ ಬ್ಯಾಟರಾಯನಪುರ ವಾರ್ಡ್‌ನ ಅಮೃತಹಳ್ಳಿ ಕೆರೆ ಒತ್ತುವರಿಯನ್ನು ಬಿಬಿಎಂಪಿ ಅಧಿಕಾರಿಗಳು ಮಂಗಳವಾರ ತೆರವುಗೊಳಿಸಿದರು. 3

₹34.97 ಕೋಟಿ ಅಧಿಕ ವೆಚ್ಚ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಖರೀದಿಸಿದ ಉಪಕರಣಗಳಿಗಾಗಿ ₹34.97 ಕೋಟಿ ಅಧಿಕ ಮೊತ್ತ ಪಾವತಿ ಮಾಡಲಾಗಿರುವ ಬಗ್ಗೆ ಸೂಕ್ತ ಮಾಹಿತಿ ಒದಗಿಸುವಂತೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಒಂದು ವಾರ ಗಡುವು ನೀಡಿದೆ. 3C

‘ಮಾಹಿತಿ ಬಹಿರಂಗ ಅನಗತ್ಯ’

ನವದೆಹಲಿ (ಪಿಟಿಐ): ‘ಪೆಗಾಸಸ್ ಗೂಢಚರ್ಯೆ ಪ್ರಕರಣ ಕುರಿತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕೇಂದ್ರ ಸರ್ಕಾರವು ಬಹಿರಂಗಪಡಿಸಬೇಕು ಎಂದು ತಾನು ಬಯಸುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಸ್ಪಷ್ಟಪಡಿಸಿತು. 3C



30ರಿಂದ ಪ್ರವೇಶ ಆರಂಭ

ಬೆಂಗಳೂರು: ಉನ್ನತಿ ಸೆಂಟರ್ (ಎಸ್‌ಜಿಬಿಎಸ್ ಟ್ರಸ್ಟ್) 18 ರಿಂದ 30 ವರ್ಷದೊಳಗಿನವರಿಗೆ ಉದ್ಯೋಗ ತರಬೇತಿ ನೀಡಲಿದ್ದು, ಇದಕ್ಕಾಗಿ ಇದೇ 30ರಿಂದ ಪ್ರವೇಶ ಆರಂಭಿಸಲಿದೆ.

35 ದಿನಗಳ ತರಬೇತಿ ವೇಳೆ ಯುವಕರಿಗೆ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವ ಕೌಶಲ, ಜೀವನ ಕೌಶಲ, ಮೌಲ್ಯಗಳು, ಸೇಲ್ಸ್ ಆ್ಯಂಡ್ ಮಾರ್ಕೆಟಿಂಗ್ ಹಾಗೂ ಕಂಪ್ಯೂಟರ್ ಕಲಿಕೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ. ಹೊರ ರಾಜ್ಯ ಹಾಗೂ ಜಿಲ್ಲೆಗಳ ಅಭ್ಯರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಇದ್ದು, ತರಬೇತಿ ವೇಳೆ ಆಹಾರದ ವ್ಯವಸ್ಥೆಯನ್ನೂ ಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ವೈಜಯಶ್ರೀ 9900146423 ಅವರನ್ನು ಸಂಪರ್ಕಿಸಬಹುದು.



ಪೆಟ್ರೋಲ್ ತೆರಿಗೆ ಕಡಿತ ಇಲ್ಲ: ಬೊಮ್ಮಾಯಿ

ಬೆಂಗಳೂರು: 'ರಾಜ್ಯದಲ್ಲಿ ಪೆಟ್ರೋಲ್ ಮೇಲಿನ ತೆರಿಗೆ ಕಡಿತ ಪ್ರಸ್ತಾಪ ಇಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ತಮಿಳುನಾಡಿನಲ್ಲಿ ಅಲ್ಲಿನ ಸರ್ಕಾರ ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹ 3 ತೆರಿಗೆ ಕಡಿತ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ ಕಡಿತ ಮಾಡುವ ಚಿಂತನೆ ಇಲ್ಲ' ಎಂದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿ ಕೊಡುತ್ತಿರುವುದು ಗಮನಕ್ಕೆ ಬಂದಿದೆ. ಬಸ್ ನಿಲ್ದಾಣ, ರೈಲು ನಿಲ್ದಾಣ ಮತ್ತಿತರ ಕಡೆ ಈ ದಂಧೆ ನಡೆಯುತ್ತಿದೆ. ಅಂಥವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಬೊಮ್ಮಾಯಿ ಎಚ್ಚರಿಕೆ ನೀಡಿದರು.

ವರಮಹಾಲಕ್ಷ್ಮಿ ಹಬ್ಬಕ್ಕೆ ತನೀರಾದಿಂದ ವಿಶೇಷ ಸೀರೆಗಳು



ಬೆಂಗಳೂರು: ಕರಕುಶಲ ಜವಳಿ ಬ್ರ್ಯಾಂಡ್ ಆಗಿರುವ ತನೀರಾ, ವರಮಹಾಲಕ್ಷ್ಮಿ ಹಬ್ಬವನ್ನು ಇನ್ನಷ್ಟು ವಿಶೇಷವಾಗಿಸಲು, ಕೈಯಿಂದ ನೇಯ್ದಿರುವ ಮೃದುವಾದ ರೇಷ್ಮೆ ಸೀರೆಗಳನ್ನು ಬಿಡುಗಡೆ ಮಾಡಿದೆ.

'ವರಮಹಾಲಕ್ಷ್ಮಿ ಪೂಜೆಯ ಸಂದರ್ಭದಲ್ಲಿ ಸಾಫ್ಟ್ ಸಿಲ್ಕ್, ಸಿಲ್ಕ್ ಕಾಟನ್ ಮತ್ತು ಹೆವಿ ಸಿಲ್ಕ್‌ನಂತಹ ಶುದ್ಧ ಮತ್ತು ನೈಸರ್ಗಿಕ ಬಟ್ಟೆಗಳಿಂದ ಸಿದ್ಧಗೊಳಿಸಲಾದ ಸೀರೆಗಳನ್ನು ಗ್ರಾಹಕರಿಗೆ ನೀಡಲು ಸಂತೋಷ ಆಗುತ್ತಿದೆ' ಎಂದು ತನೀರಾ ಬ್ರ್ಯಾಂಡ್‌ನ ಮಾರುಕಟ್ಟೆ ವಿಭಾಗದ ಮುಖ್ಯಸ್ಥ ರಘುವರ್ ಸೇಠ್ ಹೇಳಿದ್ದಾರೆ.

ಈ ಸೀರೆಗಳ ಬೆಲೆಯು ₹ 5 ಸಾವಿರದಿಂದ ₹ 35 ಸಾವಿರದವರೆಗಿದೆ. ಬೆಂಗಳೂರಿನಲ್ಲಿ ಜಯನಗರ, ಇಂದಿರಾನಗರ, ಕಮರ್ಷಿಯಲ್ ಸ್ಟ್ರೀಟ್, ಓರಿಯನ್ ಮಾಲ್‌ನಲ್ಲಿ ಇರುವ ಮಳಿಗೆಗಳಲ್ಲಿ ಖರೀದಿಸಬಹುದಾಗಿದೆ. ಅಲ್ಲದೆ www.taneira.comನಲ್ಲಿಯೂ ಖರೀದಿಸಬಹುದಾಗಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಎಂಡ್ ಆಫ್ ಸೀಸನ್ ಸೇಲ್‌ನಲ್ಲಿ ಸೆಪ್ಟೆಂಬರ್ 12ರವರೆಗೆ ಸೀರೆಗಳ ವಿವಿಧ ಸಂಗ್ರಹಗಳ ಮೇಲೆ ಶೇಕಡ 30ರವರೆಗೂ ರಿಯಾಯಿತಿ ಪಡೆಯಬಹುದು ಎಂದು ತಿಳಿಸಿದೆ.

ನಗರದಲ್ಲಿ ಇಂದು

'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನ' ಕುರಿತು ವಿಚಾರ ಸಂಕಿರಣ: ಉದ್ಘಾಟನೆ–ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಭಾಗವಹಿಸುವವರು–ಡಿ.ಕುಮುದಾ, ಆಗಸ್ಟಿನ್ ಜಾರ್ಜ್, ಬಿ.ತಿಮ್ಮೇಗೌಡ, ಪಿ.ಪ್ರದೀಪ್, ಆಯೋಜನೆ–ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಮತ್ತು ಕ್ರಿಸ್ತು ಜಯಂತಿ ಕಾಲೇಜು, ಸ್ಥಳ–ಎಸ್‌ಕೆಇ ಸಭಾಂಗಣ, ಕ್ರಿಸ್ತು ಜಯಂತಿ ಕಾಲೇಜು, ಕೆ.ನಾರಾಯಣಪುರ, ಕೊತ್ತನೂರು, ಬೆಳಿಗ್ಗೆ 10

ವಿವಿಧ ಪ್ರಶಸ್ತಿಗಳ ಪ್ರದಾನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್, ಅಧ್ಯಕ್ಷತೆ–ಶಾಸಕ ಉದಯ್ ಬಿ.ಗರುಡಾಚಾರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6.30

'ಕೋವಿಡ್ ಮೂರನೇ ಅಲೆ ತಡೆಯುವಿಕೆ ಹಾಗೂ ಹೃದಯದ ಮೇಲೆ ಕೋವಿಡ್ ಪರಿಣಾಮ' ಕುರಿತು ವೆಬಿನಾರ್: ಮಾತನಾಡುವವರು–ಹೃದ್ರೋಗ ತಜ್ಞ ಎಂ.ಎಸ್.ಕೃಷ್ಣ ಸರೀನ್, ಆಯೋಜನೆ–ನಮ್ಮ ಬೆಂಗಳೂರು ಪ್ರತಿಷ್ಠಾನ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

22ರಂದು ನುಲಿಚಂದಯ್ಯ ಜಯಂತ್ಯುತ್ಸವ

ಬೆಂಗಳೂರು: ಕೊರಮ–ಕೊರಚ–ಕೊರವ (ಕುಳುವ) ಸಮುದಾಯದ ಶರಣ ಶ್ರೀ ನುಲಿಚಂದಯ್ಯನವರ 914ನೇ ಜಯಂತ್ಯುತ್ಸವವನ್ನು ಇದೇ 22ರಂದು ರಾಜ್ಯದಾದ್ಯಂತ ಆಚರಿಸಲು ಅಖಿಲ ಕರ್ನಾಟಕ ಕುಳುವ ಮಹಾ ಸಂಘ ಕರೆ ನೀಡಿದೆ. 'ನೂಲಿನ ಹುಣ್ಣಿಮೆ ದಿನದಂದು ಎಲ್ಲರೂ ತಮ್ಮ ಮನೆ ಹಾಗೂ ಗ್ರಾಮಗಳಲ್ಲಿ ಜಯಂತಿ ಆಚರಿಸಬೇಕು. ತಾಲ್ಲೂಕು ಮತ್ತು ಜಿಲ್ಲಾ ಸಂಘದ ಘಟಕಗಳು ಚಿಂತಕರು, ಬುದ್ಧಿಜೀವಿಗಳು ಹಾಗೂ ನೌಕರ ವರ್ಗದವರನ್ನು ಒಟ್ಟುಗೂಡಿಸಿಕೊಂಡು ಏಕಕಾಲದಲ್ಲಿ ಕಾರ್ಯಕ್ರಮ ನಡೆಸಬೇಕು. ಜೊತೆಗೆ ನುಲಿಚಂದಯ್ಯನವರ ಕಾಯಕ ತತ್ವಾದರ್ಶಗಳ ಬಗ್ಗೆ ಯುವ ಪೀಳಿಗೆಗೆ ತಿಳಿಸಬೇಕು' ಎಂದು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಆನಂದ್‌ಕುಮಾರ್ ಏಕಲವ್ಯ ಮನವಿ ಮಾಡಿದ್ದಾರೆ.



ಬಿಬಿಎಂಪಿ ಅಧಿಕಾರಿಗಳಿಂದ ಕಾರ್ಯಾಚರಣೆ

ಅಮೃತಹಳ್ಳಿ ಕೆರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ವಲಯದ ಬ್ಯಾಟರಾಯನಪುರ ವಾರ್ಡ್‌ನ ಅಮೃತಹಳ್ಳಿ ಕೆರೆ ಒತ್ತುವರಿಯನ್ನು ಬಿಬಿಎಂಪಿ ಅಧಿಕಾರಿಗಳು ಮಂಗಳವಾರ ತೆರವುಗೊಳಿಸಿದರು.

ಯಲಹಂಕ ತಾಲ್ಲೂಕಿನ ಜಕ್ಕೂರು ಹೋಬಳಿ ಸರ್ವೆ ನಂಬರ್ 115ರಲ್ಲಿ ಒಟ್ಟು 24 ಎಕರೆ 36 ಗುಂಟೆ ವಿಸ್ತೀರ್ಣದಲ್ಲಿ ಈ ಕೆರೆ ಇದೆ. ಇದಕ್ಕೆ ಸಂಬಂಧಿಸಿದ 20 ಗುಂಟೆ ಜಮೀನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಶೆಡ್ ಹಾಗೂ ಶೌಚಾಲಯ ನಿರ್ಮಿಸಿದ್ದರು. ಭೂದಾಖಲೆಗಳ ಸಹಾಯಕ ನಿರ್ದೇಶಕರ ಆದೇಶದಂತೆ ಆ.6ರಂದು ಸರ್ವೇಯರ್‌ಗಳು ಕೆರೆಯ ಪಕ್ಕದ ಸರ್ವೆ ನಂಬರ್‌ಗಳ ಆಧಾರದ ಮೇಲೆ ಅಳತೆ ಮಾಡಿ ಗಡಿಗಳನ್ನು ಗುರುತಿಸಿದ್ದರು.

ಬಿಬಿಎಂಪಿ ಕೆರೆಗಳ ವಿಭಾಗದ ವಿಶೇಷ ಆಯುಕ್ತ ರೆಡ್ಡಿ ಶಂಕರ ಬಾಬು ಅವರ ನೇತೃತ್ವದಲ್ಲಿ ಯಲಹಂಕ ವಲಯ ಜಂಟಿ ಆಯುಕ್ತ ಡಾ.ಅಶೋಕ್, ಕೆರೆಗಳ ವಿಭಾಗದ ಸೂಪರಿಂಟೆಂಡಿಂಗ್ ಎಂಜಿನಿಯರ್ ಬಿ.ಟಿ. ಮೋಹನ್ ಕೃಷ್ಣ, ತಹಸೀಲ್ದಾರರು ಹಾಗೂ ಇತರ ಅಧಿಕಾರಿಗಳ ನೇತೃತ್ವದಲ್ಲಿ ಒತ್ತುವರಿ ತೆರವುಗೊಳಿಸಲಾಯಿತು.

'ಒತ್ತುವರಿ ತೆರವುಗೊಳಿಸಿದ ಸ್ಥಳದಲ್ಲಿ ತಂತಿಬೇಲಿ ಹಾಗೂ ಕಂಬಗಳನ್ನು ಅಳವಡಿಸಲಾಗಿದೆ' ಎಂದು ಕೆರೆಗಳ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್. ಕೆ.ವಿ ಮಾಹಿತಿ ನೀಡಿದರು.

ಅಮೃತಹಳ್ಳಿ ಕೆರೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧೀನದಲ್ಲಿತ್ತು. ಮೂರು ವರ್ಷಗಳ ಹಿಂದೆ ಬಿಡಿಎಯು ಈ ಕೆರೆಯನ್ನು ಪಾಲಿಕೆಗೆ ಹಸ್ತಾಂತರಿಸಿತ್ತು.



ಅಮೃತಹಳ್ಳಿ ಕೆರೆಯ ಒತ್ತುವರಿಯನ್ನು ಮಂಗಳವಾರ ತೆರವುಗೊಳಿಸಲಾಯಿತು

'₹ 4 ಕೋಟಿ ವೆಚ್ಚದಲಿ ಕೆರೆ ಅಭಿವೃದ್ಧಿ'

ಅಮೃತಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿಗಾಗಿ ಬಿಬಿಎಂಪಿಯು 15ನೇ ಹಣಕಾಸು ಆಯೋಗದ ಅನುದಾನದಡಿ ₹ 4 ಕೋಟಿಯನ್ನು ಮೀಸಲಿಡಲಾಗಿದೆ. ಕೆರೆ ಅಭಿವೃದ್ಧಿಯ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಅನುಮೋದನೆಗಾಗಿ ಬಿಬಿಎಂಪಿ ಕೆರೆ ವಿಭಾಗದ ಅಧಿಕಾರಿಗಳು ಕರ್ನಾಟಕ ಕೆರೆ ಸರೋವರ ಸಂರಕ್ಷಣಾ ಅಭಿವೃದ್ಧಿ ನಿಗಮಕ್ಕೆ (ಕೆಟಿಸಿಡಿಎ) ಕಳುಹಿಸಿದ್ದಾರೆ. ಡಿಪಿಆರ್‌ಗೆ ಕೆಟಿಸಿಡಿಎ ಅನುಮೋದನೆ ಸಿಕ್ಕಿದ ನಂತರ ಟೆಂಡರ್ ಕರೆದು ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ನಕಲಿ ಚಿನ್ನ ಅಡವಿಟ್ಟು ಸಾಲ; ನಿರ್ದೇಶಕ ಬಂಧನ

ಬೆಂಗಳೂರು: ನಕಲಿ ಚಿನ್ನ ಅಡವಿಟ್ಟು ₹ 42 ಲಕ್ಷ ಸಾಲ ಪಡೆದು ವಂಚಿಸಿದ ಆರೋಪದಡಿ ಸಿನಿಮಾ ನಿರ್ದೇಶಕ ರವಿರತ್ನಂ ಕರಮಲ ಸೇರಿ ಇಬ್ಬರನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

'ಫೆಡರಲ್ ಬ್ಯಾಂಕ್ ವ್ಯವಸ್ಥಾಪಕ ಭರತ್ ಅವರು ವಂಚನೆ ಬಗ್ಗೆ ದೂರು ನೀಡಿದ್ದರು. ರವಿರತ್ನಂ ಹಾಗೂ ಶಿವಕುಮಾರ್ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ರವಿರತ್ನಂ, 'ಮಧುರ ಸ್ವಪ್ನ' ಸೇರಿ ಹಲವು ಸಿನಿಮಾಗಳನ್ನು ನಿರ್ದೇಶಿಸಿದ್ದರು. ಹಣದ ಅವಶ್ಯಕತೆ ಇದ್ದಾಗ ಶಿವಕುಮಾರ್ ಜೊತೆ ಸೇರಿ ಸಂಚು ರೂಪಿಸಿದ್ದರು. 1 ಕೆ.ಜಿ 50 ಗ್ರಾಂ ಚಿನ್ನವನ್ನು ಫೆಡರಲ್ ಬ್ಯಾಂಕ್‌ನಲ್ಲಿ ಅಡವಿಟ್ಟಿದ್ದ ಆರೋಪಿಗಳು, ₹ 42 ಲಕ್ಷ ಸಾಲ ಪಡೆದಿದ್ದರು. ಪ್ರತಿ ತಿಂಗಳು ಕಂತು ಪಾವತಿಸುವಂತೆ ಬ್ಯಾಂಕ್ ಷರತ್ತು ವಿಧಿಸಿತ್ತು.'

'ವರ್ಷದಿಂದ ಸಾಲಕ್ಕೆ ಯಾವುದೇ ಕಂತು ತುಂಬಿರಲಿಲ್ಲ. ಈ ಬಗ್ಗೆ ಆರೋಪಿಗಳಿಗೆ ಬ್ಯಾಂಕ್ ವ್ಯವಸ್ಥಾಪಕ ನೋಟಿಸ್ ನೀಡಿದ್ದರು. ಅದಕ್ಕೂ ಉತ್ತರಿಸಿರಲಿಲ್ಲ. ಹೀಗಾಗಿ, ಚಿನ್ನವನ್ನು ಹರಾಜು ಹಾಕಲು ವ್ಯವಸ್ಥಾಪಕರು ಮುಂದಾಗಿದ್ದರು. ಹರಾಜಿನಲ್ಲಿ ಪಾಲ್ಗೊಳ್ಳಲು ಇಚ್ಛಿಸಿದ್ದ ವ್ಯಕ್ತಿಯೊಬ್ಬರು ಚಿನ್ನ ಪರಿಶೀಲನೆಗೆ ಬಂದಿದ್ದರು. ಚಿನ್ನವನ್ನು ತುಂಡರಿಸಿ ಪರಿಶೀಲಿಸಿದಾಗ ನಕಲಿ ಎಂಬುದು ತಿಳಿದಿದೆ. ಈ ಸಂಗತಿ ದೂರಿನಲ್ಲಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಶೇ 40ರಷ್ಟು ಚಿನ್ನ ಲೇಪಿತ ಲೋಹವನ್ನು ಬ್ಯಾಂಕ್‌ಗೆ ನೀಡಿದ್ದ ಆರೋಪಿಗಳು, ಅದನ್ನೇ ಅಸಲಿ ಚಿನ್ನವೆಂದು ಹೇಳಿ ವಂಚಿಸಿದ್ದಾರೆ. ಚಿನ್ನ ಕತ್ತರಿಸಿದಾಗ ಲೋಹ ಪತ್ತೆಯಾಗಿದೆ' ಎಂದೂ ಹೇಳಿವೆ.

ಡಿಕೆಶಿ, ಸುರೇಶ್ ವಿರುದ್ಧ ದೂರು

ರಾಮನಗರ: ಕನಕಪುರದಲ್ಲಿ ಕೊರೊನಾ ವಾರಿಯರ್‌ಗಳಿಗೆ ಇದೇ 15ರಂದು ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಕೋವಿಡ್ ನಿಯಮಗಳನ್ನು ಉಲ್ಲಂಘಿಸಿ ಸಾವಿರಾರು ಜನರನ್ನು ಸೇರಿಸಿದ್ದು, ಆಯೋಜಕರ ಮೇಲೆ ಮೊಕದ್ದಮೆ ದಾಖಲಿಸಬೇಕು ಎಂದು ಕೋರಿ ಸಾಮಾಜಿಕ ಹೋರಾಟಗಾರ ರವಿಕುಮಾರ್ ಕಂಚನಹಳ್ಳಿ ಎಸ್ಪಿ ಕಚೇರಿಗೆ ದೂರು ಸಲ್ಲಿಸಿದ್ದಾರೆ.

ಸಂಸದ ಡಿ.ಕೆ. ಸುರೇಶ್ ಹಾಗೂ ಶಾಸಕ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆದಿದ್ದು, 4 ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು ಎನ್ನಲಾಗಿದೆ.

'ಐಬಿಎಂ' ಕೆಲಸದ ಆಮಿಷ: ₹31.90 ಲಕ್ಷ ವಂಚನೆ

ಬೆಂಗಳೂರು: ಪ್ರತಿಷ್ಠಿತ ಐಬಿಎಂ ಕಂಪನಿಯಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ನಗರದ ಯುವತಿಯೊಬ್ಬರಿಂದ ₹ 31.90 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೈಕೊ ಲೇಔಟ್‌ನಲ್ಲಿ ವಾಸವಿರುವ 29 ವರ್ಷದ ಯುವತಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳಾದ ರಮೇಶ್, ಪವನ್, ಗೌರವ್ ಹಾಗೂ ಅಭಿಮನ್ಯು ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕೆಲಸ ಹುಡುಕುತ್ತಿದ್ದ ಯುವತಿ, ನೌಕರಿ ಡಾಟ್ ಕಾಮ್ ಜಾಲತಾಣದಲ್ಲಿ 2019ರಲ್ಲಿ ವೈಯಕ್ತಿಕ ವಿವರವುಳ್ಳ ರೆಸ್ಯುಮೆ ಅಪ್‌ಲೋಡ್ ಮಾಡಿದ್ದರು. ಅದರ ಮಾಹಿತಿ ತಿಳಿದುಕೊಂಡಿದ್ದ ಆರೋಪಿಗಳು, ಯುವತಿಗೆ ಕರೆ ಮಾಡಿದ್ದರು. 'ನಿಮ್ಮ ಅರ್ಹತೆಗೆ ತಕ್ಕಂತೆ ಐಬಿಎಂ ಕಂಪನಿಯಲ್ಲಿ ಕೆಲಸ ಖಾಲಿ ಇದೆ. ವಾರ್ಷಿಕ ₹ 14 ಲಕ್ಷ ಸಂಬಳ. ಕೆಲಸ ಸಿಗಬೇಕಾದರೆ ಹಣ ಖರ್ಚಾಗುತ್ತದೆ' ಎಂದಿದ್ದರು.'

'ಆರೋಪಿಗಳ ಮಾತು ನಂಬಿದ್ದ ಯುವತಿ, ಹಂತ ಹಂತವಾಗಿ ₹ 31.90 ಲಕ್ಷ ನೀಡಿದ್ದರು. ಅದಾದ ನಂತರ ಆರೋಪಿಗಳು ಯಾವುದೇ ಕೆಲಸ ಕೊಡಿಸಿಲ್ಲ. ಹಣವನ್ನೂ ವಾಪಸು ನೀಡಿಲ್ಲ. ಅದರಿಂದ ನೊಂದ ಯುವತಿ ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

₹ 20 ಕೋಟಿ ಮೌಲ್ಯದ ತಿಮಿಂಗಿಲ ವಾಂತಿ ಜಪ್ತಿ

ಬೆಂಗಳೂರು: ನಗರದಲ್ಲಿ ತಿಮಿಂಗಿಲ ವಾಂತಿಯನ್ನು (ಅಂಬರ್‌ಗ್ರಿಸ್) ಮಾರಲು ಯತ್ನಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಎಸ್.ಜೆ. ಪಾರ್ಕ್ ಪೊಲೀಸರು ಬಂಧಿಸಿದ್ದಾರೆ.

'ಉಡುಪಿಯ ಮಲ್ಪೆ ಸಮುದ್ರ ತೀರದಲ್ಲಿ ಸಂಗ್ರಹಿಸಿದ್ದ ಅಂಬರ್ಗ್ರಿಸ್‌ನ್ನು ಆರೋಪಿಗಳು ನಗರಕ್ಕೆ ತಂದಿದ್ದರು. ಅವರನ್ನು ಬಂಧಿಸಿ, ₹ 20 ಕೋಟಿ ಮೌಲ್ಯದ ಅಂಬರ್ಗ್ರಿಸ್ ಗಟ್ಟಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಎನ್.ಆರ್.ರಸ್ತೆಯಲ್ಲಿರುವ ವಸತಿಗೃಹವೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದ ಇಬ್ಬರು ಆರೋಪಿಗಳು, ಅಂಬರ್ಗ್ರಿಸ್ ತಂದಿರುವ ಮಾಹಿತಿ ಸಿಕ್ಕಿತ್ತು. ದಾಳಿ ಮಾಡಿದಾಗ ಅವರ ಬಳಿ ಎರಡೂವರೆ ಕೆ.ಜಿ ಅಂಬರ್ಗ್ರಿಸ್ ಪತ್ತೆಯಾಯಿತು. ವಿಚಾರಣೆ ನಡೆಸಿದಾಗ, ಹೊಸಕೋಟೆ ಬಳಿ ಮತ್ತಿಬ್ಬರ ಕಡೆ ಅಂಬರ್ಗ್ರಿಸ್ ಇರುವುದು ಗೊತ್ತಾಯಿತು.'

'ಹೊಸಕೋಟೆಯಲ್ಲಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಿ, ಅವರಿಂದ 17 ಕೆ.ಜಿ 500 ಗ್ರಾಂ ತಿಮಿಂಗಿಲ ವಾಂತಿ ಜಪ್ತಿ ಮಾಡಲಾಯಿತು' ಎಂದೂ ತಿಳಿಸಿವೆ.

'ತಿಮಿಂಗಿಲಿನ ವಾಂತಿಯನ್ನು ತೇಲಾಡುವ ಚಿನ್ನ ಎನ್ನುತ್ತಾರೆ. ಸುಗಂಧ ದ್ರವ್ಯ ಹಾಗೂ ಮಾದಕವಸ್ತು ತಯಾರಿಕೆಯಲ್ಲಿ ಬಳಸುತ್ತಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದೆ. ಇದನ್ನು ತಿಳಿದುಕೊಂಡ ಆರೋಪಿಗಳು, ಅಕ್ರಮವಾಗಿ ಹಣ ಗಳಿಸಲು ಅಂಬರ್ಗ್ರಿಸ್ ಮಾರಲು ಬಂದಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಆನ್‌ಲೈನ್ ಹೂಡಿಕೆ; ₹ 16.92 ಲಕ್ಷ ವಂಚನೆ

ಬೆಂಗಳೂರು: ಆನ್‌ಲೈನ್ ಮೂಲಕ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡುವ ಆಮಿಷವೊಡ್ಡಿ ನಗರದ ಮಹಿಳೆಯೊಬ್ಬರಿಂದ ₹ 16.92 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಿ.ವಿ. ರಾಮನ್ ನಗರದ ನಿವಾಸಿಯಾಗಿರುವ 35 ವರ್ಷದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಜುಲೈ 5ರಂದು ಕರೆ ಮಾಡಿದ್ದ ಅಪರಿಚಿತ, 'ಎಸ್ಎಂಬಿಸಿಸಿಒ ಡಾಟ್ ಕಾಮ್ ಜಾಲತಾಣದಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುತ್ತದೆ' ಎಂದಿದ್ದ. ಅದನ್ನು ನಂಬಿದ್ದ ಮಹಿಳೆ, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರು.'

ಅಪರಾಧ ಸುದ್ದಿ



ಆರೋಪಿಗಳಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನ, ಚಿನ್ನದ ಸರ ಹಾಗೂ ಮೊಬೈಲ್‌ಗಳು

ಕದ್ದ ವಾಹನದಲ್ಲಿ ಸುತ್ತಾಡಿ ಸರ ಕಳವು

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕದ್ದು, ಅದರಲ್ಲೇ ಸುತ್ತಾಡಿ ಚಿನ್ನದ ಸರ ಕಳವು ಮಾಡುತ್ತಿದ್ದ ಆರೋಪದಡಿ ಮೂವರನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಗಜೇಂದ್ರ, ರವಿಕುಮಾರ್ ಹಾಗೂ ಕೃಷ್ಣ ಬಂಧಿತರು. ಅವರಿಂದ ₹ 3.34 ಲಕ್ಷ ಮೌಲ್ಯದ ಎರಡು ಚಿನ್ನದ ಸರ, 6 ಮೊಬೈಲ್ ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯಲ್ಲಿ ಜುಲೈ 31ರಂದು ಮಹಿಳೆಯೊಬ್ಬರ ಚಿನ್ನದ ಸರವನ್ನು ಆರೋಪಿಗಳು ಕಿತ್ತೊಯ್ದಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡು ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ತಿಳಿಸಿವೆ.

'ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಆರೋಪಿಗಳು ಕದಿಯುತ್ತಿದ್ದರು. ಅದರಲ್ಲೇ ನಗರದಲ್ಲಿ ಸುತ್ತಾಡುತ್ತಿದ್ದರು. ರಸ್ತೆಯಲ್ಲಿ ನಡೆದುಕೊಂಡು ಹೋಗುವವರ ಚಿನ್ನದ ಸರ ಹಾಗೂ ಮೊಬೈಲ್ ಕಿತ್ತೊಯ್ಯುತ್ತಿದ್ದರು' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಡ್ರಗ್ಸ್ ಮಾರಾಟ; ಇಬ್ಬರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸುತ್ತಿದ್ದ ಆರೋಪಿಗಳು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ ₹ 3.50 ಲಕ್ಷ ಮೌಲ್ಯದ 55 ಗ್ರಾಂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಂಧಿತರು, ಮಡಿಕೇರಿ ಹಾಗೂ ಕೇರಳ ನಿವಾಸಿಗಳು. ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಒಬ್ಬ ಆರೋಪಿ, ಮೊಬೈಲ್ ಅಂಗಡಿ ಇಟ್ಟುಕೊಂಡಿದ್ದ. ಅಕ್ರಮವಾಗಿ ಹಣ ಸಂಪಾದಿಸಲು ಆರೋಪಿಗಳು ಡ್ರಗ್ಸ್ ಮಾರಲಾರಂಭಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

₹ 5 ಸಾವಿರ ಪಡೆಯಲು ₹ 3 ಲಕ್ಷ ಕಳೆದುಕೊಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೋನ್ ಪೇ ಮೂಲಕ ಸಂದಾಯವಾಗದ ₹ 5 ಸಾವಿರವನ್ನು ವಾಪಸು ಪಡೆಯಲು ಹೋಗಿ ನಗರದ ನಿವಾಸಿಯೊಬ್ಬರು ₹ 3 ಲಕ್ಷ ಕಳೆದುಕೊಂಡಿದ್ದಾರೆ.

ವಂಚನೆಗೀಡಾಗಿರುವ ಮಹದೇವಪುರದ 29 ವರ್ಷದ ವ್ಯಕ್ತಿ ದೂರು ನೀಡಿದ್ದಾರೆ. ಆರೋಪಿ ರಾಜು ರೈ ಎಂಬಾತನ ವಿರುದ್ಧ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೂರುದಾರ ತಮ್ಮ ಸ್ನೇಹಿತನಿಗೆ ಫೋನ್‌ಪೇ ಮೂಲಕ ₹ 5 ಸಾವಿರ ವರ್ಗಾಯಿಸಿದ್ದರು. ಆದರೆ, ಸ್ನೇಹಿತನಿಗೆ ಹಣ ಸಂದಾಯವಾಗಿರಲಿಲ್ಲ. ಸಂದಾಯವಾಗದ ಹಣವನ್ನು ವಾಪಸು ಪಡೆಯಲು ದೂರುದಾರ ಮುಂದಾಗಿದ್ದರು. ಗೂಗಲ್ ಜಾಲತಾಣದಲ್ಲಿ ಹುಡುಕಾಡಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಾಯವಾಣಿ ನಂಬರ್ ಪಡೆದಿದ್ದರು. ಅದಕ್ಕೆ ಕರೆ ಮಾಡಿ ಮಾತನಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬ್ಯಾಂಕ್ ಪ್ರತಿನಿಧಿಗಳ ಸೋಗಿನಲ್ಲಿ ಮಾತನಾಡಿದ್ದ ಆರೋಪಿ, ಬ್ಯಾಂಕ್ ಖಾತೆ ವಿವರ ಹಾಗೂ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ಪಡೆದಿದ್ದ. ಅದಾದ ನಂತರ ದೂರುದಾರರ ಎಸ್‌ಬಿಐ ಖಾತೆಯಿಂದ ಹಂತ ಹಂತವಾಗಿ ₹ 3 ಲಕ್ಷ ವರ್ಗಾಯಿಸಿಕೊಂಡಿದ್ದಾನೆ. ಹಣವನ್ನು ವಾಪಸು ಕೇಳಿದ್ದಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಮೊಬೈಲ್ ಸಹ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ. ಈ ಸಂಗತಿ ದೂರಿನಲ್ಲಿದೆ' ಎಂದೂ ಮೂಲಗಳು ತಿಳಿಸಿವೆ.

'ಆರೋಪಿಗಳು, ಗೂಗಲ್‌ನಲ್ಲಿ ಎಸ್‌ಬಿಐ ಸಹಾಯವಾಣಿ ಸಂಖ್ಯೆಯನ್ನು ತಿದ್ದುಪಡಿ ಮಾಡಿದ್ದಾರೆ. ಅದನ್ನು ನಂಬಿ ಕರೆ ಮಾಡುವ ಜನರಿಗೆ ವಂಚನೆ ಮಾಡುತ್ತಿದ್ದಾರೆ. ಈ ಬಗ್ಗೆ ಗೂಗಲ್ ಆಡಳಿತ ಮಂಡಳಿಗೂ ಇ-ಮೇಲ್ ಕಳುಹಿಸಲಾಗಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಬಾಲಗಂಗಾಧರನಾಥ ಮೇಲ್ಸೇತುವೆಯ ಇಳಿಜಾರು ರಸ್ತೆ ಅಭಿವೃದ್ಧಿ

ಗಡುವಿಗೆ ಮುನ್ನವೇ ವೈಟ್‌ಟಾಪಿಂಗ್ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯು ಕೆ.ಆರ್.ಮಾರುಕಟ್ಟೆ ಬಳಿ ಬಾಲ ಗಂಗಾಧರನಾಥ ಸ್ವಾಮೀಜಿ ಮೇಲ್ಸೇತುವೆಯ ಇಳಿಜಾರಿನಿಂದ ಎಸ್.ಜೆ.ಪಿ ರಸ್ತೆವರೆಗಿನ ವೈಟ್ ಟಾಪಿಂಗ್ ಮತ್ತು ಅಡ್ಡಮೋರಿ ಅಭಿವೃದ್ಧಿ ಕಾಮಗಾರಿಯನ್ನು ಗಡುವಿಗೆ ಮುನ್ನವೇ ಪೂರ್ಣಗೊಳಿಸಿದೆ.

ಕಾಮಗಾರಿ ಪೂರ್ಣಗೊಳಿಸಲು 15 ದಿನಗಳ ಕಾಲಾವಕಾಶ ನೀಡಲಾಗಿತ್ತು. ಆದರೆ, ಬಿಬಿಎಂಪಿ 10 ದಿನಗಳೊಳಗೆ ಕಾಮಗಾರಿ ಮುಗಿಸಿ ಇಲ್ಲಿನ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟಿದೆ.

ಮಳೆಯಾದ ಸಂದರ್ಭದಲ್ಲಿ ಈ ಮೇಲುಸೇತುವೆ ಇಳಿಜಾರಿನ ಬಳಿ ನೀರು ನಿಂತು ಸಮಸ್ಯೆ ಉಂಟಾಗುತ್ತಿತ್ತು. ಅದನ್ನು ನಿವಾರಿಸಲು ಇಲ್ಲಿನ ಮೇಲ್ಸೇತುವೆ ಇಳಿಜಾರಿಗೆ ವೈಟ್‌ಟಾಪಿಂಗ್ ನಡೆಸಲು ಮತ್ತು ಅಡ್ಡಮೋರಿಯನ್ನು ನಿರ್ಮಿಸಲು ಬಿಬಿಎಂಪಿ ನಿರ್ಧರಿಸಿತ್ತು. ಸಂಚಾರ ವಿಭಾಗದ ಪೊಲೀಸರು ಈ ಕಾಮಗಾರಿಯನ್ನು 15 ದಿನಗಳ ಒಳಗೆ ಪೂರ್ಣಗೊಳಿಸಬೇಕು ಎಂಬ ಷರತ್ತು ವಿಧಿಸಿ ಇಲ್ಲಿನ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲು ಅನುಮತಿ ನೀಡಿದ್ದರು. ಈ ಕಾಮಗಾರಿಯನ್ನು ಆ. 07ರಂದು ಪ್ರಾರಂಭಿಸಲಾಗಿತ್ತು.


ಪ್ರಥಮ ಹಂತದಲ್ಲಿ ಮೇಲ್ಸೇತುವೆ ಹತ್ತಿರದ ಅಡ್ಡಮೋರಿಯನ್ನು ಮಾತ್ರ ಅಭಿವೃದ್ಧಿ ಪಡಿಸಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅಧಿಕಾರಿಗಳು ಸಿದ್ಧತೆ ಮಾಡಿಕೊಂಡಿದ್ದರು.

‘ಕಾಮಗಾರಿಯನ್ನೂ ನಡೆಸುವಾಗ ಎಸ್‌ಜೆಪಿ ರಸ್ತೆ ಜಂಕ್ಷನ್ ಹತ್ತಿರ ರಸ್ತೆಗೆ ಅಡ್ಡಲಾಗಿ ಮತ್ತೊಂದು ರಾಜಕಾಲುವೆ ಹಾದು ಹೋಗಿರುವುದು ಕಂಡು ಬಂದಿತ್ತು. ಅದನ್ನೂ ಅಭಿವೃದ್ಧಿಪಡಿಸಿಕೊಂಡು ವೈಟ್ ಟಾಪಿಂಗ್ ಕಾಮಗಾರಿಯನ್ನು ಪೂರ್ಣಗೊಳಿಸ ಲಾಗಿದೆ. ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೂ ಅನುವು ಮಾಡಿಕೊಡಲಾಗಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.



ನಗರದ ಕೆ.ಆರ್‌ಮಾರುಕಟ್ಟೆಯ ಬಳಿ ಬಾಲಗಂಗಾಧರನಾಥ ಮೇಲ್ಸೇತುವೆಯ ಇಳಿಜಾರಿನಿಂದ ಎಸ್‌ಜೆಪಿ ರಸ್ತೆವರೆಗೆ ವೈಟ್‌ಟಾಪಿಂಗ್ ಕಾಮಗಾರಿಯು ಪೂರ್ಣಗೊಂಡಿದ್ದು, ಈ ರಸ್ತೆಯಲ್ಲಿ ಮಂಗಳವಾರ ವಾಹನ ಸಂಚಾರ ಪುನರಾರಂಭಗೊಂಡಿತು

‘ಹಳ್ಳದ ದಂಡಿ ಮತ್ತು ಕಳ್ಳಿ ಸಾಲು’ ಹಸ್ತಪ್ರತಿ ಆಯ್ಕೆ



ಧೀರೇಂದ್ರ ನಾಗರಹಳ್ಳಿ

ಆಲಮೇಲ (ವಿಜಯಪುರ): ಬೆಂಗಳೂರಿನ ಧೀರೇಂದ್ರ ನಾಗರಹಳ್ಳಿ ಅವರ ‘ಹಳ್ಳದ ದಂಡಿ ಮತ್ತು ಕಳ್ಳಿ ಸಾಲು’ ಹಸ್ತಪ್ರತಿಯು ‘ಬೆರಗು’ ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ.

‘ಪ್ರಶಸ್ತಿ ₹5 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಆ.30ರ ಪುಸ್ತಕ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಗೌರವಿಸಲಾಗುತ್ತದೆ. ‘ಬೆರಗು ಪ್ರಕಾಶನ’ದ 2021ರ ಸಾಲಿನ ಸ್ಪರ್ಧೆಗೆ 43 ಹಸ್ತಪ್ರತಿಗಳು ಬಂದಿದ್ದವು’ ಎಂದು ಪ್ರಕಾಶನದ ಸಂಚಾಲಕಿ ವಿಜಯಲಕ್ಷ್ಮಿ ಕತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಎಪಿ ಕಚೇರಿ ತೆರೆದು ಮಾನಸಿಕವಾಗಿ ತೊಂದರೆ: ಕಟ್ಟಡ ಮಾಲೀಕ ಆರೋಪ

ಪ್ರಜಾವಾಣಿ ವಾರ್ತೆ

ಕೆ.ಆರ್ ಪುರ: ‘ವಾಣಿಜ್ಯ ಬಳಕೆಗೆಂದು ಮಳಿಗೆ ಬಾಡಿಗೆ ಪಡೆದು ರಾಜಕೀಯ ಉದ್ದೇಶಕ್ಕಾಗಿ ಆಮ್ ಆದ್ಮಿ ಪಕ್ಷದ ಕಚೇರಿ ತೆರೆದು ಮಾನಸಿಕವಾಗಿ ತೊಂದರೆ ಕೊಡುತ್ತಿದ್ದಾರೆ’ ಎಂದು ಕಸವನಹಳ್ಳಿಯಲ್ಲಿ ಬಾಡಿಗೆ ನೀಡಿರುವ ಕಟ್ಟಡದ ಮಾಲೀಕ ಶ್ರೀಕಾಂತ್ ಅವರು ಆಮ್ ಆದ್ಮಿ ಪಕ್ಷದ ಕ್ಷೇತ್ರ ಘಟಕದ ಅಧ್ಯಕ್ಷ ಮೃತ್ಯುಂಜಯ ಅವರ ವಿರುದ್ಧ ಆಕ್ರೋಶ ಹೊರಹಾಕಿದರು.

‘ಆಮ್ ಆದ್ಮಿ ಪಕ್ಷ’ದ ಕಚೇರಿಗೆ ಬಾಡಿಗೆ ನೀಡಿದ್ದಕ್ಕಾಗಿ ಮಹದೇವಪುರದ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಕಟ್ಟಡದ ಮಾಲೀಕರಿಗೆ ಬೆದರಿಕೆ ಒಡ್ಡಿದ್ದಾರೆ ಎನ್ನುವುದು ಶುದ್ಧ ಸುಳ್ಳು. ಶಾಸಕರಿಂದ ಮತ್ತು ಮುಖಂಡರಿಂದ ಯಾವುದೇ ಕರೆಗಳು ಬಂದಿಲ್ಲ. ಅಶೋಕ ಮೃತ್ಯುಂಜಯ ಎಂಬ ಮೂರನೇ ವ್ಯಕ್ತಿ ಬಂದು ವಾಣಿಜ್ಯ ವ್ಯವಹಾರಕ್ಕಾಗಿ ಅಂಗಡಿ ಬಾಡಿಗೆ ಬೇಕು ಎಂದು ಕೇಳಿಕೊಂಡಿದ್ದರಿಂದ ಕಟ್ಟಡ ಬಾಡಿಗೆ ನೀಡಲಾಗಿತ್ತು’ ಎಂದು ಹೇಳಿದರು.

‘ಆಗಸ್ಟ್ 15ರಂದು ಆಮ್ ಆದ್ಮಿ ಪಕ್ಷದ ನೂರಕ್ಕೂ ಹೆಚ್ಚು ಕಾರ್ಯಕರ್ತರೊಂದಿಗೆ ನಮ್ಮ ಗಮನಕ್ಕೂ ಬಾರದೆ ಕಚೇರಿ ತೆರೆಯಲಾಗಿದೆ. ಬೆದರಿಕೆ ಇದೆಯೆಂದು ಬೆಳ್ಳಂದೂರು ಠಾಣೆಯಲ್ಲಿ ಎಎಪಿಯವರು ದೂರು ನೀಡಿದ್ದಾರೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಈ ವಿಷಯಕ್ಕೂ ಸ್ಥಳೀಯ ಶಾಸಕರಿಗೂ ಯಾವುದೇ ಸಂಬಂಧವಿಲ್ಲ. ಆಮ್ ಪಕ್ಷದ ಕಾರ್ಯಕರ್ತರಿಂದ ತೊಂದರೆ ಆಗಿದೆ’ ಎಂದು ಸ್ಪಷ್ಟಪಡಿಸಿದರು.

ಪ್ರಥಮದರ್ಜೆ ಭೂಮಾಪಕ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು: ಭೂಮಾಪನಾ, ಕಂದಾಯ, ಭೂದಾಖಲೆ ಹಾಗೂ ಭೂ-ಸಂಬಂಧಿತ ನ್ಯಾಯಾಲಯದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಭೂ ದಾವೆಗಳ ಕರ್ತವ್ಯ ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ‘ಪ್ರಥಮ ದರ್ಜೆ ಭೂಮಾಪಕ’ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವವರು ಅರ್ಜಿ ಸಲ್ಲಿಸಬಹುದು.

ಗುತ್ತಿಗೆ ಅವಧಿ ಒಂದು ವರ್ಷ. ಅರ್ಜಿ ಸಲ್ಲಿಸಲು ಆ.31 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.in ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Receptionist/ Secretary

WANTED TELECALLERS, age between 18 to 35 years, good communication skills, Females only. CALL: 7411023236.

Hotel

CEO/ MANAGER Wanted, experienced only for Cloud Kitchen and Cooks/ Steward/ Captain, Contact- SIMHA- 8867255121.

Multiple Vacancy

WANTED
Leading Healthcare Service Provider having 14 Shops in Karnataka and Telangana.
Looking for the positions
Female Graduates
Kannada, English fluency Excellent Communication skills
Female Customer Care
3 Nos, 2 yr exp
Female Counsellor
3 Nos, 2 yr exp
Vacancies at Jayanagar Indiranagar, Kammanahalli Marathahalli
Accounts Executive
Male / Female -3 Nos
B.Com Graduate, Retail GST Tally exp must.
2 yr Exp All Positions
CTC up to 25K
Data Entry Operator
Tally - 02 Nos, 1 yr exp
14,000 - 16,000 CTC
Vacancies at Indiranagar
Office Boy - 2 Nos
Salary 12,000-14,000
Vacancy at Vijayanagar
Walk-In Interview
Date: 18,19 August
Time: 11 am to 3 pm
No 13, 8th Cross, 13th Main, Indiranagar, HAL II Stage, Bangalore-560008
Land mark : Opp Road to New Horizon School 100 ft Road
Mob: 9606956502

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers -7676760299/7676760399

A Leading Real Estate Developer
is looking for Independent capacity, Dynamic, Aggressive, Dedicated, Experienced/Retired Candidates for Massive Layout Township Projects and Apartment Projects :-
1. CFO - C A
2. Senior Accountant
3. Liaison - Revenue – Experience / Retired
4. Advocate Legal – Office Matter + Court Matter
5. Engineer - Layout + Apartment Development - Independent capacity
6. Marketing - General Manager- Expertise in Layout Sites / Apartment

Mail your latest resumes to:
associates.blr10@gmail.com

Wanted

WANTED ELECTRICIAN/ Helper with 5 years experience Salary: Rs. 15K +, Bengaluru. Contact: 9845136522

Placement Bureaus/Consultants

WANTED HR, Accountants, Diploma/Degree Holders, Sales, 8183046799, 23443555. anzconsultants@yahoo.co.in

B.N.M. Institute of Technology
An Autonomous Institution under VTU
Wanted
Experienced Persons / Caterers For running Mess Services in the Boys and Girls Hostel.
For details contact:
Administration Office, 27th Cross, 12th Main, Banashankari II Stage, Bengaluru - 560070

Walk-in

Surabhi Chits Ltd., (Govt. Licensed Company)
We are one of the leading chit company having 10 branches in Bangalore City.
Requires the following personnel to its Basavanagudi Branch.
1. Marketing Executive
2. Collection Executive
Walk-in-Interview on 18.08.2021 and 19.08.2021 from 11 AM to 2 PM and Apply with Resume
E-Mail- surabhidvg2019@gmail.com
#34, Akshayalakshmi Complex, 1st Floor, DVG Road, Bangalore-560 004.
Mobile: 73492 13385

General

WANTED (MALE) OFFICE ASSISTANTS & HELPER Bommanahalli (Bangalore) Mob:9008755585/ 9344168305 Email: starsilks@gmail.com

Part-Time Jobs

REQUIRED TYPISTS, part time or full time, to an Advocate Office at PRABHAT Complex, K.G.Road, Bengaluru-09.Contact K.Jayaram, 9008951266/ 9164164284/ 08029603846.

Engg/ Production Technical

WANTED B.E Mechanical Engineer Trainees Fresher's for an Aircraft Component Manufacturing Industry. Training period 1YEAR, Stipend 0-6 Months- Rs.12000, 7-12 Months Rs.14000. Mail Your resume to mail@ayyappa-cnc.com

A LEADING Electrical Contracting Firm is in need of Electrical ENGINEERS and Billing candidates in Bangalore with 3 to 5 years experience. Email: info@naseer.co.in

JOB OPPORTUNITY, MNC Looking for Female Graduates, 30 To 55yrs Old. Salary 2Lakhs/Per Annum: 9483918226

Teachers/ Professors

BLOSSOM SCHOOL, Bagalgunte requires H.M, for Primary & Secondary State Board School, Near Nagasandra Metro Station, Bagalgunte Bangalore-560073. 9886497910

JANASEVA VIDYA KENDRA
Boys Residential School
Channenahalli, 20th K.M. Magadi Main Road, Bangalore-562130 Email: 123jsvkhighschool@gmail.com
WANTED TEACHERS
M.Sc, OR B.Sc. B.Ed (PCM) MA. or B.A., B.Ed., English, Social & Kannada (English & Kannada Medium Both) B.P Ed (PE Teachers)
Walk-in Interview
on 21.08-2021 Saturday at 10 AM.
At Janaseva Vidyakendra.
Contact: 7022428464 / 9480609078
-Hon Secretary.

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

WANTED TRAINED LADY TEACHERS to teach ENGLISH and MATHS in English Medium Primary School. Walk-in Interview on 19-8-2021 between 11.30AM and 1.30PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 77833-77387

S.S.R GROUP of Institutions, Recruitment for LECTURERS in English, Hindi, Computer Science, Commerce and Management. Contact : 9480885702 / 9606900576 send your resume to: ssrtrust@gmail.com #25/4, Kyalasanahalli, Kothanur Post, Bengaluru- 560077

TEACHERS WANTED 1st To 10th Std Teachers, English Medium AllSubjects SAGAR-CONVENT Kanakapura Main Road Bangalore-82 Near APS EngineerCollege, Good Salary & Vehicle Facility:-9342552428

SBE & CT
HARWARD Pre-University College
Dasanapura, Tumkur Road, Bangalore North – 562123
www.harwardinstitutions.com
WANTED INTEGRATED LECTURERS
Mathematics - (M.Sc)
Physics- (M.Sc)
Computer Science - (MCA)
(Min 5 years experience in coaching NCERT, NEET, JEE, KCET Syllabus)
HARWARD INTERNATIONAL CBSE SCHOOL
Affiliated No.830335
PGT, TGT & NTT (All Subjects)
DTP Operator & Accountant
(School experienced)
Please mail your resume to infoharwardints@gmail.com
Ph:9880112833/8494915429 9945230286 . 080-29723540

MOUNT CARMEL ENGLISH SCHOOL
C.A. Site No.3, 12th cross, Ist stage, Ideal Homes, Rajarajeshwari Nagar, Bangalore-560098.
Phone :080- 28602294/95
mountcarmel.rrnagar@gmail.com
Wanted qualified teachers for Primary, Middle and High school for Science, Maths, English and Social Science subjects. Candidates should have Masters /Bachelor's Degree with B.Ed /D.Ed Training from recognized universities. Freshers can also apply. **Walk in interview with original documents on 21/08/2021 Saturday at 11 A.M in the school premises.** Sd/- Secretary

GURUKULA INTERNATIONAL School requires English, Maths, Hindi Teachers for Primary and High School and Lady Accountant with Kannada Typing. Near Magadi Road, Metro Station, Bangalore-23. 7829338292, 7676676629

WANTED LADY Teachers for High School Hindi & Maths Hebbal Kempapura, Coffee Board-Layout, Ph:22330003, 9008981637

Marketing & Sales

SALES OFFICERS
Manufacturers of Industrial & Automobiles oils requires Experienced & Result Oriented Candidates for Bangalore office.
✓ Kannada knowledge must.
✓ Must possess Two Wheeler
✓ Good communication skills.
✓ Secure Job, Salary + Incentives.
Appro Lubes Pvt. Ltd
Contact: 9743416400.
Website: www.approlubes.net
Mail: contact@approlubes.net

REQUIRED SALES Executive for Health Product located in R R Nagar, 2 Wheeler must, Fresher / Experience, Sal + Incentive + Convenience. Call : 9742543188

Hospital & Medical Jobs

A Multispecality Hospital in Rajajinagar
Requires the following:
1. PHYSICIAN - A full time with post graduate qualification in medicine.
2. STAFF NURSES - with GNM and BSC qualification.
Salary commensurates with qualification and efficiency.
Please contact
9611183918, 9448978571

APPLICATIONS ARE invited for 2 Seats each (RGUHS RECOGNIZED) For TERM SEPTEMBER 2021 at 'RANGADORE MEMORIAL HOSPITAL', Bangalore. FELLOWSHIP IN 1)PERINATAL MEDICINE- POST MD/DCH/DNB 2)FETO-MATERNAL MEDICINE- POST MD/DNB/MRCOG/DGO 3)HIGH RISK PREGNANCY- POST MD/DNB/MRCOG/DGO 4)PEDIATRIC NEUROLOGY- POST MD /DNB 5)PEDIATRIC INTENSIVE CARE- POST MD/DNB. Candidates to apply with CV BY 28th AUGUST 2021. Email: academics@rmhospital.in Phone: 080-26983388 (between 10 to 4pm)

EDUCATIONAL

Admission

ONE SITTING: B.Tech/ Diploma/ MBA/MCA/M.Sc/ M.Com/BBA/BCA/B.Sc/B.Com /LL.B/D.Pharm/ B.Pharm/ B.Ed. Recognised Govt. Genuine students need contact.Asha Institute, Bangalore. Ph:9448460103/ 7093438248

BUSINESS

Business Offers

General

BUSINESS OFFERS
WE ARE READY TO INVEST LONG TERM PROJECTS ALL OVER THE WORLD. MAIL TO:- developers10@gmail.com

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PUBLIC NOTICE

PUBLIC NOTICE

My client intends to purchase the Property mentioned in the Schedule here below from its Owners; **Lakshmanasandra Vasudevmurthy Ravi (HUF),** consisting of its members; **(1) Shri. Lakashmanasandra Vasudevmurthy Ravi,** son of Late L. S. Vasudeva Murthy **(2) Smt. Spoorthi Ravi,** wife of Shri. Yasaswi Vempati, **(3) Dr. Monisha Ravi,** wife of Shri. Nakul Dumblekar and **(4) Smt. Mamatha Ravi,** wife of Shri. Lakashmanasandra Vasudevmurthy Ravi. The Owners represent that they have good marketable, right, title and interest to the Schedule Property and that apart from them there are no other person/s having any right or claim over the Schedule Property and that they have not entered into any Agreements/Memorandum of Understanding etc., with any third party. The Owner further represents that they have not mortgaged, created any lien, or encumbered the Schedule Property or any part thereof in any manner, to any person/s. Any person/s having objection/s or claims shall with documentary evidence lodge their objection(s)/claim(s) **within ten (10) days** from the date of publishing this notice with the undersigned, failing which my client shall proceed with the above-mentioned transactions.

SCHEDULE

Item No.1
All that piece and parcel of the residential property bearing No. 4/2, (old Nos. 4/2 and 4/3 much earlier bearing site Nos. 759/B and No. 759/C) comprising a residential building, situated at 2nd Main, ‘E’ Block, Subramanya Nagar, in BBMP Ward No.66 Bengaluru, measuring East to West (48+50)/2 feet and North to South 57.6 feet, measuring in total 2822.4 square feet and is bounded on the
East by : Property bearing Site No.815/A and 815/B
West by : Road
North by : Property bearing Site No. 760
South by : Property bearing Site No.759/A

Item No.2
All that piece and parcel of the residential property bearing No.81 (old No. 815/A), comprising a residential building, situated at 2nd Main, ‘E’ Block, Subramanya Nagar, in BBMP Ward No.66 , Bengaluru, measuring East to West (49.3+50)/2 feet and North to South (26+24.6)/2 feet, measuring in total 1253 square feet and is bounded on the
East by : Road
West by : Property bearing Site No. 759-C
North by : Property bearing Site No. 815
South by : Property bearing Site No. 815/B

Jayanth M. Pattanshetti
Advocate,
102, Ground Floor,
“Rams Infantry Manor”,
Infantry Road,
Bengaluru-560001.
Ph.: 080 41238516 / 41238367
Place : Bengaluru
Date: 17-08-2021

REAL ESTATE SELLING

Flat

Rajajinagar

'LUXURY RESIDENCES- JUST PAY 30LAKHS' LIMITED OFFER- (Pay10% now balance on possession) 'New Skyline Apartments' 3&4BHK. Price @2.90Crs onwards. Booking call: 9845200577/ 9845055454

EDUCATION SUCCESS

LORD SRI KRISHNA INTERNATIONAL EDUCATION TRUST (R)
SRI KRISHNA GROUP OF INSTITUTIONS
ITI Layout, (Near Vidyapeeta) BSK III stage, Bengaluru 560085
ADMISSIONS OPEN 2021-22
PUC
Science: PCMB / PCME / PCMCs
Commerce: SEBA / GEBA / EBACs/ MSBA
DEGREE
B.Com (Day & Evening)
BBA & BCA
PG PROGRAMS
M. Com & MBA
- PU Programs are affiliated to PUE Board with ‘A’ Grade
- UG & PG Programs are Permanently affiliated to Bengaluru City University [BCU]

LOOK UP AIM HIGH
PUC 2020-21 TOPPERS
100% RESULTS
RAGHAVI. D Science 95%
HARPITHA PRAKASH Science 94%
VANDANA C Science 93%
SHREYA GUPTA Science 93%
PRIYA T.S Commerce 95%
DIVYA B.G Commerce 93%

For Admissions Contact: 080 26796020 (Office)
PUC - 9986126134, 9731298744
Degree - 9945330589, 9844784320
PG - 9663890999
PUC - www.skpuc.edu.in
Degree - www.skdc.edu.in

Sites

Anjanapura

SALE BDA 'E' facing 40x60 Site, Opp Park, 6th Block, Anjanapura Layout. Call Verna Developers, MG Road. 9916310226/ 9611055416. (Brokers Excuse)

Kumaraswamy Layout

BDA 30X40 Intermediate Vacant 2nd Stage, Near 15F/G Last Stop, ISKCON South Samaruddi, Genuine Buyers Call 9972095359 Brokers Excuse.

Sunkadakatte

SUNKADKATTE NEAR Anjali School South Facing 30X50 Available for Sale. Rate 5300/Sqft (Negotiable) Contact: 9880439138

PROPERTY CORNER

UPKAR DEVELOPERS
wants Approved/Converted/Convertible good location clear lands surrounding Bangalore/Hosur/Mysore Road for Purchase/Joint Venture.
BULK SITES AVAILABLE
Ready available bulk approved & developed gated sites with all facilities sale. Only Genuine Parties kindly contact/e-mail:
98451 31515 /
cmd@upkardevelopers.com

PERSONAL

Change of Name

I, PATHANGI GNANAPRASOONA have changed my name to PANTHANGI GNANAPRASOONA vide affidavit dated: 17/8/2021 Before Notary C.Srinivas Bangalore.

JC672072X, SUB/CLK, Ravi Chandran P, ASC records(s), daughter name record(s), NISHA PREETHI ABHISAKHA instead of R. NISHA PREETHI ABISEHA notary Meer Hassan, Bangalore.

I, PRACHITI BAHADURI D/o. Jagdish Mahadeo Bahaduri, R/a #402, Silver Cloud Apartments, Royal Enclave Layout, Srirampura, Bengaluru- 560064 Have Changed My Name to BAHADURI PRACHITI JAGDISH vide Affidavit Dated: 17.08.2021 sworn before Notary L.B. Anasuyamma, Bengaluru-13.

I SHYAMALA w/o JC-197040X Ex Sub Maj/Hony Lt Surendra Ganeshkar Residing at No.5, Shamal Nivas, 2nd Cross, Sri Sai Layout, Cauvery Nagar, Horamavu, Agara Road, Bangalore-560043 have changed my name to Shamala Surendra Ganeshkar and amended my date of birth from 02.02.1958 to 02.02.1957 due to Aadhar card, Pan card and vide affidavit dated 7.08.2021 before Notary Uday Kumar K Bangalore

JC672715K, SUB/MT, Prem Singh Bhandari, 2ATC, mother name service record DUMESHWARI DEVI instead of DHUMESHVARI notary KV.Mani, Bangalore.

JC672072X, SUB/CLK, Ravi Chandran P, ASC records(s), son name record(s), NITHIN ABHISHEK instead of R. NITHIN ABHISHEK notary KV.Mani, Bangalore.

I, LAKSHMAMMA W/o Madan R/at No.23-1, 100 Feet Road, New Binnamangala, Indiranagar, Bangalore - 560038. have changed my name to LAKSHMI vide affidavit dated 17.08.2021 before notary A.R Muneer Ahmed,Bangalore.

B SNEHA W/o. 6495007L, HAV/ASH, Betala Ravi, Vill/Post: Golabandha Berhampur, Ganjam, Odisha, my name B SNEHA to BETALA SNEHA LATA, notary KV.Mani, Bangalore.

I, K. Neena Kishore, W/o. LT. Col. K.G. Kishore, 68 years, R/at 24/2, 5th Cross, Deep Towers, Athmananda Colony, Sultanpalya, R.T.Nagar Post, Bengaluru 560032, have changed my name to KONGANDA NEENA KISHORE, Vide affidavit dated 12/08/2021 Sworn before the 2nd Addl. Chief Metropolitan Magistrate at Bengaluru.


ಕಾಂಗ್ರೆಸ್ ನಾಯಕರಾದ ಬಿ.ಕೆ. ಹರಿಪ್ರಸಾದ್, ಎಲ್. ಹನುಮಂತಯ್ಯ ಕಿಡಿ

ಬಿಜೆಪಿಯಿಂದ ಸುಳ್ಳು ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸತ್ ಕಾರ್ಯಕಲಾಪ ನಡೆಯಲು ಬಿಡದೆ ವಿರೋಧ ಪಕ್ಷಗಳು ದೊಡ್ಡ ಅಪರಾಧ ಮಾಡಿವೆ. ಇದು ದೇಶದ್ರೋಹ ಎಂಬ ರೀತಿಯಲ್ಲಿ ಬಿಜೆಪಿ ನಾಯಕರು ಬಿಂಬಿಸುತ್ತಿದ್ದಾರೆ. ಅವರು ಸತ್ಯಾಂಶ ಮರೆಮಾಚಿ, ಸುಳ್ಳು ಪ್ರಚಾರ ಮಾಡುತ್ತಿದ್ದಾರೆ' ಎಂದು ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಎಲ್. ಹನುಮಂತಯ್ಯ ಮತ್ತು ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ



ಹರಿಪ್ರಸಾದ್



ಹನುಮಂತಯ್ಯ

ಈ ಇಬ್ಬರೂ, 'ಕೇಂದ್ರ ಸರ್ಕಾರ ತನ್ನ ಜವಾಬ್ದಾರಿ ನಿರ್ವಹಿಸಲು ವಿಫಲವಾಗಿದೆ. ಸರ್ಕಾರ ತನ್ನ ಹಟದಲ್ಲಿ ಗೆದ್ದಿರಬಹುದು. ಆದರೆ, ನೈತಿಕತೆ ಕಳೆದುಕೊಂಡಿದೆ. 200 ಬಾಡಿಗೆ ಮಾರ್ಷಲ್‌ಗಳನ್ನು ಕರೆದುಕೊಂಡು ಬಂದು ಸಂಸತ್ ನಡೆಸಲಾಗಿದೆ. ಮಹಿಳಾ ಸಂಸದರ ಮೇಲೆ ಹಲ್ಲೆ ನಡೆಸಲಾಗಿದೆ. ಈ ರೀತಿ ಸದನ ನಡೆಸುವ ಸ್ಥಿತಿ ನಿರ್ಮಾಣವಾಗಿದೆ ಎಂದರೆ ಪ್ರಜಾಪ್ರಭುತ್ವ ವ್ಯವಸ್ಥೆ ಜೀವಂತವಾಗಿದೆಯೇ' ಎಂದು ಅವರು ಪ್ರಶ್ನಿಸಿದರು.

'ಪೆಗಾಸಸ್ ತಂತ್ರಾಂಶ ಮೂಲಕ ಕದ್ದಾಲಿಕೆ, ರೈತರ ಪ್ರತಿಭಟನೆ, ಬೆಲೆ ಏರಿಕೆ ವಿಚಾರವಾಗಿ ಚರ್ಚೆ ನಡೆಯಬೇಕು ಎಂದು ವಿರೋಧ ಪಕ್ಷಗಳು ನೋಟಿಸ್ ಕೊಟ್ಟಿದ್ದರೂ ಸರ್ಕಾರ ಚರ್ಚೆಗೆ ಮುಂದಾಗಲಿಲ್ಲ. ಕೇಂದ್ರ ಸರ್ಕಾರ ಪೆಗಾಸಸ್ ಮೂಲಕ ಕದ್ದಾಲಿಕೆ ಮಾಡಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾದುದು' ಎಂದು ಹನುಮಂತಯ್ಯ ಅವರು ದೂರಿದರು.

ವಾಮಮಾರ್ಗದ ಮೂಲಕ ಅಧಿಕಾರಕ್ಕೆ: 'ಲೋಕಸಭೆ ಹಾಗೂ ರಾಜ್ಯಸಭೆ ಹೇಗೆ ನಡೆದಿದೆ ಎಂದು ದೇಶದ ಜನರು ನೋಡಿದ್ದಾರೆ. ವಾಮಮಾರ್ಗದ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ ತಮಗೆ ಬೇಕಾದ ಕಾನೂನು ತರಲು ಸದನವನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಸದನದ ಗೌರವ ಹಾಳು ಮಾಡಿರುವ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ. ನಾಲ್ಕು ವಾರಗಳ ಕಾಲ ನಡೆದ ಸದನದಲ್ಲಿ ಗೃಹ ಸಚಿವ ಅಮಿತ್ ಶಾ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಪೆಗಾಸಸ್ ಬಗ್ಗೆ ಚರ್ಚೆ ಮಾಡಲಿಲ್ಲ' ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

ಕಾಂಗ್ರೆಸ್ ನಾಯಕರ ವಿರುದ್ಧ ಮಾನನಷ್ಟ ಮೊಕದ್ದಮೆ:ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯಪಾನ ಮಾಡಿ ಕಾರು ಚಲಾಯಿಸಿ ಅಪಘಾತ ಮಾಡಿರುವುದಾಗಿ ಅಪಪ್ರಚಾರ ನಡೆಸುತ್ತಿರುವ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಆರ್. ಧ್ರುವ ನಾರಾಯಣ್ ಮತ್ತು ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ನಿರ್ಧರಿಸಿರುವುದಾಗಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ತಿಳಿಸಿದ್ದಾರೆ.

'ಸುಳ್ಳು ಕಥೆಗಳನ್ನು ಕಟ್ಟುವುದರಲ್ಲಿ ನಿಸ್ಸೀಮರಾಗಿರುವ ಕಾಂಗ್ರೆಸ್ ನಾಯಕರು ಪ್ರಚಾರಕ್ಕಾಗಿ ನನ್ನ ತೇಜೋವಧೆ ಮಾಡುತ್ತಾ ಬಂದಿದ್ದಾರೆ.



ಸಿ.ಟಿ. ರವಿ

ಮಾನನಷ್ಟ ಮೊಕದ್ದಮೆ ಹೂಡುವ ಸಂಬಂಧ ವಕೀಲರ ಜತೆ ಚರ್ಚಿಸಿದ್ದೇನೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ನಾನು ₹1,000 ಕೋಟಿ ಆಸ್ತಿ ಮಾಡಿದ್ದೇನೆ ಎಂದು ಕಾಂಗ್ರೆಸ್ ವಕ್ತಾರ ಬೃಜೇಶ್ ಕಾಳಪ್ಪ ಆರೋಪ ಮಾಡಿದ್ದಾರೆ. ಬೇನಾಮಿ ಆಸ್ತಿ ಇದ್ದರೆ ದಾಖಲೆಗಳನ್ನು ಮುಂದಿಟ್ಟು ಬಹಿರಂಗ ಚರ್ಚೆಗೆ ಬರಲಿ. ಅವರು ಹೇಳಿದ್ದು ನಿಜವಾಗಿದ್ದರೆ ಅವರಿಗೆ ಬೇನಾಮಿ ಆಸ್ತಿ ದಾನವಾಗಿ ನೀಡುತ್ತೇನೆ. ಈ ಸುಳ್ಳು ಆರೋಪಕ್ಕೆ ಸಂಬಂಧಿಸಿದಂತೆ ಬೃಜೇಶ್ ಅವರ ವಿರುದ್ಧವೂ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ' ಎಂದೂ ಅವರು ಹೇಳಿದ್ದಾರೆ.

'ಬೇನಾಮಿ ಆಸ್ತಿ ಮಾಡುವುದು ಕಾಂಗ್ರೆಸ್ ನಾಯಕರ ತಲೆಮಾರುಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ. ಅಕ್ರಮ ಆಸ್ತಿ ಸಂಪಾದಿಸಿ ಜೈಲು ಸೇರಿರುವ ಮತ್ತು ಜಾಮೀನಿನ ಮೇಲೆ ಇರುವ ಕಾಂಗ್ರೆಸ್ ನಾಯಕರ ಬಗ್ಗೆ ಬೃಜೇಶ್ ಕಾಳಪ್ಪ ಅವರಿಗೆ ಗೊತ್ತಿಲ್ಲವೇ? ತಾನು ಕಳ್ಳ ಪರರ ನಂಬ ಎನ್ನುವ ಕಾಂಗ್ರೆಸಿಗರ ಮನಸ್ಥಿತಿಯಲ್ಲಿ ತಮ್ಮಂತೆಯೇ ಎಲ್ಲರೂ ಕಳ್ಳರು ಎನ್ನುವ ಭಾವನೆಯಲ್ಲಿದ್ದಾರೆ' ಎಂದು ರವಿ ಟೀಕಿಸಿದ್ದಾರೆ.

ಮಿಜೋರಾಂ–ಅಸ್ಸಾಂ ಗಡಿಯಲ್ಲಿ ಮತ್ತೆ ಉದ್ವಿಗ್ನತೆ

ಐಜ್ವಾಲ್: ಅಸ್ಸಾಂ– ಮಿಜೋರಾಂ ಗಡಿಯಲ್ಲಿ ಮತ್ತೆ ಉದ್ವಿಗ್ನತೆ ಭುಗಿಲೆದ್ದಿದೆ. ಮಿಜೋರಾಂ ರಾಜ್ಯದ ನಾಗರಿಕರ ಮೇಲೆ ಅಸ್ಸಾಂ ಪೊಲೀಸ್ ಸಿಬ್ಬಂದಿ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಲಾಗಿದೆ. ಘಟನೆಯಲ್ಲಿ ಒಬ್ಬ ನಾಗರಿಕ ಗಾಯಗೊಂಡಿದ್ದಾರೆ ಎಂದು ಹೇಳಲಾಗಿದೆ.

ಜುಲೈ 26ರಂದು ಈ ಎರಡೂ ರಾಜ್ಯಗಳ ಪೊಲೀಸ್ ಪಡೆಗಳ ನಡುವಿನ ಹಿಂಸಾತ್ಮಕ ಘರ್ಷಣೆಯಲ್ಲಿ 7 ಜನರು ಸಾವನ್ನಪ್ಪಿದ್ದರು. 50ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಬಳಿಕ, ಹೊಂದಾಣಿಕೆಯ ಪ್ರಕ್ರಿಯೆ ನಡೆದು, ಶಾಂತಿ ಕಾಪಾಡಲು ಉಭಯ ರಾಜ್ಯಗಳು ಒಪ್ಪಿಗೆ ಸೂಚಿಸಿದ್ದವು. ಈ ಮಧ್ಯೆಯೇ ಮತ್ತೆ ಉದ್ವಿಗ್ನತೆ ತಲೆದೋರಿದೆ.

ವಸತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿಲಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಮುದಾಯದ ಬಡ ವಿದ್ಯಾರ್ಥಿನಿಯರಿಗಾಗಿ ವಸತಿ ಗೃಹ ಮತ್ತು ಪಿ.ಜಿ. (ಪೇಯಿಂಗ್ ಗೆಸ್ಟ್) ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕಾಲೇಜು ಶಿಕ್ಷಣಕ್ಕಾಗಿ ಬೇರೆ ಸ್ಥಳಗಳಿಗೆ ಹೋಗುವ ನೇಕಾರ ಕುರುಹಿನಶೆಟ್ಟಿ ಸಮುದಾಯದ ವಿದ್ಯಾರ್ಥಿನಿಯರಿಗೆ ಟ್ರಸ್ಟ್ ವತಿಯಿಂದ ಊಟ ಮತ್ತು ವಸತಿ ಸೌಲಭ್ಯಕ್ಕೆ ಆರ್ಥಿಕ ನೆರವು ನೀಡಲಾಗುವುದು.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಕೊನೆಯ ದಿನ. ಆಸಕ್ತರು ಸಂಸ್ಥೆಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿಲಯ ಚಾರಿಟಬಲ್ ಟ್ರಸ್ಟ್, ಶ್ರೀನಿಧಿ ಬಡಾವಣೆ, ಜೆ.ಪಿ.ನಗರ 8ನೇ ಹಂತ

ಸಂಪರ್ಕಕ್ಕಾಗಿ ಮೊಬೈಲ್ ಸಂಖ್ಯೆ: 948035 3269.

ಭಾರತಕ್ಕೆ ಬರಲು ಇಚ್ಛಿಸುವ ಸಿಖ್, ಹಿಂದೂಗಳಿಗೆ ಆಶ್ರಯಕ್ಕೆ ಮೋದಿ ಸೂಚನೆ

ನವದೆಹಲಿ (ಪಿಟಿಐ): ಭಾರತಕ್ಕೆ ಬರಲು ಇಚ್ಛಿಸುವ ಅಫ್ಗಾನಿಸ್ತಾನದ ಸಿಖ್ ಹಾಗೂ ಹಿಂದೂಗಳಿಗೆ ಆಶ್ರಯ ನೀಡಲು ಕ್ರಮ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರಿಗಳಿಗೆ ಮಂಗಳವಾರ ಸೂಚನೆ ನೀಡಿದರು.

ತಾಲಿಬಾನ್ ಅಟ್ಟಹಾಸದಿಂದಾಗಿ ಅಫ್ಗಾನಿಸ್ತಾನದಲ್ಲಿ ಉದ್ಭವಿಸಿರುವ ಪ್ರಕ್ಷುಬ್ಧ ಪರಿಸ್ಥಿತಿ ಹಿನ್ನೆಲೆಯಲ್ಲಿ ನಡೆದ ರಾಷ್ಟ್ರೀಯ ಭದ್ರತೆ ಮೇಲಿನ ಸಂಪುಟ ಸಮಿತಿಯ ಉನ್ನತ ಮಟ್ಟದ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು.

'ಅಫ್ಗಾನಿಸ್ತಾನದಲ್ಲಿ ಸಿಲುಕಿರುವ ಎಲ್ಲ ಭಾರತೀಯರನ್ನು ಸುರಕ್ಷಿತವಾಗಿ ಕರೆದುಕೊಂಡು ಬರಬೇಕು. ಸಹಾಯಕ್ಕಾಗಿ ಭಾರತದತ್ತ ಮುಖ ಮಾಡಿರುವ ಆ ದೇಶದ ಸಹೋದರ, ಸಹೋದರಿಯರಿಗೆ ಸಾಧ್ಯವಿರುವ ಎಲ್ಲ ನೆರವು ನೀಡಬೇಕು' ಎಂದರು.

ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋಭಾಲ್, ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ, ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ, ಅಫ್ಗಾನಿಸ್ತಾನದಲ್ಲಿನ ಭಾರತ ರಾಯಭಾರಿ ರುದ್ರೇಂದ್ರ ಟಂಡನ್ ಸಭೆಯಲ್ಲಿ ಪಾಲ್ಗೊಂಡಿದ್ದರು.



ಅಫ್ಗಾನಿಸ್ತಾನದಲ್ಲಿನ ಪರಿಸ್ಥಿತಿ ಕುರಿತು ಚರ್ಚಿಸಲು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಭದ್ರತೆ ಮೇಲಿನ ಸಂಪುಟ ಸಮಿತಿ ಸಭೆ ನಡೆಯಿತು —ಪಿಟಿಐ ಚಿತ್ರ

ಅಫ್ಗಾನಿಸ್ತಾನದ ವಿದ್ಯಾರ್ಥಿಗಳಿಂದ ಮೈಸೂರು ವಿ.ವಿ ಕುಲಪತಿ ಭೇಟಿ

2 ತಿಂಗಳಲ್ಲಿ ಕೊನೆಗೊಳ್ಳಲಿದೆ ವೀಸಾ!

ಪ್ರಜಾವಾಣಿ ವಾರ್ತೆ

ಮೈಸೂರು: ವೀಸಾ ಅವಧಿ ಇನ್ನೆರಡು ತಿಂಗಳಲ್ಲಿ ಮುಗಿಯಲಿದ್ದು, ನಗರದಲ್ಲಿ ವ್ಯಾಸಂಗ ಮಾಡುತ್ತಿರುವ ಅಫ್ಗಾನಿಸ್ತಾನದ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ 37 ವಿದ್ಯಾರ್ಥಿಗಳ ಅಂತಿಮ ವರ್ಷದ ಪರೀಕ್ಷೆ ಸೆ.20ರಂದು ಆರಂಭವಾಗಿ ಅಕ್ಟೋಬರ್ ಮೊದಲ ವಾರದಲ್ಲಿ ಮುಗಿಯಲಿದೆ. ಹೀಗಾಗಿ, ವೀಸಾ ಅವಧಿಯೂ ಅದೇ ಸಮಯಕ್ಕೆ ಕೊನೆಗೊಳ್ಳಲಿದೆ.

ತಮ್ಮ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣವಿರುವುದರಿಂದ ಭಾರತದಲ್ಲೇ ಇರಲು ವೀಸಾ ಅವಧಿ ವಿಸ್ತರಿಸುವಂತೆ ಕೋರಿ ವಿದ್ಯಾರ್ಥಿಗಳು ಮಂಗಳವಾರ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಜಿ. ಹೇಮಂತಕುಮಾರ್ ಅವರಿಗೆ ಮನವಿ ಸಲ್ಲಿಸಿದರು. 20 ಮಂದಿ ಅಂತರರಾಷ್ಟ್ರೀಯ ಸೆಂಟರ್ ಹಾಸ್ಟೆಲ್‌ನಲ್ಲಿದ್ದಾರೆ. ಇನ್ನುಳಿದವರು ವಿವಿಧ ಬಡಾವಣೆಗಳಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದಾರೆ.

'ರಾಜ್ಯದಲ್ಲಿ ಅಫ್ಗಾನ್‌ನ ಬಹಳಷ್ಟು ವಿದ್ಯಾರ್ಥಿಗಳಿದ್ದಾರೆ. ವೀಸಾ ವಿಸ್ತರಿಸಲು ಕೋರಿ ಕುಲಪತಿ ಅವರಿಗೆ ಮನವಿ ಮಾಡಿದ್ದೇವೆ' ಎಂದು ಮೈಸೂರು ವಿಶ್ವವಿದ್ಯಾಲಯದ ಎಂ.ಎಸ್ಸಿ ಕಂಪ್ಯೂಟರ್ ವಿದ್ಯಾರ್ಥಿ ರೇಜಾ ಷರೀಫ್ ತಿಳಿಸಿದರು.

'ಆತಂಕಿತ ವಿದ್ಯಾರ್ಥಿಗಳಿಗೆ ಧೈರ್ಯ ತುಂಬಲಾಗಿದೆ. ಸಮಸ್ಯೆಯಾಗದಂತೆ ನೋಡಿಕೊಳ್ಳುತ್ತೇವೆ' ಎಂದು ಪ್ರೊ. ಜಿ.ಹೇಮಂತಕುಮಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮಲ್ಲೇಪುರಂ ಜಿ. ವೆಂಕಟೇಶ್‌ಗೆ 'ನೃಪತುಂಗ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಗೆ ಹಿರಿಯ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಅವರ ಆಯ್ಕೆಯಾಗಿದ್ದಾರೆ.

2021 ನೇ ಸಾಲಿನ ಪುರಸ್ಕೃತರ ಆಯ್ಕೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದ ಆಯ್ಕೆ ಸಮಿತಿಯ ಸಭೆ ಮಂಗಳವಾರ ನಡೆದಿದ್ದು, ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 7 ಲಕ್ಷ ನಗದು ಒಳಗೊಂಡಿದೆ. ಈ ಪ್ರಶಸ್ತಿಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ



ಮಲ್ಲೇಪುರಂ ಜಿ. ವೆಂಕಟೇಶ್

ಮಲ್ಲೇಪುರಂ ಜಿ. ವೆಂಕಟೇಶ್ ಅವರು, ಕನ್ನಡ ಕಾವ್ಯ, ವಿಮರ್ಶೆ, ಸಂಶೋಧನೆ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ 60ಕ್ಕೂ ಅಧಿಕ ಕೃತಿಗಳನ್ನು ಬರೆದಿದ್ದಾರೆ.

45 ವರ್ಷದೊಳಗಿನ ಸಾಹಿತಿಗಳಿಗೆ ನೀಡುವ 'ಮಯೂರವರ್ಮ ಸಾಹಿತ್ಯ ಪ್ರಶಸ್ತಿ'ಗೆ ಟಿ.ಜಿ. ಶ್ರೀನಿಧಿ, ಮಮತಾ ಅರಸೀಕೆರೆ, ಕಾತ್ಯಾಯಿನಿ ಕುಂಜಿಬೆಟ್ಟು, ಬಸವರಾಜ ಭಜಂತ್ರಿ ಹಾಗೂ ಜಗದೀಶ ಲಿಂಗನಾಯಕ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

ಆಯ್ಕೆ ಸಮಿತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್. ರಂಗಪ್ಪ, ವಿಮರ್ಶಕ ಎಸ್.ಆರ್. ವಿಜಯಶಂಕರ, ಸಾಹಿತಿ ಸರಜೂ ಕಾಟ್ಕರ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣ ಅಧಿಕಾರಿ ಮೊಹಮದ್ ಹಫೀಜುಲ್ಲಾ, ಉಪಮುಖ್ಯ ಕಾರ್ಮಿಕ ಕಲ್ಯಾಣ ಅಧಿಕಾರಿ ಮಥುರಾ ರಾಡ್ರಿಕ್ಸ್, ಕ.ರಾ.ರ.ಸಾ.ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ರಾಜ್ಯಾಧ್ಯಕ್ಷ ವ.ಚ. ಚನ್ನೇಗೌಡ ಅವರು ಇದ್ದರು ಎಂದು ಪ್ರಕಟಣೆಯಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ತಿಳಿಸಿದ್ದಾರೆ.

ಪೈಲ್ವಾನರ ಪ್ರತಿಭಟನೆ

ಬೆಂಗಳೂರು: 'ಮಾಸಾಶನ ಹೆಚ್ಚಳ ಮಾಡಬೇಕು' ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್.ಟಿ.ನಗರದ ಮನೆ ಎದುರು ಕುಸ್ತಿ ಪೈಲ್ವಾನರು ಈಚೆಗೆ ಮೌನ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಪೈಲ್ವಾನರು, 'ಬಯಸದೇ ಬಂದ ಭಾಗ್ಯದ ಮುಖ್ಯಮಂತ್ರಿಗಳೇ ನಮ್ಮ ಬೇಡಿಕೆ ಈಡೇರಿಸಿ' ಎಂಬ ಬರಹವುಳ್ಳ ಫಲಕಗಳನ್ನು ಪ್ರದರ್ಶಿಸಿದರು.

ಬಸವರಾಜ ಬೊಮ್ಮಾಯಿ ಅವರು ಪೈಲ್ವಾನರಿಂದ ಮನವಿ ಪತ್ರ ಸ್ವೀಕರಿಸಿ ಮಾಸಾಶನ ಹೆಚ್ಚಳದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

₹ 5 ಸಾವಿರ ಕೋಟಿ ಒಪ್ಪಂದಕ್ಕೆ ಎಚ್‌ಎಎಲ್ ಸಹಿ

ಬೆಂಗಳೂರು (ಪಿಟಿಐ): ಹಿಂದುಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಯು ಅಮೆರಿಕದ ಜಿಇ ಏವಿಯೇಷನ್ಸ್ ಕಂಪನಿಯಿಂದ 'ಎಫ್404–ಜಿಇ–ಐಎನ್20' ಎಂಜಿನ್ ಖರೀದಿಗೆ ₹ 5,375 ಕೋಟಿ ಮೊತ್ತದ ಒಪ್ಪಂದ ಮಾಡಿಕೊಂಡಿದೆ. ಈ ಎಂಜಿನ್‌ಗಳನ್ನು ಎಚ್‌ಎಎಲ್, 'ತೇಜಸ್' ಲಘು ಯುದ್ಧ ವಿಮಾನದಲ್ಲಿ ಬಳಕೆ ಮಾಡಲಿದೆ.

'ಬೆಂಗಳೂರಿನಲ್ಲಿರುವ ಎಚ್‌ಎಎಲ್ ಕಾರ್ಪೊರೇಟ್ ಕಚೇರಿಯಲ್ಲಿ ಈ ಒಪ್ಪಂದಕ್ಕೆ ಮಂಗಳವಾರ ಸಹಿ ಹಾಕಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಲಘು ಯುದ್ಧ ವಿಮಾನಗಳಿಗೆ ಎಚ್‌ಎಎಲ್ ಕಡೆಯಿಂದ ನಡೆದಿರುವ ಅತಿದೊಡ್ಡ ಒಪ್ಪಂದ ಇದು' ಎಂದು ಕಂಪನಿಯ ಸಿಎಂಡಿ ಆರ್. ಮಾಧವನ್ ಅವರು ಹೇಳಿದ್ದಾರೆ.

'ಭಾರತೀಯ ವಾಯುಪಡೆಗೆ ಒಟ್ಟು 83 ಲಘು ಯುದ್ಧ ವಿಮಾನಗಳನ್ನು ಪೂರೈಸಲು ಎಚ್‌ಎಎಲ್ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದವನ್ನು ಜಾರಿಗೆ ತರುವ ನಿಟ್ಟಿನಲ್ಲಿ, ಎಂಜಿನ್‌ಗಳ ಖರೀದಿಗೆ ಮುಂದಾಗಿರುವುದು ಮಹತ್ವದ್ದು' ಎಂದು ಕಂಪನಿ ಹೇಳಿದೆ.

ಎಚ್‌ಎಎಲ್ ಒಟ್ಟು 99 ಎಂಜಿನ್‌ಗಳನ್ನು ಖರೀದಿಸಲಿದೆ. ಇವು 2029ರೊಳಗೆ ಎಚ್‌ಎಎಲ್‌ಗೆ ಲಭ್ಯವಾಗಲಿವೆ.

ನೆರೆ ಸಂತ್ರಸ್ತರಿಗೆ ತಕ್ಷಣ ಪರಿಹಾರ ನೀಡಿ: ಸಿ.ಎಂಗೆ ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರವಾಹದಿಂದ ಸಂತ್ರಸ್ತರಾದವರಿಗೆ ತಕ್ಷಣ ಪರಿಹಾರ ಬಿಡುಗಡೆ ಮಾಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

'ಇದೇ ಜುಲೈ 26 ಮತ್ತು 27ರಂದು ಬಾಗಲಕೋಟೆ, ಬೆಳಗಾವಿ, ಗದಗ ಜಿಲ್ಲೆಗಳ ಪ್ರವಾಹಪೀಡಿತ ಪ್ರದೇಶಗಳಿಗೆ ಹಾಗೂ ಆ. 2ರಂದು ಉತ್ತರ ಕನ್ನಡ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆ ತೀವ್ರ ಸ್ವರೂಪದ ಅನಾಹುತ ಸೃಷ್ಟಿಸಿದೆ' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

'ಮನೆಯೊಳಗಿದ್ದ ಪಾತ್ರೆ ಪಗಡೆ,



ಸಿದ್ದರಾಮಯ್ಯ

ಬಟ್ಟೆಗಳು, ಮಕ್ಕಳ ಶಾಲಾ ಬ್ಯಾಗು, ಪುಸ್ತಕಗಳು, ದವಸ ಧಾನ್ಯಗಳು, ಟಿವಿ, ಫ್ರಿಡ್ಜ್, ಮಿಕ್ಸರ್, ಗ್ಯಾಸ್ ಸಿಲಿಂಡರ್‌ಗಳ ಸಹಿತ ನಿತ್ಯ ಬಳಕೆಯ ವಸ್ತುಗಳು ಕೊಚ್ಚಿಕೊಂಡು ಹೋಗಿ ನೂರಾರು ಜನರು ಸಂತ್ರಸ್ತರಾಗಿದ್ದಾರೆ. ಪ್ರವಾಹದಿಂದ ಕೊಚ್ಚಿ ಬಂದ ಮಣ್ಣು, ಕೆಸರು ಸಾವಿರಾರು ಮನೆಗಳನ್ನು ಮುಚ್ಚಿ ಹಾಕಿದೆ. ಹೀಗಾಗಿ, ಮಕ್ಕಳು ಸೇರಿದಂತೆ ಎಲ್ಲರ ಆರೋಗ್ಯದ ಬಗ್ಗೆಯೂ ತುರ್ತು ಗಮನಹರಿಸಬೇಕು. ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ನ್ಯಾಯೋಚಿತ ಪರಿಹಾರ ಬಿಡುಗಡೆ ಮಾಡಿಸಬೇಕು' ಎಂದೂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಕೋವಿಡ್ ನಿಯಂತ್ರಣ ಉಪಕರಣ ಖರೀದಿ

₹34.97 ಕೋಟಿ ಅಧಿಕ ವೆಚ್ಚ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಖರೀದಿಸಿದ ಉಪಕರಣಗಳಿಗಾಗಿ ₹34.97 ಕೋಟಿ ಅಧಿಕ ಮೊತ್ತ ಪಾವತಿ ಮಾಡಲಾಗಿರುವ ಬಗ್ಗೆ ಸೂಕ್ತ ಮಾಹಿತಿ ಒದಗಿಸುವಂತೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಆರೋಗ್ಯ ಇಲಾಖೆಗೆ ಅಧಿಕಾರಿಗಳಿಗೆ ಒಂದು ವಾರ ಗಡುವು ನೀಡಿದೆ.

ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮೂರು ಉಪಕರಣಗಳ ಖರೀದಿಯ ಬಗ್ಗೆ ಚರ್ಚಿಸಲಾಯಿತು. ಉಳಿದ 15 ಕ್ಕೂ ಹೆಚ್ಚು ಪ್ರಶ್ನೆಗಳಿಗೆ ಅಧಿಕಾರಿಗಳಿಂದ ಸೂಕ್ತ ಉತ್ತರ ಸಿಗದ ಕಾರಣ ಮತ್ತೊಮ್ಮೆ ಪರಿಪೂರ್ಣ ಉತ್ತರ ನೀಡುವಂತೆಯೂ ನಿರ್ದೇಶನ ನೀಡಲಾಯಿತು.

ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್ ಕಿಟ್‌ಗಳ ಖರೀದಿಯಲ್ಲೂ ಲೋಪಗಳಾಗಿವೆ. ಇಲಾಖೆ ಖರೀದಿಸಿರುವ 30 ಲಕ್ಷ ಕಿಟ್‌ಗಳಿಗೆ ₹3.79 ಕೋಟಿ ಅಧಿಕ ಪಾವತಿ ಮಾಡಲಾಗಿದೆ ಎಂದು ಸಮಿತಿ ದೂರಿದೆ.

ಹಿಮಾಚಲಪ್ರದೇಶ ಮತ್ತು ಕೇರಳ ರಾಜ್ಯಕ್ಕೆ ಸಂಬಂಧಿಸಿದ ಬ್ರೇಕ್ ಅಪ್ ವಿವರಗಳನ್ನು (ಸಲಕರಣೆಗಳ ಮೂಲ ವೆಚ್ಚ, ಪರೀಕ್ಷೆಗಳಿಗೆ ಅಗತ್ಯವಿರುವ ರಾಸಾಯನಿಕ ಹಾಗೂ ಪರಿಕರಗಳ ಸಾಗಾಣಿಕೆ ವೆಚ್ಚ) ನೀಡಲಾಗಿದೆ. ಆದರೆ, ರಾಜ್ಯಕ್ಕೆ ಸಂಬಂಧಿಸಿದ ಬ್ರೇಕ್ ಅಪ್ ವಿವರ ನೀಡದಿರುವ ಬಗ್ಗೆ ಸಮಿತಿಯು ಅಸಮಾಧಾನ ವ್ಯಕ್ತಪಡಿಸಿ, ಒಂದು ವಾರದೊಳಗೆ ಮಾಹಿತಿ ಒದಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದೆ.

ರ್‍ಯಾಪಿಡ್ ಆ್ಯಂಟಿಜನ್ ಟೆಸ್ಟ್ ಕಿಟ್ ಖರೀದಿಯಲ್ಲಿ ಆಗಿರುವ ಲೋಪ-ದೋಷಗಳನ್ನು ಸಭೆಯಲ್ಲಿ ಪಟ್ಟಿ ಮಾಡಲಾಯಿತು. ಮೊದಲ ಬಾರಿಗೆ ಕಿಟ್ ಖರೀದಿಸಲು ಆಹ್ವಾನಿಸಿದ್ದ ದರ ಪಟ್ಟಿಯನ್ನು ಯಾಕೆ ಅಂತಿಮಗೊಳಿಸಲಿಲ್ಲ? ಬಹುಪಾಲು ಮೊದಲ ಬಾರಿ ದರಪಟ್ಟಿ ಸಲ್ಲಿಸಿದ್ದ ಕಂಪನಿಗಳೇ ಎರಡನೇ ಬಾರಿ ದರಪಟ್ಟಿ ಆಹ್ವಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರೂ ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸುವಲ್ಲಿ ತಡ ಏಕಾಯಿತು? ಉತ್ತರ ಪ್ರದೇಶ ರಾಜ್ಯ ದರ ಪಟ್ಟಿಯ ಪ್ರಕಾರವೇ ದರ ನಿಗದಿಪಡಿಸಿದ್ದು ಏಕೆ ಎಂದು ಪ್ರಶ್ನಿಸಲಾಯಿತು.

ಕೇರಳಕ್ಕೆ ಹೋಲಿಸಿದರೆ ದುಪ್ಪಟ್ಟು ದರ!

- ಕರ್ನಾಟಕ ಸರ್ಕಾರವು ಟೆಂಡರ್ ಮೂಲಕ ಹೆಮಟಾಲಜಿ ಸೆಲ್ ಕೌಂಟ್ಸ್‌ನ (ಪಾರ್ಟ್ 3) ಪ್ರತಿ ಯೂನಿಟ್ ಅನ್ನು ₹2,96,180 ನೀಡಿ 1,195 ಯೂನಿಟ್‌ಗಳನ್ನು ಖರೀದಿಸಿದೆ. ಹಿಮಾಚಲ ಪ್ರದೇಶ ಸರ್ಕಾರ ಒಂದು ಯೂನಿಟ್‌ಗೆ ಕೇವಲ ₹1.30 ಲಕ್ಷ ನೀಡಿದೆ. ಇದರಿಂದ ರಾಜ್ಯ ಸರ್ಕಾರ ₹25 ಕೋಟಿಯಷ್ಟು ಅಧಿಕ ವೆಚ್ಚ ಮಾಡಿದೆ.
- ಹೆಮಟಾಲಜಿ ಸೆಲ್ ಕೌಂಟ್ಸ್ (ಪಾರ್ಟ್5) ಅನ್ನು ಕರ್ನಾಟಕ ಸಿಸ್ಮೆಕ್ ಕಾರ್ಪೊರೇಷನ್‌ನಿಂದ ಪ್ರತಿ ಯೂನಿಟ್‌ಗೆ ₹8.35 ಲಕ್ಷ ನೀಡಿ 165 ಯೂನಿಟ್‌ಗಳನ್ನು ಖರೀದಿಸಿತ್ತು. ಇದೇ ವೈಶಿಷ್ಟ್ಯ ಹೊಂದಿರುವ ಸಾಮಗ್ರಿಗೆ ಕೇರಳ ಪ್ರತಿ ಯೂನಿಟ್‌ಗೆ ಕೇವಲ ₹4,60,200 ನೀಡಿದೆ. ಕೇರಳಕ್ಕೆ ಹೋಲಿಸಿದರೆ ₹6.18 ಕೋಟಿ ಅಧಿಕ ದರ ಪಾವತಿಸಲಾಗಿದೆ.

ಪೆಗಾಸಸ್: ಕೇಂದ್ರದ ಕೋರಿಕೆಗೆ ಕೋರ್ಟ್ ಸಮ್ಮತಿ

‘ಮಾಹಿತಿ ಬಹಿರಂಗ ಅನಗತ್ಯ’

ನವದೆಹಲಿ (ಪಿಟಿಐ): ‘ಪೆಗಾಸಸ್ ಗೂಢಚರ್ಯೆ ಪ್ರಕರಣ ಕುರಿತು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕೇಂದ್ರ ಸರ್ಕಾರವು ಬಹಿರಂಗಪಡಿಸಬೇಕು ಎಂದು ತಾನು ಬಯಸುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಸ್ಪಷ್ಟಪಡಿಸಿತು.



ಪೆಗಾಸಸ್ ಗೂಢಚರ್ಯೆ ಪ್ರಕರಣವನ್ನು ಕುರಿತಂತೆ ಸ್ವತಂತ್ರ ತನಿಖೆ ನಡೆಸಲು ಕೋರಿ ಸಲ್ಲಿಕೆಯಾಗಿದ್ದ ಹಲವು ಅರ್ಜಿಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ಮಂಗಳವಾರ ನೋಟಿಸ್ ಅನ್ನೂ ಜಾರಿ ಮಾಡಿತು.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠದ ಎದುರು, ‘ಮಾಹಿತಿಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ್ದಾಗಿದೆ’ ಎಂದು ಕೇಂದ್ರ ಸರ್ಕಾರ ತಿಳಿಸಿತು. ಆಗ ಮೇಲಿನ ಮಾತು ಹೇಳಿದ ಪೀಠವು, ಈ ಕುರಿತ ಅರ್ಜಿಗಳ ವಿಚಾರಣೆಯನ್ನು 10 ದಿನದ ನಂತರ ತೆಗೆದುಕೊಳ್ಳಲಿದ್ದು, ಮುಂದೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ತೀರ್ಮಾನಿಸಲಾಗುವುದು ಎಂದು ತಿಳಿಸಿತು.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಅನಿರುದ್ಧ ಭೋಸ್ ಅವರೂ ಸದಸ್ಯರಾಗಿದ್ದ ಪೀಠವು, ಸರ್ಕಾರ ಈ ಕುರಿತು ಸಮಗ್ರ ಪ್ರಮಾಣ ಪತ್ರ ಸಲ್ಲಿಸಲಿದೆ ಎಂದು ಭಾವಿಸಿದ್ದೆವು ಎಂದೂ ಹೇಳಿತು. ಕೇಂದ್ರ ಸರ್ಕಾರ ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಈಗಾಗಲೇ ಸಲ್ಲಿಸಿದ ಪ್ರಮಾಣಪತ್ರದಲ್ಲಿಯೇ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಿದೆ ಎಂದರು.

‘ಈಗಾಗಲೇ ಪ್ರಮಾಣಪತ್ರವನ್ನು ಸಲ್ಲಿಸಲಾಗಿದೆ. ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರ ನಿಂತಿದೆ. ನಮ್ಮ ದೃಷ್ಟಿಕೋನದಿಂದ ಈ ಅಂಶವನ್ನು ಪರಿಶೀಲಿಸಬೇಕು’ ಎಂದೂ ಮೆಹ್ತಾ ಅವರು ಕೋರಿದರು.

’ಈ ವಿಷಯದ ಕುರಿತ ಎಲ್ಲ ಅಂಶಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ತಜ್ಞರ ಸಮಿತಿಯನ್ನು ರಚಿಸಲಿದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದೆ. ಸಮಿತಿಯ ವರದಿಯನ್ನೂ ಕೋರ್ಟ್‌ಗೆ ಸಲ್ಲಿಸಲಾಗುತ್ತದೆ. ಇದರಲ್ಲಿ ಮರೆಮಾಚುವಂತಹದು ಏನೂ ಇಲ್ಲ. ಆದರೆ, ಇಲ್ಲಿ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯವೂ ಇದೆ‘ ಎಂದು ತಿಳಿಸಿದರು.

‘ಇದು, ಸಾರ್ವಜನಿಕವಾಗಿ ಚರ್ಚೆಯಾಗಬೇಕಾದ ವಿಷಯವಲ್ಲ‘ ಎಂದು ಮೆಹ್ತಾ ಅಭಿಪ್ರಾಯಪಟ್ಟರು. ಪೆಗಾಸಸ್ ಗೂಢಚರ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವತಂತ್ರ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಭಾರತೀಯ ಸಂಪಾದಕರ ಒಕ್ಕೂಟವು ಸೇರಿ ಹಲವರು ಅರ್ಜಿ ಸಲ್ಲಿಸಿದ್ದರು.

15 ವಿವಿಧ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಇಂದು

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2019-20ನೇ ಸಾಲಿನ 15 ವಿವಿಧ ವಾರ್ಷಿಕ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮವನ್ನು ಬುಧವಾರ (ಆ.18) ಸಂಜೆ 6.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದೆ.

ಸಚಿವ ವಿ. ಸುನಿಲ್ ಕುಮಾರ್ ಅವರು ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ‘ಬಸವ ರಾಷ್ಟ್ರೀಯ ಪ್ರಶಸ್ತಿ’ಗೆ ಬಸವಲಿಂಗಪಟ್ಟದೇವರು, ‘ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ’ಗೆ ಪಂ. ನರಸಿಂಹಲು ವಡವಾಟಿ, ‘ಭಗವಾನ್ ಮಹಾವೀರ ರಾಷ್ಟ್ರೀಯ ಶಾಂತಿ ಪ್ರಶಸ್ತಿ’ಗೆ ಡಿ.ವೀರೇಂದ್ರ ಹೆಗ್ಗಡೆ, ‘ನಾಟ್ಯರಾಣಿ ಶಾಂತಲಾ ಪ್ರಶಸ್ತಿ’ಗೆ ಬಿ.ಕೆ. ವಸಂತಲಕ್ಷ್ಮಿ, ‘ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ’ಗೆ ಚಿ.ಸು. ಕೃಷ್ಣಶೆಟ್ಟಿ, ‘ಜಕಣಾಚಾರಿ ಪ್ರಶಸ್ತಿ’ಗೆ ಬಿ.ಎಸ್. ಯೋಗಿರಾಜ, ‘ಡಾ. ಗುಬ್ಬಿ ವೀರಣ್ಣ ಪ್ರಶಸ್ತಿ’ಗೆ ಮದಿರೆ ಮರಿಸ್ವಾಮಿ, ‘ಜಾನಪದಶ್ರೀ ಪ್ರಶಸ್ತಿ’ಗೆ ಬಿ. ಟಾಕಪ್ಪ ಕಣ್ಣೂರು ಆಯ್ಕೆಯಾಗಿದ್ದಾರೆ.

‘ಸಂಗೊಳ್ಳಿ ರಾಯಣ್ಣ ಪ್ರಶಸ್ತಿ’ಗೆ ರಾ.ನಂ. ಚಂದ್ರಶೇಖರ, ‘ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ’ಗೆ ಚೂಡಾಮಣಿ ನಂದಗೋಪಾಲ್, ‘ಪ್ರೊ. ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ’ಗೆ ಪ್ರೊ. ಸಿದ್ದಣ್ಣ ಉತ್ನಾಳ, ‘ಅಕ್ಕಮಹಾದೇವಿ ಪ್ರಶಸ್ತಿ’ಗೆ ಜಯಶ್ರೀ ದಂಡೆ, ‘ನಿಜಗುಣ ಪುರಂದರ ಪ್ರಶಸ್ತಿ’ಗೆ ಗೌರಿ ಕುಪ್ಪುಸ್ವಾಮಿ, ‘ಸಂತಶಿಶುನಾಳ ಶರೀಫ ಪ್ರಶಸ್ತಿ’ಗೆ ಪಂ. ವಾದಿರಾಜ ನಿಂಬರಗಿ ಹಾಗೂ ‘ಕುಮಾರವ್ಯಾಸ ಪ್ರಶಸ್ತಿ’ಗೆ ಗಂಗಮ್ಮ ಕೇಶವಮೂರ್ತಿ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಗಳು ಈ ಹಿಂದೆ ಘೋಷಣೆಯಾಗಿದ್ದರೂ ಕೋವಿಡ್ ಕಾರಣ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆದಿರಲಿಲ್ಲ.



ಭರತನಾಟ್ಯ

ಕಲಾಕ್ಷಿತಿ ಸ್ಕೂಲ್ ಆಫ್ ಫೈನ್ ಆರ್ಟ್ಸ್ ವತಿಯಿಂದ ಜಯನಗರದ ಜೆಎಸ್‌ಎಸ್ ಸಭಾಂಗಣದ ಶಿವರಾತ್ರೀಶ್ವರ ಕೇಂದ್ರದಲ್ಲಿ ನಡೆದ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮದಲ್ಲಿ ಡಾ.ಎಂ.ಆರ್. ಕೃಷ್ಣಮೂರ್ತಿ ಅವರ ಶಿಷ್ಯೆ ಶರಣ್ಯ ಬಿ.ರವಿ ಭರತನಾಟ್ಯ ಪ್ರಸ್ತುತಪಡಿಸಿದರು

ಬಸವಜಯ ಮೃತ್ಯುಂಜಯ ಸ್ವಾಮೀಜಿ– ಸಿ.ಎಂ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಂಚಮಸಾಲಿ ಸಮಾಜದ ಕೂಡಲ ಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿಯವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ಪ್ರವರ್ಗ 2 ಎಗೆ ಸೇರಿಸಬೇಕು ಎಂದು ಎರಡನೇ ಸುತ್ತಿನ ಹೋರಾಟವನ್ನು ಮಲೆ ಮಹದೇಶ್ವರ ಬೆಟ್ಟದಿಂದ ಆರಂಭಿಸುವುದಾಗಿ ಹೇಳಿರುವ ಬೆನ್ನಲ್ಲೇ ಈ ಭೇಟಿ ಮಹತ್ವ ಪಡೆದಿದೆ. ಹೋರಾಟ ಕೈಬಿಡುವಂತೆ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಭೇಟಿಯ ಸಂದರ್ಭದಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಇದ್ದರು. ಸ್ವಾಮೀಜಿ ಬೊಮ್ಮಾಯಿ ಅವರಿಗೆ ಪಂಚಮಸಾಲಿ ಪೀಠದ ಪಂಚ ಲಾಂಛನಗಳಾದ ಹಸಿರು ಶಾಲು, ವಚನ ಪುಸ್ತಕ, ಗಾಂಧಿ ಟೋಪಿ, ಕಿತ್ತೂರು ಚೆನ್ನಮ್ಮನ ಭಾವಚಿತ್ರ ಮತ್ತು ರುದ್ರಾಕ್ಷಿ ಮಾಲೆ ನೀಡಿ ಸನ್ಮಾನಿಸಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪಂಚಮಸಾಲಿ ಸಮುದಾಯದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಗೌರವಿಸಿದರು. ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮುದಾಯದ ಮುಖಂಡ ಬಿ.ಎಸ್. ನಟರಾಜ್ ಇದ್ದರು

‘ಪರಂಪರೆಯ ಪ್ರತಿರೋಧದಿಂದಲೇ ಸಾಹಿತ್ಯ ಚಳವಳಿ’

ಬೆಂಗಳೂರು: ‘ಈಗಿನ ಬರಹಗಾರರು ಪರಂಪರೆಯನ್ನು ಅರಿತುಕೊಂಡು ಸಾಹಿತ್ಯ ಸೃಷ್ಟಿಸಬೇಕು. ಪರಂಪರೆಯ ಪ್ರತಿರೋಧದಿಂದಲೇ ಸಾಹಿತ್ಯ ಚಳವಳಿ ಹುಟ್ಟಿರುವುದು’ ಎಂದು ವಿಮರ್ಶಕ ಎಚ್. ದಂಡಪ್ಪ ತಿಳಿಸಿದರು.



ಎಚ್. ದಂಡಪ್ಪ

ಬಿಎಂಶ್ರೀ ಪ್ರತಿಷ್ಠಾನವು ರುಕ್ಮಿಣಮ್ಮ ಸೀತಾರಾಮರಾವ್ ದತ್ತಿ ಕಾರ್ಯಕ್ರಮದ ಪ್ರಯುಕ್ತ ‘ಕನ್ನಡದ ಸಾಹಿತ್ಯದಲ್ಲಿ ಪರಂಪರೆ ಮತ್ತು ಪ್ರತಿಭಟನೆ’ ಎಂಬ ವಿಷಯದ ಮೇಲೆ ಆನ್‌ಲೈನ್ ವೇದಿಕೆಯಲ್ಲಿ ಮಂಗಳವಾರ ಆಯೋಜಿಸಿದ ಉಪನ್ಯಾಸದಲ್ಲಿ ಮಾತನಾಡಿದರು.

‘ಮನುಷ್ಯ ಕೇಂದ್ರಿತ ವಿಚಾರಗಳು ಪರಂಪರೆಯಾಗಿ ಬೆಳೆಯುತ್ತಾ ಬಂದಿದೆ. ಆದರೆ, ಅದು ಪ್ರತಿರೋಧಗಳಿಂದ ಹೊಸ ಹೊಸ ರೂಪಗಳನ್ನು ಪಡೆದಿದೆ. ಪರಂಪರೆ ಎನ್ನುವುದು ಒಂದು ಕಡೆಯಿಂದ ಮತ್ತೊಂದು ಕಡೆ ನಿರಂತರ ಚಲನಶೀಲತೆಯಿಂದ ಕೂಡಿರುತ್ತದೆ. ಸಂಪ್ರದಾಯವು ಜಡತ್ವವನ್ನು ಹೊಂದಿರುತ್ತದೆ. ಸಾಹಿತ್ಯವೂ ಒಂದು ಪರಂಪರೆಯಾಗಿ ಉಳಿದುಕೊಂಡು ಬಂದಿದೆ’ ಎಂದರು.

ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ, ಗೌರವ ಕಾರ್ಯದರ್ಶಿ ಬಿ.ಸಿ. ರಾಜಕುಮಾರ್ ಇದ್ದರು.

ತ್ಯಾಜ್ಯ ನಿರ್ವಹಣೆ: ಎನ್‌ಜಿಟಿಗೆ ಅನುಸರಣಾ ವರದಿ

‘ಬಿಬಿಎಂಪಿ ವ್ಯಾಪ್ತಿ:3,500 ಟನ್ ತ್ಯಾಜ್ಯ ಉತ್ಪಾದನೆ’

ಪ್ರಜಾವಾಣಿ ವಾರ್ತೆ

ನವದೆಹಲಿ: ನಿತ್ಯವೂ 2,300 ಟನ್ ಮಿಶ್ರ ತ್ಯಾಜ್ಯದ ನಿರ್ವಹಣೆ ಸಾಮರ್ಥ್ಯ ಹೊಂದಿರುವ 7 ಘನ ತ್ಯಾಜ್ಯ ನಿರ್ವಹಣಾ ಘಟಕಗಳು ತನ್ನ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ತಿಳಿಸಿದೆ.

ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಹಸಿರು ಪೀಠಕ್ಕೆ ಸಲ್ಲಿಸಿರುವ ಘನ ತ್ಯಾಜ್ಯ ನಿರ್ವಹಣಾ ನಿಯಮಗಳ ಅನುಸರಣಾ ವರದಿಯಲ್ಲಿ ಸಂಪೂರ್ಣ ವಿವರ ಸಲ್ಲಿಸಿರುವ ಬಿಬಿಎಂಪಿ, ಬೆಂಗಳೂರು ಮಹಾನಗರದಲ್ಲಿ ನಿತ್ಯ ಅಂದಾಜು 3,500 ಟನ್ ತ್ಯಾಜ್ಯ ಉತ್ಪಾದನೆ ಆಗುತ್ತಿದ್ದು, 1,530 ಟನ್‌ಗಳಷ್ಟು ತ್ಯಾಜ್ಯವನ್ನು ಬೇರ್ಪಡಿಸಲಾಗುತ್ತಿದೆ ಎಂದು ತಿಳಿಸಿದೆ.

ಈ ಘಟಕಗಳಿಂದ ವಾರ್ಷಿಕ 26,000 ಟನ್ ಎರೆಹುಳು ಗೊಬ್ಬರ ಉತ್ಪಾದಿಸಲಾಗುತ್ತಿದೆ. ಎಲ್ಲ ಸಂಸ್ಕರಣಾ ಘಟಕಗಳ ಮೇಲ್ವಿಚಾರಣೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮಾಜಿ ಸೈನಿಕರನ್ನು ಮಾರ್ಷಲ್‌ಗಳನ್ನಾಗಿ ನಿಯೋಜಿಸಲಾಗಿದೆ ಎಂದು ವರದಿ ಹೇಳಿದೆ.

ಬಾಗಲೂರು ಮತ್ತು ಮಿತ್ತಗಾನಹಳ್ಳಿಯಲ್ಲಿ ತ್ಯಾಜ್ಯ ಹಾಕಲೆಂದು ತೆಗೆಯಲಾಗಿದ್ದ ತಗ್ಗುಗಳನ್ನು ವೈಜ್ಞಾನಿಕವಾಗಿ ಮುಚ್ಚಲಾಗಿದ್ದು, ಪರಿಸರ ಮೇಲ್ವಿಚಾರಣೆಯ ಅಡಿ ಆ ಪ್ರದೇಶಗಳನ್ನು ಉದ್ಯಾನವನ್ನಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಲಾಗಿದೆ.

ಇದುವರೆಗೆ ಉತ್ಪಾದಿಸಲಾಗಿರುವ ಒಟ್ಟು 28,000 ಟನ್‌ನಷ್ಟು ತ್ಯಾಜ್ಯ ಮೂಲದ ಇಂಧನದಲ್ಲಿ, 26,500 ಟನ್ ಇಂಧನವನ್ನು ಪರ್ಯಾಯ ಇಂಧನವಾಗಿ ಬಳಸಲು ಸಿಮೆಂಟ್ ಕಾರ್ಖಾನೆಗಳಿಗೆ ನೀಡಲಾಗಿದೆ ಎಂದೂ ಹೇಳಲಾಗಿದೆ.

ಘನ ತ್ಯಾಜ್ಯವನ್ನು ಟಿಪ್ಪರ್‌ಗಳಿಂದ ಕಾಂಪ್ಯಾಕ್ಟರ್‌ಗಳಿಗೆ ಸಾಗಿಸುವ ಉದ್ದೇಶದಿಂದ ಸಾಗಣೆಯ 50 ಸಣ್ಣ ಕೇಂದ್ರ ಸ್ಥಾಪಿಸಲು ₹ 76 ಕೋಟಿ ಹೂಡಿಕೆ ಮಾಡಲಾಗಿದ್ದು, ಅವೆಲ್ಲ ಈ ಅನುಷ್ಠಾನದ ಹಂತದಲ್ಲಿವೆ. ಅಲ್ಲದೆ, ಒಟ್ಟು 164 ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಮನೆಮನೆಗಳಿಂದ ತ್ಯಾಜ್ಯ ಸಂಗ್ರಹಕ್ಕಾಗಿ 4000 ವಾಹನಗಳು ಹಾಗೂ ಸಾಗಣೆಗಾಗಿ 500 ವಾಹನಗಳು ಕಾರ್ಯ ನಿರ್ವಹಿಸುತ್ತಿವೆ. ನಿತ್ಯವೂ ಮರುಬಳಕೆ ಮಾಡಬಹುದಾದ ಅಂದಾಜು 130 ಟನ್ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಎಂದು ಬಿಬಿಎಂಪಿ ಹೇಳಿದೆ.

ದೇಶದ ಎಲ್ಲ ರಾಜ್ಯಗಳ ಪ್ರಮುಖ ನಗರಗಳ ತ್ಯಾಜ್ಯ ನಿರ್ವಹಣೆ ನಿಯಮಗಳ ಅನುಸರಣಾ ವರದಿ ಸಲ್ಲಿಸುವಂತೆ ಸೂಚಿಸಿದ್ದ ಎನ್‌ಜಿಟಿ ಆದೇಶದ ಮೇರೆಗೆ ಈ ವರದಿ ಸಲ್ಲಿಸಿರುವ ಬಿಬಿಎಂಪಿ, ತ್ಯಾಜ್ಯ ನಿರ್ವಹಣೆ ಕುರಿತು ರಾಜ್ಯ ಸರ್ಕಾರ ಇನ್ನಷ್ಟೇ ನೀತಿ ಸಿದ್ಧಪಡಿಸಲಿದ್ದು, 2021ರ ಡಿಸೆಂಬರ್ ವೇಳೆಗೆ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಹೇಳಿದೆ.

ಜಗಜೀವನ್ ರಾಮ್ ಆಸ್ಪತ್ರೆ: ಮಕ್ಕಳ ಆರೈಕೆಗೆ 50 ಹಾಸಿಗೆಗಳ ಸೌಕರ್ಯ

ಮಕ್ಕಳ ಕೋವಿಡ್ ಚಿಕಿತ್ಸೆಗೆ ಸಜ್ಜು

ಪ್ರಜಾವಾಣಿ ವಾರ್ತೆ



ಡಾ.ಬಾಬು ಜಗಜೀವನ್ ರಾಮ್ ಆಸ್ಪತ್ರೆಯಲ್ಲಿ ಮಕ್ಕಳ ಚಿಕಿತ್ಸೆ ಸಲುವಾಗಿ ಕಲ್ಪಿಸಲಾದ ಸೌಕರ್ಯವನ್ನು ಡಿ.ರಂದೀಪ್ ಪರಿಶೀಲಿಸಿದರು. ನಿರ್ಮಲಾ ಬುಗ್ಗಿ ಹಾಗೂ ಇತರ ವೈದ್ಯರು ಇದ್ದಾರೆ.

ಬೆಂಗಳೂರು: ಬಿಬಿಎಂಪಿ ಅಧೀನದ ಡಾ.ಬಾಬು ಜಗಜೀವನ್ ರಾಮ್ ಸಾರ್ವಜನಿಕ ಆಸ್ಪತ್ರೆ ಮಕ್ಕಳಿಗೆ ಕೋವಿಡ್ ಚಿಕಿತ್ಸೆ ನೀಡಲು ಸಜ್ಜಾಗಿದೆ.

ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, 'ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚು ಇದ್ದಾಗ ಈ ಆಸ್ಪತ್ರೆಯಲ್ಲಿ ಜ್ವರ ಚಿಕಿತ್ಸಾ ಕೇಂದ್ರ ಹಾಗೂ ಕೋವಿಡ್ ಚಿಕಿತ್ಸಾ ನಿರ್ಧಾರ ಕೇಂದ್ರವನ್ನು (ಟ್ರಯಾಜ್ ಸೆಂಟರ್) ಪ್ರಾರಂಭಿಸಲಾಗಿತ್ತು. ಇದೀಗ ಇಲ್ಲಿ 30 ಹಾಸಿಗೆಗಳ ಸಾಮರ್ಥ್ಯದ ಮಕ್ಕಳ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಿಸಲಾಗಿದೆ. ಇದರ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಎರಡು ಹಾಸಿಗೆಗಳು, ಎಚ್‌ಡಿಯುವಿನಲ್ಲಿ 8 ಹಾಸಿಗೆಗಳಿವೆ. ಆಮ್ಲಜನಕ ಪೂರಣ ವ್ಯವಸ್ಥೆ ಹೊಂದಿರುವ 20 ಹಾಸಿಗೆಗಳ ವ್ಯವಸ್ಥೆ ಇಲ್ಲಿದೆ' ಎಂದು ತಿಳಿಸಿದರು

'ಈ ಆಸ್ಪತ್ರೆಯಲ್ಲಿ ಮಕ್ಕಳಿಗೆ ಚಿಕಿತ್ಸೆ ನೀಡಲು ಇಂದಿರಾ ಗಾಂಧಿ ಆಸ್ಪತ್ರೆಯ ಮಕ್ಕಳ ತಜ್ಞರಿಂದ ಪಾಲಿಕೆಯ ಮಕ್ಕಳ ವೈದ್ಯರು, ಶುಶ್ರೂಷಕ ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ. ಕೋವಿಡ್‌ನ ಸೌಮ್ಯ ಮತ್ತು ಮಧ್ಯಮ ಲಕ್ಷಣಗಳಿರುವ ಮಕ್ಕಳಿಗೆ ಇಲ್ಲಿ ಚಿಕಿತ್ಸೆ ನೀಡಲಾಗುವುದು. ಕೋವಿಡ್‌ನ ಗಂಭೀರ ಲಕ್ಷಣಗಳಿರುವ ಮಕ್ಕಳಿಗೂ ಚಿಕಿತ್ಸೆ ನೀಡುವ ವ್ಯವಸ್ಥೆಯೂ ಇಲ್ಲಿದೆ. ಮಕ್ಕಳ ದೇಹಸ್ಥಿತಿ ತೀವ್ರ ಸ್ಥಿತಿ ತಲುಪಿದರೆ ಇನ್ನೂ ಉತ್ತಮ ಚಿಕಿತ್ಸಾ ಸೌಕರ್ಯಗಳಿರುವ ಆಸ್ಪತ್ರೆಗೆ ಅವರನ್ನು ಕಳುಹಿಸಲಾಗುವುದು' ಎಂದು ಅವರು ವಿವರಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಮಕ್ಕಳಲ್ಲಿ ಕೊರೊನಾ ಸೋಂಕಿನ ಪ್ರಮಾಣದಲ್ಲಿ ಯಾವುದೇ ಏರಿಕೆ ಆಗಿಲ್ಲ. ಸೋಂಕು ಪತ್ತೆಯಾದ ಬಹುತೇಕ ಮಕ್ಕಳಲ್ಲಿ ಸೌಮ್ಯ ಮತ್ತು ಮಧ್ಯಮ ಲಕ್ಷಣಗಳು ಮಾತ್ರ ಕಂಡುಬರುತ್ತಿವೆ. ಅವರು ಮನೆಯಲ್ಲೇ ಆರೈಕೆ ಪಡೆದು ಗುಣಮುಖರಾಗುತ್ತಿದ್ದಾರೆ. ಆಸ್ಪತ್ರೆಯಲ್ಲಿ ದಾಖಲಾದವರ ಸಂಖ್ಯೆ ತೀರಾ ಕಡಿಮೆಯಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಕೋವಿಡ್ ಇರುವ ಮಕ್ಕಳನ್ನು ಹೇಗೆ ಆರೈಕೆ ಮಾಡಬೇಕು ಎಂಬ ಬಗ್ಗೆ ಈಗಾಗಲೇ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ (ಆರ್‌ಡಬ್ಲ್ಯುಎ) ಮಾರ್ಗಸೂಚಿ ಬಿಡುಗಡೆ ಮಾಡಿದ್ದೇವೆ. ಮಕ್ಕಳ ಆರೋಗ್ಯದ ಮೇಲೆ ಹೆಚ್ಚಿನ ನಿಗಾ ವಹಿಸಲು ಸೂಚಿಸಿದ್ದೇವೆ' ಎಂದು ಅವರು ತಿಳಿಸಿದರು.

ಈ ಆಸ್ಪತ್ರೆಯಲ್ಲಿ ಹೊರರೋಗಿ ಮತ್ತು ಒಳರೋಗಿ ಸೌಲಭ್ಯಗಳಿವೆ. ಜನರಲ್ ಮೆಡಿಸಿನ್, ಮಕ್ಕಳ ಚಿಕಿತ್ಸೆ, ಕಣ್ಣು, ಮೂಳೆ, ದಂತ, ಸಾಮಾನ್ಯ ಶಸ್ತ್ರಚಿಕಿತ್ಸೆ, ಕಿವಿ, ಮೂಗು ಹಾಗೂ ಗಂಟಲು ಚಿಕಿತ್ಸಾ ವಿಭಾಗಗಳಿವೆ. ಗರ್ಭಕಂಠದ ಕ್ಯಾನ್ಸರ್ ತಪಾಸಣಾ ಸೌಲಭ್ಯವೂ ಇಲ್ಲಿದೆ. ಎಕ್ಸ್-ರೇ ಘಟಕ ಮತ್ತು ರಕ್ತ ಶೇಖರಣಾ ಘಟಕವನ್ನೊಳಗೊಂಡ ಹೈಟೆಕ್ ಪ್ರಯೋಗಾಲಯವೂ ಇದೆ.

₹5 ಲಕ್ಷ ಮೌಲ್ಯದ ವೈದ್ಯಕೀಯ ಉಪಕರಣ ದೇಣಿಗೆ

ಮಕ್ಕಳ ಚಿಕಿತ್ಸೆಗೆ ಅಗತ್ಯವಿರುವ ₹5 ಲಕ್ಷ ಮೌಲ್ಯದ ವೈದ್ಯಕೀಯ ಉಪಕರಣಗಳನ್ನು ಈ ಆಸ್ಪತ್ರೆಗೆ ಶಿಲ್ಪಾ ಸಿಂಗ್ ಮತ್ತು ಪಾರಿಸಾ ಸಿಂಗ್ ದೇಣಿಗೆಯಾಗಿ ನೀಡಿದ್ದಾರೆ. ಮೂರು ಬೈಪಾಸ್ ಯಂತ್ರ, ಗಂಟಲಿನ ಗೂಡಿನಲ್ಲಿರುವ ದನಿಪೆಟ್ಟಿಗೆಯ ಒಳಭಾಗವನ್ನು ಪರೀಕ್ಷಿಸಲು ಉಪಯೋಗಿಸುವ ಕನ್ನಡಿಯನ್ನೊಳಗೊಂಡ ವಿಡಿಯೊ ಲಾರಿಂಗೋಸ್ಕೋಪ್ ಉಪಕರಣ, 50 ಲೀ. ಸ್ಯಾನಿಟೈಸರ್ ಹಾಗೂ 300 ಪಿಪಿಇ ಕಿಟ್‌ಗಳನ್ನು ಅವರು ನೀಡಿದ್ದಾರೆ. ಡಿ.ರಂದೀಪ್ ಅವರು ಉಪಕರಣಗಳನ್ನು ಸ್ವೀಕರಿಸಿದರು. ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ. ನಿರ್ಮಲಾ ಬುಗ್ಗಿ ಹಾಗೂ ಇತರ ಅಧಿಕಾರಿಗಳು ಇದ್ದರು.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,33,512 ▲ ಒಟ್ಟು ಸೋಂಕಿತರು


7,913 ▼	12,09,647 ▲	15,951 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	340 ▲
ಗುಣಮುಖ	471 ▲
ಸಾವು	10 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್



ನಿಷೇಧಾಜ್ಞೆ ಮುಂದುವರಿಕೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಜಾರಿಗೊಳಿಸಲಾಗಿರುವ ನಿಷೇಧಾಜ್ಞೆಯನ್ನು ಆಗಸ್ಟ್ 30ರವರೆಗೂ ಮುಂದುವರಿಸಲಾಗಿದೆ.

ಈ ಬಗ್ಗೆ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಮಂಗಳವಾರ ಆದೇಶ ಹೊರಡಿಸಿದ್ದಾರೆ.

'ಬಸ್ ನಿಲ್ದಾಣ, ಮೆಟ್ರೊ, ರೈಲ್ವೆ ನಿಲ್ದಾಣ ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪರಸ್ಪರ ಅಂತರ ಕಾಯ್ದುಕೊಳ್ಳಬೇಕು. ನಾಲ್ಕು ಹಾಗೂ ಅದಕ್ಕಿಂತ ಹೆಚ್ಚು ಜನ ಗುಂಪು ಸೇರಬಾರದು. ನಿಯಮ ಉಲ್ಲಂಘಿಸಿದರೆ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ಜರುಗಿಸಲಾಗುವುದು' ಎಂದೂ ಆದೇಶದಲ್ಲಿ ಎಚ್ಚರಿಸಲಾಗಿದೆ.

ಕ್ರೀಡಾಪಟುಗಳಿಂದ ಅರ್ಜಿ ಆಹ್ವಾನ

ಬೆಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯದ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕ ಮರುಪಾವತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2021-22ನೇ ಸಾಲಿನಲ್ಲಿ ನಡೆದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿ, ಪದಕ ಪಡೆದ ಹಾಗೂ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳು ಸೆಪ್ಟೆಂಬರ್ 13ರೊಳಗೆ ಅರ್ಜಿ ಸಲ್ಲಿಸಬಹುದು.

ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ: 2020ನೇ ಸಾಲಿನ ಹಿರಿಯ ಕ್ರೀಡಾಪಟು ಹಾಗೂ ತರಬೇತುದಾರರಾಗಿ ಸಾಧನೆ ಮಾಡಿರುವ ಹಿರಿಯ ಕ್ರೀಡಾಪಟುಗಳಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ಹಾಗೂ ಗ್ರಾಮೀಣ ಕ್ರೀಡೆಗಳಿಗೆ ಮತ್ತು ಕ್ರೀಡಾಪಟುಗಳಿಗಳಿಗೆ ನೀಡುವ 'ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ'ಗಳಿಗೂ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಸೇವಾ ಸಿಂಧು ಪೋರ್ಟಲ್ https://serviceonline.gov.in/karnataka ಮೂಲಕ ಸೆಪ್ಟೆಂಬರ್ 15ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಕೊಠಡಿ ಸಂಖ್ಯೆ 17-18, ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ. **ಸಂಪರ್ಕ:** 08022239771, 9480886470

ಔಷಧ ಉದ್ದಿಮೆದಾರರಿಗೆ ಸಚಿವ ಸುಧಾಕರ್ ಮನವಿ

'ಲಸಿಕಾ ಆಂದೋಲನಕ್ಕೆ ಕೈ ಜೋಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರವು ಶೇ 25ರಷ್ಟು ಲಸಿಕೆಯನ್ನು ಖಾಸಗಿ ವಲಯಕ್ಕೆ ಹಂಚಿಕೆ ಮಾಡುತ್ತಿದೆ. ಅದನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯ ಅಡಿಯಲ್ಲಿ ಖರೀದಿಸಿ, ದೇಣಿಗೆ ರೂಪದಲ್ಲಿ ರಾಜ್ಯ ಸರ್ಕಾರಕ್ಕೆ ನೀಡಿ. ಆ ಮೂಲಕ ಲಸಿಕಾ ಆಂದೋಲನಕ್ಕೆ ಕೈಜೋಡಿಸಿ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ರಾಜ್ಯದ ಪ್ರಮುಖ ಔಷಧ ಉದ್ದಿಮೆದಾರರಿಗೆ ಮನವಿ ಮಾಡಿದರು.

ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು 'ಮೂರನೇ ಅಲೆ ಅಷ್ಟೇನು ಪರಿಣಾಮಕಾರಿಯಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಹಾಗಂತ ಮೈಮರೆಯುವುದಿಲ್ಲ. ಲಸಿಕೆಯ ಎರಡು ಡೋಸ್‌ಗಳನ್ನು ಪಡೆದವರಲ್ಲಿ ಸೋಂಕಿನ ತೀವ್ರತೆ ಕಡಿಮೆ, ಅಂತಹವರು ಪ್ರಾಣಾಪಾಯದಿಂದ ಪಾರಾಗಬಲ್ಲರು ಎಂಬುದು ಸಾಬೀತಾಗಿದೆ. ಹೀಗಾಗಿ ಸಾಧ್ಯವಾದಷ್ಟು ಬೇಗನೆ ಎಲ್ಲರಿಗೂ ಲಸಿಕೆ ನೀಡಬೇಕಾಗಿದೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ' ಎಂದರು.

ಆಮ್ಲಜನಕದ ಕೊರತೆ ನೀಗಿಸಲು ಕ್ರಮ: ಸಂಭವನೀಯ ಮೂರನೇ ಅಲೆಯ ಸಂದರ್ಭದಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯಾಗದಂತೆ ಕ್ರಮ ವಹಿಸಲಾಗುವುದು. ಈ ಸಂಬಂಧ ಉದ್ಯಮಗಳ ಜೊತೆ ಸರ್ಕಾರ ಸಮನ್ವಯದಿಂದ ಕೆಲಸ ಮಾಡಲಿದೆ' ಎಂದು ಸುಧಾಕರ್ ತಿಳಿಸಿದರು.

ಆಮ್ಲಜನಕ ಉತ್ಪಾದಕ ಕಂಪನಿಗಳ ಪ್ರತಿನಿಧಿಗಳೊಂದಿಗಿನ ಸಭೆಯ ಬಳಿಕ ಮಾತನಾಡಿ 'ಪ್ರಸ್ತುತ ಏಳು ಕಂಪನಿಗಳು ಪ್ರತಿನಿತ್ಯ ಒಟ್ಟು 812 ಟನ್‌ಗಳಷ್ಟು ಆಮ್ಲಜನಕ ಉತ್ಪಾದಿಸುತ್ತಿವೆ. ಸದ್ಯ 5,381 ಟನ್ ಆಮ್ಲಜನಕ ದಾಸ್ತಾನು ಇದೆ. ಮುಂದಿನ ದಿನಗಳಲ್ಲಿ ಎಲ್ಲ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಆಮ್ಲಜನಕ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದೇವೆ' ಎಂದು ಹೇಳಿದರು.

ಕೋವಿಡ್: ಗುಣಮುಖರಿಗೆ ಮುಂದುವರಿದ ಸಮಸ್ಯೆ

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಿಗೆ ಉಸಿರಾಟ ಸೇರಿದಂತೆ ವಿವಿಧ ಸಮಸ್ಯೆಗಳು ಮುಂದುವರಿದಿದ್ದು, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿರುವ ಕೋವಿಡ್ ಪುನರ್ವಸತಿ ಕೇಂದ್ರಕ್ಕೆ ಮೂರು ವಾರಗಳಲ್ಲಿ 40 ಮಂದಿ ಹೊರ ರೋಗಿಗಳಾಗಿ ಭೇಟಿ ನೀಡಿದ್ದಾರೆ.

ಕೇಂದ್ರದಲ್ಲಿನ ವೈದ್ಯರು ಗುಣಮುಖರಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳನ್ನು ಗುರುತಿಸಿ, ಚಿಕಿತ್ಸೆ ಒದಗಿಸುತ್ತಿದ್ದಾರೆ. ಕೋವಿಡ್ ಕಾಣಿಸಿಕೊಂಡಾಗಿನಿಂದ ಈವರೆಗೆ ಒಟ್ಟು 490 ಮಂದಿ ಭೇಟಿ ನೀಡಿ, ಚಿಕಿತ್ಸೆ ಪಡೆದುಕೊಂಡಿದ್ದಾರೆ. ಈ ವರ್ಷ ಮೇ ಅಂತ್ಯಕ್ಕೆ 200 ಮಂದಿ ಚಿಕಿತ್ಸೆ ಪಡೆದುಕೊಂಡಿದ್ದರು. ಕಳೆದ ಎರಡೂವರೆ ತಿಂಗಳಲ್ಲಿ 290 ಮಂದಿ ಕೇಂದ್ರವನ್ನು ಸಂಪರ್ಕಿಸಿ, ತಪಾಸಣೆಗೆ ಒಳಪಟ್ಟಿದ್ದಾರೆ. ಬಹುತೇಕರಿಗೆ ಮಲ್ಟಿಪಲ್ ಸ್ಕ್ಲೆರೋಸಿಸ್ ಸಮಸ್ಯೆ (ಬಹುಅಂಗಾಂಗ ಉರಿಯೂತ) ಕಾಣಿಸಿಕೊಂಡಿದೆ.

ಸದ್ಯ 8 ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಉಸಿರಾಟದ ಸಮಸ್ಯೆ, ಮೈ-ಕೈ ನೋವು, ಕೆಮ್ಮು ಸೇರಿದಂತೆ ವಿವಿಧ ಸಮಸ್ಯೆಗಳು ಕೇಂದ್ರಕ್ಕೆ ಭೇಟಿ ನೀಡಿದವರಲ್ಲಿ ಸಾಮಾನ್ಯವಾಗಿವೆ.

'ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ ಕೆಲವರಿಗೆ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಕೇಂದ್ರಕ್ಕೆ ಭೇಟಿ ನೀಡಿದವರಲ್ಲಿ ಹೆಚ್ಚಿನವರು ಮಧ್ಯ ವಯಸ್ಕರಾಗಿದ್ದಾರೆ. ಗುಣಮುಖರಾದ ಎರಡರಿಂದ ಮೂರು ತಿಂಗಳ ಬಳಿಕ ಸಮಸ್ಯೆಗಳು ಕಂಡುಬರುತ್ತವೆ. ಕೋವಿಡ್ ಪ್ರಕರಣಗಳ ಇಳಿಕೆ ಹಾಗೂ ಸ್ಟೆರಾಯ್ಡ್ ಬಳಕೆ ನಿಯಂತ್ರಣದಿಂದ ಕೋವಿಡೋತ್ತರ ಸಮಸ್ಯೆಗಳು ಕೂಡ ಕಡಿಮೆಯಾಗುತ್ತಿವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.



ನಿರ್ಮಲಾನಂದನಾಥ ಸ್ವಾಮೀಜಿ ಅವರು ಬಾಲ ವಿಜ್ಞಾನಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಹಿರಿಯ ವಿಜ್ಞಾನಿ ವಿ.ಕೆ.ಅತ್ರೆ, ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಅಧ್ಯಕ್ಷ ಗಿರೀಶ್ ಕಡ್ಲೇವಾಡ ಇದ್ದರು– ಪ್ರಜಾವಾಣಿ ಚಿತ್ರ

'ವಿಜ್ಞಾನಕ್ಕೆ ಒತ್ತು ನೀಡಿದರೆ ಸಮಾಜಕ್ಕೆ ಒಳಿತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರ ಕ್ಷೇತ್ರಗಳಲ್ಲಿ ಕರ್ನಾಟಕವು ಇಡೀ ದೇಶದಲ್ಲೇ ಮುಂಚೂಣಿಯಲ್ಲಿದೆ. ಈ ಮೂರು ಮಾರ್ಗಗಳಲ್ಲಿ ಸಾಗಿದಾಗ ನಮ್ಮ ಪ್ರತಿಯೊಂದು ಸಮಸ್ಯೆಗೂ ಪರಿಹಾರ ಕಂಡುಕೊಳ್ಳಲು ಸಾಧ್ಯ. ವಿಜ್ಞಾನಕ್ಕೆ ಹೆಚ್ಚಿನ ಒತ್ತು ನೀಡಬೇಕು. ಅದರಿಂದ ಸಮಾಜಕ್ಕೆ ಒಳಿತಾಗುತ್ತದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಜ್ಯಮಟ್ಟದ 28ನೇ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಬಾಲ ವಿಜ್ಞಾನಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಂಗಳವಾರ ಮಾತನಾಡಿದರು.

'ಪ್ರತಿಯೊಬ್ಬರ ಪ್ರಗತಿ, ಏಳಿಗೆ ಹೀಗೆ ಎಲ್ಲವೂ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ. ಹೀಗಾಗಿ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಮಕ್ಕಳು ಈ ದೇಶದ ಭವಿಷ್ಯ. ಅವರ ಬದುಕು ರೂಪಿಸಲು ನಮ್ಮ ಜೀವನ ಮುಡಿಪಾಗಿಡುತ್ತೇವೆ' ಎಂದು ತಿಳಿಸಿದರು.

₹2 ಲಕ್ಷ ದತ್ತಿ ನಿಧಿ: ಭಾರತದ ಭಾವಿ ವಿಜ್ಞಾನಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರು ವಿಜ್ಞಾನ ದತ್ತಿ ನಿಧಿ ಸ್ಥಾಪಿಸಿದ್ದು, ಕಾರ್ಯಕ್ರಮದಲ್ಲಿ ವಿಜ್ಞಾನ ಪರಿಷತ್‌ಗೆ ₹2 ಲಕ್ಷದ ಚೆಕ್ ಹಸ್ತಾಂತರಿಸಿದರು. ಈ ನಿಧಿಯ ಅಡಿಯಲ್ಲಿ ಪ್ರತಿ ವರ್ಷ ಬಾಲ ವಿಜ್ಞಾನಿಗಳಿಗೆ ಬಹುಮಾನ ನೀಡಲಾಗುತ್ತದೆ.

ಪಶ್ಚಿಮಘಟ್ಟದ ಮಾಂದಲ್‌ಪಟ್ಟಿ ಬೆಟ್ಟ ನೀಲಿಮಯ

ಮತ್ತೆ ನೀಲಕುರಿಂಜಿ ಅರಳಿತು!

ಪ್ರಜಾವಾಣಿ ವಾರ್ತೆ



ಮಡಿಕೇರಿ ಸಮೀಪದ ಮಾಂದಲ್‌ಪಟ್ಟಿಯಲ್ಲಿ ಕಣ್ಮನ ಸೆಳೆಯುವ ನೀಲಕುರಿಂಜಿ ಹೂವು

ಮಡಿಕೇರಿ: ಪಶ್ಚಿಮ ಘಟ್ಟದ ಅರಣ್ಯ ಪ್ರದೇಶ ಹಾಗೂ ಬೆಟ್ಟದ ಸಾಲಿನ ಪ್ರಸಿದ್ಧ ಪ್ರವಾಸಿ ತಾಣ ಮಾಂದಲ್‌ಪಟ್ಟಿಯಲ್ಲಿ 12 ವರ್ಷಗಳ ಬಳಿಕ ನೀಲಕುರಿಂಜಿ ಹೂವು ಅರಳಿದ್ದು, ಬೆಟ್ಟದ ಶ್ರೇಣಿ ನೀಲಿಮಯವಾಗಿ ಕಂಗೊಳಿಸುತ್ತಿದೆ. ಸಂಘಜೀವಿಯಾಗಿ ಅರಳುವ ಹೂವು ಅಪರೂಪಕ್ಕೊಮ್ಮೆ ಅರಳಿ ಕಾಫಿ ನಾಡಿನ ಬೆಟ್ಟಗಳ ಅಂದ ಹೆಚ್ಚಿಸುತ್ತಿವೆ.

ವಾರಾಂತ್ಯ ಕರ್ಫ್ಯೂ ಕಾರಣಕ್ಕೆ ವಾರದ ಮಧ್ಯದಲ್ಲೂ ಪ್ರವಾಸಿಗರು ಬಂದು ನೀಲಿ ಬೆಟ್ಟದ ಅಂದವನ್ನು ಸವಿದು, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸುತ್ತಿದ್ದಾರೆ. ಹೂವು ಅರಳಿ ಒಂದು ವಾರವಾಗಿದ್ದು, ಇನ್ನೂ ಕೆಲವು ದಿನಗಳ ಸೊಬಗನ್ನು ಕಣ್ತುಂಬಿಕೊಳ್ಳಬಹುದು.

ಪಶ್ಚಿಮಘಟ್ಟದ ಸಾಲಿನ ಕೋಟೆಬೆಟ್ಟ, ಪುಷ್ಪಗಿರಿ, ಕುಮಾರ ಪರ್ವತದಲ್ಲಿ ಹೂವುಗಳು ಅರಳುವುದುಂಟು. ಕಳೆದ ಸೆಪ್ಟೆಂಬರ್‌ನಲ್ಲಿ ಕೋಟೆಬೆಟ್ಟದಲ್ಲಿ 7 ವರ್ಷಗಳ ಬಳಿಕ ಹೂವು ಅರಳಿ ಸೌಂದರ್ಯ ಹೊರಚೆಲ್ಲಿತ್ತು.

'ಗುರ್ಗಿ' ಎಂಬ ಹೆಸರುಳ್ಳ ಇದು 'ಪ್ರೇಮದ ಹೂವು' ಎಂದೂ ಪ್ರಸಿದ್ಧಿ. 'ಮಳೆ, ಗಾಳಿ, ನೀರು, ಬೆಳಕು ಹಾಗೂ ಪ್ರಕೃತಿಯ ಸಮತೋಲನವಿದ್ದಾಗ ಮಾತ್ರ ಅರಳುತ್ತವೆ' ಎನ್ನುತ್ತಾರೆ ಹಿರಿಯರು. ಕಾಂಡಗಳಲ್ಲಿ ಔಷಧೀಯ ಗುಣಗಳಿರುವುದು ವಿಶೇಷ. 250 ಜಾತಿಯ ನೀಲಕುರಿಂಜಿ ಪೈಕಿ 46 ಜಾತಿಯ ಹೂವುಗಳು ಭಾರತದಲ್ಲಿ ಕಂಡುಬರುತ್ತವೆ. ಕೆಲವು ಜಾತಿಯ ಹೂವುಗಳು ಪ್ರತಿ 5, 7, 12, 14 ವರ್ಷಗಳಿಗೊಮ್ಮೆ ಅರಳುತ್ತವೆ.

> **ಹೂವು ಅರಳಿದಾಗ ಒಂದು ತಿಂಗಳು ಕಾಲ ಸೌಂದರ್ಯ ಹೊರ ಚೆಲ್ಲುತ್ತದೆ. ಸಂರಕ್ಷಿತ ಪ್ರದೇಶದಲ್ಲಿ ಮಾತ್ರ ಹೂವು ಜೀವಂತವಾಗಿದೆ**
>
> **ಮಹೇಶ್,** ಮಾಂದಲ್‌ಪಟ್ಟ

ಉದಕಮಂಡಲ ರೇಸ್

ಎಂಜೆಲಿಕಾಝಿ ಗೆಲ್ಲುವ ನಿರೀಕ್ಷೆ

ಸ್ಥಗಿತಗೊಳಿಸಲಾಗಿದ್ದ ಉಳಿದ ಉದಕಮಂಡಲ ರೇಸ್‌ಗಳು ಬುಧವಾರದಿಂದ ಚೆನ್ನೈನಲ್ಲಿ ನಡೆಯಲಿವೆ. ದಿನದ ಪ್ರಧಾನ ಆಕರ್ಷಣೆ ಮದ್ರಾಸ್ ರೇಸ್ ಕ್ಲಬ್ ಕಪ್ ರೇಸ್‌ನಲ್ಲಿ ಎಂಜೆಲಿಕಾಝಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ರೊಮ್ಯಾಂಟಿಕ್ ಬೇ 3, ಡ್ರಿಫ್ಟ್‌ವುಡ್ ಪೆಸಿಫಿಕ್ 9, ಪಿಂಕ್ ಪರ್ಲ್ 4

2ನೇ ರೇಸ್: ಸ್ಟೈಲೈಟ್ 4, ಬೊಹಿಮಿಯನ್ ಗ್ರ್ಯಾಂಡಿಯೂರ್ 5, ಪಾಲ್ಲಿ ವಾಲ್ಲಿ 6

3ನೇ ರೇಸ್: ಮಿಸ್ಟರ್ ಕೂಲ್ 5, ಮೆಜೆಸ್ಟಿಕ್ ಚಾರ್ಮರ್ 4, ಅನೆಕ್ಸ್ 6

4ನೇ ರೇಸ್: ಗ್ಲೋರಿಯಸ್ ಸಿಂಫೋನಿ 6, ಮಾಸ್ಟರ್‌ಪೀಸ್ 1, ಫ್ಯಾಷನ್ ಆಫ್ ಸ್ಟಾರ್ಸ್ 4

5ನೇ ರೇಸ್: ಎಂಜೆಲಿಕಾಝಿ 4, ಪ್ರೈಸ್‌ಲೆಸ್ ರೂಲರ್ 4, ರಾಯಲ್ ಕರೆನ್ಸಿ 8

6ನೇ ರೇಸ್: ಏಂಜೆಲ್ ಹಾರ್ಟ್ 4, ಎಮೆಲ್ಡಾ 6, ಪೆನ್ಸೀ 8

7ನೇ ರೇಸ್: ರಿಪ್ಲಿಂಗ್ ವಾಟರ್ಸ್ 2, ಶಾಲೆಮ್ 1, ಮಾಂಗೋನಿ 6

ಉತ್ತಮ ಬೆಟ್: ಗ್ಲೋರಿಯಸ್ ಸಿಂಫೋನಿ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6,7	2,3,4	5,6,7

ಕಠಿಣ ಅರಣ್ಯ ಕಾನೂನು: ಬೇಸರ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿ ಅರಣ್ಯ ಸಂರಕ್ಷಣೆಯ ಕಾನೂನುಗಳು ಕಠಿಣವಾಗಿವೆ. ಸ್ವಂತ ಜಮೀನಿನಲ್ಲಿ ಬೆಳೆಸಿದ ಮರ ಕಡಿಯಲೂ ಆಗದೆ ರೈತರು ತೊಂದರೆಯಲ್ಲಿದ್ದಾರೆ' ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಬೇಸರ ವ್ಯಕ್ತಪಡಿಸಿದರು.

'ಕೇಂದ್ರ ಸರ್ಕಾರವು ಅರಣ್ಯ ಕೃಷಿಯನ್ನು ಉತ್ತೇಜಿಸುತ್ತಿದೆ. ಶ್ರೀಗಂಧ ಸೇರಿದಂತೆ ರೈತರು ಬೆಳೆಸಿದ ಎಲ್ಲಾ ರೀತಿಯ ಮರಗಳನ್ನು ಕಡಿದು ಸಾಗಾಟ ಮಾಡಲು ಅನುಕೂಲವಾಗುವಂತೆ ಪ್ರಧಾನಿ ಮೋದಿ ಕಾಯ್ದೆಯನ್ನು ಸಡಿಲಗೊಳಿಸುವ ಪ್ರಯತ್ನದಲ್ಲಿದ್ದಾರೆ. ರಾಜ್ಯದಲ್ಲೂ ಕಾನೂನು ಸಡಿಲಗೊಳಿಸಬೇಕು. ಈ ಕುರಿತು ಅರಣ್ಯ ಸಚಿವ ಉಮೇಶ್ ಕತ್ತಿಯವರೊಡನೆ ಚರ್ಚಿಸಿದ್ದೇನೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರ ಸಚಿವ ಭಗವಂತ ಖೂಬಾ ಮಾಹಿತಿ

3 ಕಡೆ ಸೋಲಾರ್ ಪಾರ್ಕ್

ಪ್ರಜಾವಾಣಿ ವಾರ್ತೆ

ಬೀದರ್: 'ಖಾಸಗಿ ಸಹಭಾಗಿತ್ವದಲ್ಲಿ ₹4,800 ಕೋಟಿ ಯೋಜನಾ ವೆಚ್ಚದಲ್ಲಿ ಕೊಪ್ಪಳ, ಬಾಗಲಕೋಟೆ ಹಾಗೂ ಬೀದರ್ ಜಿಲ್ಲೆಯ ಔರಾದ್‌ನಲ್ಲಿ ಸೋಲಾರ್ ಪಾರ್ಕ್ ನಿರ್ಮಾಣ ಮಾಡಲಾಗುವುದು' ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

'ಒಂದು ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಆರಂಭಿಕ ಸರಾಸರಿ ₹3.75 ಕೋಟಿಯಿಂದ ₹4 ಕೋಟಿ ವೆಚ್ಚವಾಗಲಿದೆ. ಪ್ರತಿಯೊಂದು ಪಾರ್ಕ್‌ನಲ್ಲಿ 1,200 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುವುದು' ಎಂದು ಮಂಗಳವಾರ ಇಲ್ಲಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.



ಭಗವಂತ ಖೂಬಾ

'ಕೊಪ್ಪಳದಲ್ಲಿ 15 ಸಾವಿರ ಎಕರೆ, ಬಾಗಲಕೋಟೆಯಲ್ಲಿ 9,600 ಎಕರೆ ಜಾಗ ಗುರುತಿಸಲಾಗಿದೆ. ಔರಾದ್‌ನಲ್ಲಿ ರೈತರ ಜಮೀನುಗಳನ್ನು 25 ವರ್ಷಗಳ ಅವಧಿಗೆ ಭೋಗ್ಯಕ್ಕೆ ಪಡೆದು ಅವರಿಗೆ ಪ್ರತಿ ಎಕರೆಗೆ ವರ್ಷಕ್ಕೆ ₹ 25 ಸಾವಿರ ಕೊಡಲಾಗುವುದು. ಪಾರ್ಕ್ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ' ಎಂದರು.

'ರಾಷ್ಟ್ರೀಯ ಸೋಲಾರ್ ನೀತಿಯನ್ನು ಪರಿಷ್ಕರಿಸಲಾಗುವುದು. ಸೋಲಾರ್ ಪಾರ್ಕ್‌ನಲ್ಲಿ ಉತ್ಪಾದನೆಯಾಗುವ ವಿದ್ಯುತ್‌ಅನ್ನು ವಿದ್ಯುತ್ ಕಂಪನಿಗಳು ಕಡ್ಡಾಯವಾಗಿ ಖರೀದಿಸುವಂತೆ ಆದೇಶ ಹೊರಡಿಸಲಾಗುವುದು. ಗ್ರಾಹಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡುವುದೇ ಇದರ ಉದ್ದೇಶವಾಗಿದೆ' ಎಂದು ತಿಳಿಸಿದರು.

ಫಾರ್ಮಾ ಪಾರ್ಕ್: 'ಯಾದಗಿರಿ ಜಿಲ್ಲೆಯ ಕಡೇಚೂರಿನಲ್ಲಿ ₹ 100 ಕೋಟಿ ವೆಚ್ಚದಲ್ಲಿ ಫಾರ್ಮಾ ಪಾರ್ಕ್ ನಿರ್ಮಿಸಲಾಗುವುದು. ಇದಕ್ಕೆ ರಾಜ್ಯ ಸರ್ಕಾರ ಜಮೀನು ಹಾಗೂ ಮೂಲಸೌಕರ್ಯ ಒದಗಿಸಬೇಕಾಗಲಿದೆ. ಪ್ಲಾಸ್ಟಿಕ್ ಪಾರ್ಕ್ ನಿರ್ಮಾಣಕ್ಕೆ ಮಂಗಳೂರು ಹಾಗೂ ಯಾದಗಿರಿ ಜಿಲ್ಲೆಯಿಂದ ಪ್ರಸ್ತಾವ ಬಂದಿದ್ದು, ಶೀಘ್ರ ಪ್ರಕ್ರಿಯೆ ಪ್ರಾರಂಭ ಮಾಡಲಾಗುವುದು' ಎಂದು ಖೂಬಾ ತಿಳಿಸಿದರು.

ಕಸಾಪ: ಆಡಳಿತಾಧಿಕಾರಿ ನೇಮಕ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಸೆ.3ರಿಂದ ಜಾರಿಗೆ ಬರುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಪರಿಷತ್ತಿನ ಹಾಲಿ ಕಾರ್ಯಕಾರಿ ಸಮಿತಿಯ ಅಧಿಕಾರಾವಧಿಯು ಸೆ.2ಕ್ಕೆ ಅಂತ್ಯವಾಗಲಿದೆ. ಸೆ.3ರಿಂದ ಅನ್ವಯವಾಗುವಂತೆ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕಸಾಪ ಅಧ್ಯಕ್ಷ ಮನು ಬಳಿಗಾರ್ ಅವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಈಗ ಸರ್ಕಾರವು ಪ್ರಭಾರಿ ಆಡಳಿತಾಧಿಕಾರಿಯಾಗಿ ರಂಗಪ್ಪ ಅವರನ್ನು ನೇಮಿಸಿದೆ.

ಪರಿಷತ್ತಿನ ಚುನಾವಣೆಯು ಮೇ 9ರಂದು ಈ ಹಿಂದೆ ನಿಗದಿಯಾಗಿತ್ತು. ನಾಮಪತ್ರ ಪರಿಶೀಲನೆ ಸೇರಿದಂತೆ ವಿವಿಧ ಪ್ರಕ್ರಿಯೆಗಳು ಪೂರ್ಣಗೊಂಡು, ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಂತಿಮವಾಗಿ 21 ಮಂದಿ ಸ್ಪರ್ಧೆಯಲ್ಲಿದ್ದರು.

ಮಹಾ ಲೇಖಪಾಲರಾಗಿ ಶಾಂತಿ ಪ್ರಿಯಾ

ಬೆಂಗಳೂರು: ಕರ್ನಾಟಕ ರಾಜ್ಯದ ಪ್ರಧಾನ ಮಹಾ ಲೇಖಪಾಲರಾಗಿ ಶಾಂತಿ ಪ್ರಿಯಾ ಸರೆಲ್ಲಾ ಅವರು ನೇಮಕೊಂಡಿದ್ದು, ಮಂಗಳವಾರ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಹಿಂದೆ ಅವರು ರಕ್ಷಣಾ ಸಚಿವಾಲಯದಲ್ಲಿ ಹಣಕಾಸು ನಿರ್ದೇಶಕಿಯಾಗಿ, ರಾಷ್ಟ್ರೀಯ ಗ್ರಾಮೀಣ ರಸ್ತೆ ಅಭಿವೃದ್ಧಿ ಏಜೆನ್ಸಿಯ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಅಲ್ಲದೆ, ಕೆಪಿಟಿಸಿಎಲ್‌ನ ಆಂತರಿಕ ಲೆಕ್ಕಪರಿಶೋಧನೆಯ ಜನರಲ್ ಮ್ಯಾನೇಜರ್ ಕೂಡಾ ಆಗಿದ್ದರು. ಇವರು ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದ ಸ್ವತಂತ್ರರಾವ್ ಅವರ ಪುತ್ರಿ.

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ದತ್ತಿ ಇಲಾಖೆ
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ
ಎಸ್.ಎಸ್.ಘಾಟಿ, ದೊಡ್ಡಬಳ್ಳಾಪುರ ತಾಲ್ಲೂಕು–561203, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂ: 080–27657131. ಇ–ಮೇಲ್– shrighatisubrahmanyatempleeo@gmail.com
ಎಸ್‌ಜಿಎಸ್/ಡಿವಿಎಸ್/ಸಿಆರ್ 03/2019–20 16–08–2021

"ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ"

ದಿನಾಂಕ: 16–08–2021ರಂದು ದೊಡ್ಡಬಳ್ಳಾಪುರ ತಾಲ್ಲೂಕು, ಎಸ್.ಎಸ್.ಘಾಟಿ ಶ್ರೀಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ಅನ್ನದಾಸೋಹಕ್ಕೆ ಅಗತ್ಯವಾದ ದಿನಸಿ ಸಾಮಗ್ರಿಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಇ–ಟೆಂಡರ್ ಧರಪಟ್ಟಿಗಳನ್ನು www.eproc.karnataka.gov.in ವೆಬ್‌ಸೈಟ್‌ನಲ್ಲಿ ಆಹ್ವಾನಿಸಲಾಗಿದೆ.
ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿ, ಶ್ರೀಘಾಟಿಸುಬ್ರಹ್ಮಣ್ಯಸ್ವಾಮಿ ದೇವಾಲಯರವರ ಕಛೇರಿಯನ್ನು ಸಂಪರ್ಕಿಸುವುದು.

ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಎಸ್.ಎಸ್.ಘಾಟಿ.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ : 5ನೇ ಮಹಡಿ, ಟಿಟಿಎಂಸಿ ಎ ಬ್ಲಾಕ್, ಬಿಎಂಟಿಸಿ ಬಿಲ್ಡಿಂಗ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಫೋನ್ : 080 – 22278813/14/15/16,
ಫ್ಯಾಕ್ಸ್ : 080–22213172 Website: www.ksmc.karnataka.gov.in
No. KSMCL/CIVIL/GCP/Land/182/VOL-2/2021-22/1068 Date: 17.08.2021

ಇ–ಟೆಂಡರ್ ಅಧಿಸೂಚನೆ

ಕೆ.ಎಸ್.ಎಂ.ಸಿ.ಎಲ್ ಇವರು ಹಾಸನದ ಬಿ.ಕಾಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಸಮಗ್ರ ತಂತ್ರಜ್ಞಾನ ಪಾರ್ಕ್ ಅಭಿವೃದ್ಧಿಗೆ ಪ್ರತಿಷ್ಠಿತ ಸಮಗ್ರ ಯೋಜನಾ ಅಭಿವೃದ್ಧಿ ಸಲಹೆಗಾರರನ್ನು (Comprehensive Project Development Consultant) ಆಯ್ಕೆ ಮಾಡಲು ಇ–ಟೆಂಡರ್ ಆಹ್ವಾನಿಸುತ್ತದೆ.

ಪ್ರಕ್ರಿಯೆಗಳ ವೇಳಾಪಟ್ಟಿ

(ಎ)	ಪ್ರಿ–ಬಿಡ್ ಸ್ಪಷ್ಟೀಕರಣ ಸ್ವೀಕರಿಸಲು ಕೊನೆಯ ದಿನಾಂಕ:	27.08.2021, ಮಧ್ಯಾಹ್ನ 3.00 ಗಂಟೆವರೆಗೆ.
(ಬಿ)	ಪ್ರಿ–ಬಿಡ್ ಮೀಟಿಂಗ್	31.08.2021, ಬೆಳಗ್ಗೆ 11.00 ಗಂಟೆಗೆ. ಕೆ.ಎಸ್.ಎಂ.ಸಿ.ಎಲ್ ಕಾರ್ಪೊರೇಟ್ ಕಚೇರಿ, ಬೆಂಗಳೂರು, ಇಲ್ಲಿ.
(ಸಿ)	ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	17.09.2021, ಸಂಜೆ 5.00 ಗಂಟೆವರೆಗೆ.
(ಡಿ)	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	20.09.2021, ಬೆಳಗ್ಗೆ 11.00 ಗಂಟೆಗೆ.
(ಇ)	ಇ.ಎಂ.ಡಿ	ರೂ. 5.00 ಲಕ್ಷ. (ರೂ. ಐದು ಲಕ್ಷಗಳು ಮಾತ್ರ)

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://eproc.karnataka.gov.in ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ನೋಂದಣಿ ಮತ್ತು ಅಪ್ ಲೋಡಿಂಗ್ ಸಹಾಯಕ್ಕಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 080–46010000/68948777, ಇಮೇಲ್: support@eprochelpdesk.com ಇವರನ್ನು ಸಂಪರ್ಕಿಸಬಹುದು.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಎ & ವಿ)
DIPR/DDU/Zen/RO-1204/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ದ್ರಾಕ್ಷಾರಸ ಮಂಡಳಿ
(ಸರ್ಕಾರಿ ಸ್ವಾಮ್ಯದ ಸಂಸ್ಥೆ)
ಇಂದಿರಾ ಪ್ರಿಯದರ್ಶಿನಿ ಕಟ್ಟಡ, ಕಬ್ಬನ್ ಪಾರ್ಕ್,
ಬೆಂಗಳೂರು–560 001 ಟೆಲಿಫ್ಯಾಕ್ಸ್ : 080–22347237
ಇ–ಮೈಲ್ : md@karnatakawineboard.com
ಸಂಖ್ಯೆ: ಕ.ದ್ರಾ.ಮಂ/ವ್ಯನಿ/97/2020–21 ದಿನಾಂಕ : 28–07–2021

ಟೆಂಡರ್ ಅಹ್ವಾನ ಪ್ರಕಟಣೆ
(ದ್ವಿ ಲಕೋಟೆ ಪದ್ದತಿ) (ಜಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ದ್ರಾಕ್ಷಾರಸ ಮಂಡಳಿ, ಕಬ್ಬನ್ ಉದ್ಯಾನವನ, ಬೆಂಗಳೂರು ರವರು ಈ ಕೆಳಗಿನ ಸೇವೆಗಳಿಗೆ ಬಿಡ್ ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾರ್ಯಯೋಜನೆಯ ಹೆಸರು	ಯೋಜನಾ ವೆಚ್ಚ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಪ್ರಮಾಣೀಕೃತ ವೈನ್ ಶಿಕ್ಷಣ ಕಾಂರ್ಯಾಗಾರಕ್ಕಾಗಿ ಸೇವೆ ಒದಗಿಸುವುದು (ದ್ರಾಕ್ಷಾರಸ ಶಿಕ್ಷಣ ಪ್ರಶಂಸೆ ಮತ್ತು ಪರೀಕ್ಷೆ)	80.00	2.00

(1) ಪ್ರಸ್ತಾವನೆಯ (ಆರ್ ಎಫ್ ಪಿ) ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ಮೂಲಕ 28–07–2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
(2) ಪೂರ್ಣ ಪ್ರಮಾಣದ ದಾಖಲೆಗಳನ್ನು ದಿನಾಂಕ: 27–08–2021ರ ಸಂಜೆ 5–00 ಗಂಟೆಯೊಳಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ http://eproc.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ದ್ರಾಕ್ಷಾರಸ ಮಂಡಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ, ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.4 ಚಿಕ್ಕೋಡಿ ಫೋನ ನಂ:08338–272485 ಫ್ಯಾಕ್ಸ ನಂ: 08338–275186 ಇ–ಮೇಲ್ ಐಡಿ:ee_knnlgrbc4ckd@rediffmail.com

ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ–4
(ಇ–ಪ್ರೊಕ್ಯೂರಮೆಂಟ ಮೂಲಕ ಮಾತ್ರ)

ಟೆಂಡರ ಅವಧಿ ವಿಸ್ತರಣೆ ಅಧಿಸೂಚನೆ ಪತ್ರ ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರಲಿಂಗ ಏ.ನೀ.ಯೋ/ಅ.ವಿ/2021–22/ ದಿನಾಂಕ: 16–08–2021
ಉಲ್ಲೇಖ:1) ಈ ಕಚೇರಿಯ ಅಲ್ಪಾವಧಿ ಟೆಂಡರ ಅಧಿಸೂಚನೆ ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಟೆಂಡರ/2021–22/03 ದಿನಾಂಕ:17–07–2021. 2)ಸಂ:ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರಲಿಂಗ ಏ.ನೀ.ಯೋ/ಅ.ವಿ/2021–22/715 ದಿನಾಂಕ:26–7–2021 3)ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರಲಿಂಗ ಏ.ನೀ.ಯೋ/ಅ.ವಿ/2021–22/799 ದಿನಾಂಕ: 02–08–2021, 4) ಸಂ: ಕನೀನಿನಿ/ಜಿಆರ್‌ಬಿಸಿಸಿ ವಿ–4/ಅಡವಿಸಿದ್ದೇಶ್ವರ & ಶಂಕರಲಿಂಗ ಏ.ನೀ.ಯೋ/ಅ.ವಿ/2021–22/874 ದಿನಾಂಕ: 09–08–2021

ಮೇಲಿನ ಉಲ್ಲೇಖದಲ್ಲಿ ದಿನಾಂಕ 17–07–2021 ರಂದು ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲಾಗಿತ್ತು. ತಾಂತ್ರಿಕ ಕಾರಣಾಂತರಗಳಿಂದ ಟೆಂಡರ ಪ್ರಕ್ರಿಯೆ ವೇಳಾಪಟ್ಟಿಯನ್ನು ಉಲ್ಲೇಖಿತ ಪತ್ರ (2) (3) & (4) ರಡಿಯಲ್ಲಿ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ತಾಂತ್ರಿಕ ಕಾರಣಾಂತರಗಳಿಂದಾಗಿ ಹಾಗೂ ಹೆಚ್ಚಿನ ಬಿಡ್ಡರ್‌ಗಳು ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸಲು ಟೆಂಡರ ಪ್ರಕ್ರಿಯೆ ವೇಳಾಪಟ್ಟಿಯನ್ನು ಈ ಕೆಳಗಿನಂತೆ ತಿದ್ದುಪಡಿ ಅಧಿಸೂಚನೆಯನ್ನು ಮರು ಹೊರಡಿಸಲಾಗಿದೆ.

ಇಂಡೆಂಟ ನಂ. 31455 ಗಾಗಿ ಅವಧಿ ವಿಸ್ತರಣೆ–4:
ಸಂ:d:ಪರಿಷ್ಕೃತ ವೇಳಾಪಟ್ಟಿ:ಭರ್ತಿ ಮಾಡಿದ ಟೆಂಡರಗಳನ್ನು ಇ–ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ & ಸಮಯ: 23–08–2021 ರ 16.00 ಘಂಟೆಯವರೆಗೆ. ಸಂ:e:ಪರಿಷ್ಕೃತ ವೇಳಾಪಟ್ಟಿ: ತಾಂತ್ರಿಕ ಬಿಡ್‌ನ್ನು (ಲಕೋಟೆ–1) ತೆರೆಯುವ ದಿನಾಂಕ & ಸಮಯ:24–08–2021 ರ 16.30 ಘಂಟೆಯ ನಂತರ, ಸಂ:f:ಪರಿಷ್ಕೃತ ವೇಳಾಪಟ್ಟಿ : ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ–1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ–2) ತೆರೆಯುವ ದಿನಾಂಕ & ಸಮಯ:ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಹೆಚ್ಚುವರಿ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯ ದೂರವಾಣಿ ಸಂಖ್ಯೆ 08338–272485 ನಿಂದ ಕಚೇರಿ ಸಮಯದಲ್ಲಿ ಪಡೆಯಬಹುದು ಮತ್ತು ಇ–ಪ್ರೊಕ್ಯೂರಮೆಂಟ ಪೋರ್ಟನಲ್ಲಿ (https://www.eproc.karnataka.gov.in) ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
DIPR/BGM/RO-NO-631/MCA/2021-22 ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ. 4 ಚಿಕ್ಕೋಡಿ

ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (ನೋ.ಸಂಖ್ಯೆ .DRB-2/SOR/54/2017-18)
ಹಳೇ ನರ್ಸಿಂಗ್ ಶಾಲೆ ಕಟ್ಟಡ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002
ದೂರವಾಣಿ:080-26707727 ಇ-ಮೇಲ್: igotinstitute@gmail.com
ಸಂಖ್ಯೆ: ಐಜಿಒಟಿ/ಜಿ.ಸಿ/01/2019–20 ದಿನಾಂಕ: 17.08.2021

ಸಂಕ್ಷಿಪ್ತ ಅಧಿಸೂಚನೆ

ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಗೆ **ನರ್ಸಿಂಗ್ ಅಧಿಕಾರಿಗಳ ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗೆ** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು **https://igotorgan.Karnataka.gov.in** ವೆಬ್‌ಸೈಟಿನಲ್ಲಿ ಲಭ್ಯವಿರುವ ಆನ್‌ಲೈನ್ ಅರ್ಜಿಗಳನ್ನು ದಿನಾಂಕ: **18.08.2021 ರಿಂದ 02.09.2021 ರ ಸಾಯಂಕಾಲ 4.00 ಗಂಟೆವರೆಗೆ** ಸಲ್ಲಿಸಲು ಸೂಚಿಸಲಾಗಿದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕದೊಳಗೆ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು. ಸರ್ಕಾರದ ನೀತಿಯಂತೆ ವಿಶೇಷ ಸಂದರ್ಭಗಳಲ್ಲಿ ಸಾಮಾನ್ಯ ನೇಮಕಾತಿ ನಿಯಮಗಳು–1977 ರ ರೀತ್ಯ ವಯೋಮಿತಿಯನ್ನು ಸಡಿಲಗೊಳಿಸಲಾಗುವುದು. ಅರ್ಜಿಯ ಶುಲ್ಕವನ್ನು ಅಭ್ಯರ್ಥಿಗಳು ಅಂಚೆ ಕಛೇರಿಯಲ್ಲಿ ಪಾವತಿಸುವ ಅಂತಿಮ ದಿನಾಂಕ **06.09.2021 ರಂದು ಸಾಯಂಕಾಲ 4.00 ಗಂಟೆಯವರೆಗೆ** ನಿಗದಿಪಡಿಸಿದೆ. ಅರ್ಜಿ ಶುಲ್ಕ ಹಾಗೂ ಇತರೆ ಮಾಹಿತಿಗಾಗಿ ಜಾಲತಾಣ **https://igotorgan.Karnataka.gov.in** ವೀಕ್ಷಿಸುವುದು.

ಸಹಿ/– ನಿರ್ದೇಶಕರು, ಐಜಿಒಟಿ, ಬೆಂಗಳೂರು–560002.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ:ಕಾಪಾಅ/ಗ್ರಾಕುನೀಮತ್ತುನೈ/ವಿಯಾ/ಟೆ.ಪ್ರ/KKRDB/2021–22/556 ದಿನಾಂಕ:16–08–2021

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) "ಇ–ಪ್ರೊಕ್ಯೂರ್‌ಮೆಂಟ್" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: 1) MUDUNUR-K,KARIBHAVI,TEGGELLI, KOLIHAL DODDA TANDA & KANNALLI VILLAGES–Est Cost Rs.65.00 lakhs- Indent No.34551 IN SHORAPUR TQ, 2) ಲೆಕ್ಕ ಶೀರ್ಷಿಕೆ: KKRDB (MACRO)-2020-21, 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟ ದರ್ಜೆ 4) ಟೆಂಡರ ಫಾರಂ ಪಡೆಯುವ ದಿನಾಂಕ: **17–08–2021 ರಿಂದ 25–08–2021.** 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **25–08–2021** ಸಾಯಂಕಾಲ 4.30 ಗಂಟೆವರೆಗೆ. 7) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: **26–07–2021** ಸಾಯಂಕಾಲ 5.00 ಗಂಟೆಯ ನಂತರ. 8) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: **30–08–2021** ಬೆಳಿಗ್ಗೆ 11.00 ಗಂಟೆಯ ನಂತರ 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 10) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/158/ಎಂಸಿ&ಎ/2021–22

Government of Karnataka
Rural Drinking Water & Sanitation Department
Office of The Executive Engineer,
Rural Drinking Water Supply and Sanitation Division, Dharwad
Phone : 0836-2441209, Email : rwsddwd@rediffmail.com
No. E.E/R. D.W&S. D/ DWD/JALADHARE/2021-22/973 Date : 17.08.2021

SHORT TERM TENDER NOTIFICATION NO-22 / 2021-22 (TWO COVER SYSTEM)

The Executive Engineer, Rural Drinking Water & Sanitation Department, Dharwad District, Karnataka invites tenders from eligible Tenderers, for the below detailed work on DBOT basis. Two Tender document procedure as per Rule 28 of the Karnataka Transparency in Public Procurement Act, 1999 and Rules, 2000 shall be followed. The Tenderers are required to submit all the documents required for the Tender through e-Procurement mode, through portal-https://eproc.karnataka.gov.in. (Manual submission of Tenders or documents is not allowed and such submissions shall be ignored and Tender of a Tenderer making such submissions shall be rejected as disqualified).

TIME SCHEDULE
(1) Downloading of document through e portal : **16-08-2021** to **17-09-2021** up to 17:30 PM
(2) Pre-bid Meeting at C.E, R. D.W & S. D, Bangalore : **27-08-2021** Time : 11 :00 AM
(3) Last Date &Time for tender queries/ Clarifications : **25-08-2021** Time : 17 :30 PM
(4) Last Date & Time for Receipt of Bids : **17-09-2021** Time: 17:30 PM
(5) Date & Time of Technical Bid Opening : **18-09-2021** Time: 17:35 PM
(6) Date & Time of Financial Bid Opening : **20-09-2021** Time: 16:00 PM

Name of work	E.M.D (INR)	Tender Processin Fee	Period of Comple-tion
2	3	4	5
DRINKING WATER SUPPLY FACILITIES TO 388 RURAL HABITATIONS IN DHARWAD DISTRICT, KALAGHATAGI TOWN AND 8 EN-ROUTE RURAL HABITATIONS OF SAUNDATTI TALUK, BELAGAVI DISTRICT FROM RENUKASAGAR RESERVOIR (NAVILUTHEERTHA DAM) THROUGH DESIGN, BUILD, OPERATE AND TRANSFER (DBOT) MODE UNDER MULTI VILLAGE DRINKING WATER SUPPLY SCHEME. **INDENT No. 34494** **Part A- Design, Build, Testing and Commissioning:** a. Head works including Intake well, connecting pipeline, inspection chambers, Jackwell and pump house. b. Raw water pumping main up to water treatment plant. c. Water treatment plant and associated buildings / facilities. d. Treated water storage tank and Pumping station with pumping machinery. e. Treated water pumping mains / Feeder mains / bulk water transmission mains / bulk gravity mains from WTP to MBR / BPT / IPSs / ZBTs. f. Construction of Master Balancing Reservoirs, Zonal Balancing Reservoirs g. Intermediate pumping stations/lifting stations wherever required along with sumps h. ZBTs for supplying treated water to habitations i. Construction of OHTs at habitations to meet the storage requirement and Pipeline connections to existing OHTs (with due verification of structural safety) j. Installation of Bulk water meters at all the outlet points in the water supply system to measure the Water produced and supplied. k. Installation of required appurtenances to ensure the equitable water supply at all outlets. l. Electromechanical works as per requirement at all the location of pumping stations, IPS etc. m. Instrumentation and control, automation, operation management system (SCADA) etc. n. Trial Run	**7.97** Crore*	As per e-procurement portal	30 months
Part B – Operation & Maintenance Operation & maintenance of the facilities created under Part A for a period of 5 years & subsequently transfer the same at the end of tenure in working condition.			60 months after successful completion of Part A

* The Tenders must be accompanied by Earnest Money Deposit (EMD) of Rs. **7,97,00,000** (Rupees Seven Crore Ninety-Seven Lakhs only), out of which Rs. **5,00,000** (Rupees Five Lakh only) shall be paid online through e - Procurement Portal using any of the Payment Modes viz., Credit Card, Direct Debit, National Electronic Fund Transfer (NEFT), Over the Counter (OTC) and the balance amount of Rs. **7,92,00,000** (Rupees Seven Crore Ninety-Two Lakhs only) in the form of unconditional Bank Guarantee (BG)

TECHNICAL BID CONDITION:-
(1) The Tenderer (single entity / Joint Venture) shall be a company registered under The INDIAN COMPANIES ACT, 1956 /2013 or partnership firm registered under THE INDIAN PARTNERSHIP ACT, 1932 and should have registered as Class 1 Contractor with PWD or PRED mandatorily (certificate to be submitted). In case of Joint Venture, either or both of the entities should have registered as Class 1 Contractor with PWD or PRED mandatorily (certificate to be submitted)
(2) To qualify for this Tender, each Tenderer in its name should have in the last five years i.e.,2016-2017 to 2020-21. Achieved in at least two financial years a minimum financial turnover (in all classes of civil engineering construction works only) of Rs. 797.00 Crores. (The Consolidated Annual Financial turnover certificate for the relevant financial years certified by Statutory Auditor along with UDIN number (also the audited financial statements for each of the financial years to be submitted).
(3) Satisfactorily completed as prime contractor at least one drinking water supply / lift irrigation project having capital cost of value not less than Rs. 384.00 Crores
(4) Executed, and commissioned the following minimum quantities of works : Head work: Jackwell Intake well / Intake Channel with atleast 43.0 MLD of discharge capacity. capacity Installation of pumping machineries (VT/CP/Submersible) of atleast 805.0 HP Water Treatment Plant of atleast 43.0 MLD Capacity Pipeline work (CI/MS/DI/PVC/HDPE/GI) of atleast 771.0 Kms length. OHT/ZBR/MBR/GLSR/ reservoirs* having atleast 17,562 KL capacity
(5) The Tenderer should have experience of satisfactorily completing operation and maintenance of one rural multi-village drinking water supply project OR one urban drinking water supply project for a period of at least two and half years.
(6) The Tenderer should have executed similar electrical works of atleast Rs.13.5 Crore in any one year in last five years.
(7) The Tenderer should have the experience in SCADA system. (Work done certificate shall be submitted issued by competent authority not below the rank of Executive Engineer).
(8) The Tenderer should further demonstrate: Availability by owning/hired (50:50) key and critical equipment for this work.
(9) Technical, administrative and managerial personnel proposed to be employed for key site management in this work with their qualification details should be furnished in Annexure III.
(10) Liquid assets and/or availability of credit facilities of not less than Rs. 159.0 Crore unconditional Credit line/letter of credit/ certificates from banks for meeting the fund requirement etc.
(11) Litigation details of the Tenderers with the details of the parties concerned and the amount involved should be furnished in Annexure-V.
(12) Tenderer who meets the above specified minimum qualifying criteria, will only be qualified, if their available Tender capacity is more than the total Tender value. The available Tender capacity will be calculated asunder: Assessed available Tender capacity = (A*N*1.5 - B)
(13) Tenderer must submit existing commitments and on-going works to be completed during the next 2.5 years. (certified by an officer not below the rank of Executive Engineer) to compute available tender capacity
(14) **FINANCIAL BID CONDITION:-** Financial bid will be open after approval of the Technical Bid of the eligible bidders from Competent Authority.

GENERAL CONDITION:-
(1) Bidders shall not be under a declaration of ineligibility for corrupt and fraudulent practices issued by any state government/Government of India/union territory
(2) The Earnest Money Deposit through e-payment through NEFT/RTGS on or before the last date and time of bid submission.
(3) The Employer reserves the right to Reject or accept the tenders without assigning any reason
(4) If the date mentioned above happens to be general holiday next working day will holds good in lieu of the date mentioned.
(5) The tenderer shall scan & upload all the original documents required for this bid to the e-procurement portal.
(6) Conditional tender will not be accepted
(7) Department will not supply any materials.
(8) Work should be completed within a stipulated period.
(9) All Terms and Condition as per Tender Documents.
(10) Corrigendum/Addendum if any will be published in the website.
(11) All the items in the tender including all lead,lifts,loading, unloading transportation,labour hire charges of machinery curing for concrete works, cost and conveyance of all materilas and all other such incidental charges necessary for successful completion of works as per the detailed technical specification and direction of engineer -in-charge of this work.
(12) The employer is not responsible for any delay in accessing e-procurement Portal. The tenderer shall bear all costs associated with the preparation and submission of his tender, and the employer will in no case be responsible and liable for the costs.
(13) As per Karnataka State Government order LD/300/LET/2006 Blore dated 01.01.07 and Government letter No.PW/ 134/ BM S/ 2007 dated 27.07.07, a sum amounting to 1% of the bill amount will be deducted towards constructions labour welfare Fund.
(14) Security deposit for an amount equivalent to 5% of the Contract price for PART A (Design, Build, Testing & Commissioning) and for an amount equivalent to 10% of the Contract Price for PART B (Operation & Maintenance) both the Performance Securities shall be submitted in the form of-Bankers cheque or Demand draft in favor of Executive Engineer RDW&SD, Dharwad Division, Dharwad District payable at Dharwad or, An unconditional bank guarantee in the form given in Section 10(Form of Bank Guarantee).
(15) For any damages during the execution of work, the cost shall be borne by the Contractor.
(16) The tenderer shall submit proposed methodology and program of construction, backed with equipment and materials duly supported with broad calculations and quality management plan proposed to be adopted, justifying of execution and completion of the work as per technical specifications within the stipulated period of completion.
(17) Tenderers are requested to read the Bid Documents and visit the sites to get on hand information of the terrain and the proposed scheme before submission of their bid.
(18) Contractors should follow strictly prevailing rules of labour act.
(19) Royalty on construction materials and other taxes will be deducted as per prevailing Govt Orders.
(20) All safety precautions, warning signs, night illumination, reflectors, deployment of security guards has to be ensured so that no untoward incident happens on account of negligence or any project activity.
(21) All scanned documents to be uploaded shall be in original and the Executive Engineer reserves the right to verify the documents before approval.
(22) Tenderer shall obtain the Work done certificate in the prescribed format from the competent authority not below the rank of Executive Engineer or equivalent.
(23) Further details can be obtained from the office of the Executive Engineer, R.D.W& S Division Dharwad Phone No: 0836-2441209. during office working hours or through e- portal.

Sd/- Executive Engineer
DIPR/DWD/MCA/427/2021-22 **Rural Drinking Water and Sanitation Division, Dharwad**

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

'ಸ್ಕಾಲರ್‌ಷಿಪ್‌ನಿಂದ ಅನುಕೂಲ'



ಕಾಲೇಜಿನ ಶುಲ್ಕ ಪಾವತಿಸಲು ಸ್ಕಾಲರ್‌ಷಿಪ್ ಹಣ ಬಳಸಿಕೊಂಡೆ. 'ಪ್ರಜಾವಾಣಿ'ಯಂತಹ ದಿನಪತ್ರಿಕೆ ಈ ರೀತಿ ಸ್ಕಾಲರ್‌ಷಿಪ್ ಕೊಡುವುದು ತುಂಬ ಒಳ್ಳೆಯ ಸಂಗತಿ. ನನ್ನಂತೆ ಅನೇಕರಿಗೆ ಈ ರೀತಿ ಸ್ಕಾಲರ್‌ಷಿಪ್‌ಗಳು ಸಹಾಯವಾಗುತ್ತವೆ. ಪತ್ರಿಕೆಯಿಂದ ಪಡೆದ ಸ್ಕಾಲರ್‌ಷಿಪ್ ಸದಾ ಸ್ಮರಣೆಯಲ್ಲಿ ಇರುತ್ತದೆ.

ಶ್ರಾವ್ಯಾ, ಮಂಗಳೂರು

ಬಡ ಮಕ್ಕಳಿಗೆ ಸಹಾಯ



'ಪ್ರಜಾವಾಣಿ' ಸ್ಕಾಲರ್‌ಶಿಪ್ ಹಣದಿಂದ ಶುಲ್ಕ ಭರಿಸಿದೆ. ಉಳಿದ ಹಣದಲ್ಲಿ ಪುಸ್ತಕಗಳು, ಯೂನಿಫಾರಂ ಕೊಂಡುಕೊಂಡೆ. ಎಷ್ಟೋ ಬಡ ಮಕ್ಕಳಿಗೆ ಶುಲ್ಕ ಭರಿಸಲು ಹಣ ಇರುವುದಿಲ್ಲ. ಈ ಸ್ಕಾಲರ್‌ಶಿಪ್ ಹಣ ನೀಡಿ ಸಂಸ್ಥೆ ಓದುವ ಮಕ್ಕಳಿಗೆ ಸಹಾಯ ಮಾಡಿದೆ. ಸಂಸ್ಥೆಗೆ ಅಭಿನಂದನೆಗಳು.

ಪ್ರಿಯಾ ಆರ್., ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.24	3,960	5,545
ಹಾರಂಗಿ	2,859	2,857.94	2,600	2,850
ಕಬಿನಿ	2284.00	2,283.25	4,450	3,500
ಹೇಮಾವತಿ	2,922	2,919.80	2,636	4,725
ಲಿಂಗನಮಕ್ಕಿ	1,819	1,812.35	7541	-
ಸೂಪಾ (ಮೀ)	564	554.59	4,952	3,666
ಮಾಣಿ	594	585.34	3,15	-
ತುಂಗಭದ್ರಾ	1,633	1,632.98	18,304	19,200
ಮಲಪ್ರಭಾ	2079.5	2,077.50	2,356	894
ಘಟಪ್ರಭಾ	2175	2,175.00	4,265	4,265
ಭದ್ರಾ	186	184.11	5197	4,896
ಆಲಮಟ್ಟಿ (ಮೀ)	519.6	519.59	27,276	21,189
ನಾರಾಯಣಪುರ (ಮೀ)	492.25	492.08	23,000	31,200

*ನೆಲಮಟ್ಟದಿಂದ

ಕರ್ಫ್ಯೂ ಉಲ್ಲಂಘಿಸಿ ಜನಾಶೀರ್ವಾದ ಯಾತ್ರೆ ನಡೆಸಿದ ಸಚಿವ!

ಕಲಬುರ್ಗಿ: ಕೋವಿಡ್ ನಿಯಂತ್ರಣಕ್ಕಾಗಿ ಜಿಲ್ಲಾಡಳಿತ ವಿಧಿಸಿರುವ ರಾತ್ರಿ ಕರ್ಫ್ಯೂ ಉಲ್ಲಂಘಿಸಿ ಕೇಂದ್ರ ಸಚಿವ ಭಗವಂತ ಖೂಬಾ ಅವರು ಮಂಗಳವಾರ ರಾತ್ರಿ ನಗರದಲ್ಲಿ ಜನಾಶೀರ್ವಾದ ಯಾತ್ರೆಯ ಸಭಾ ಕಾರ್ಯಕ್ರಮ ನಡೆಸಿದರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಮಧ್ಯಾಹ್ನ 3.30ಕ್ಕೆ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ, ಸಚಿವರು ತಡವಾಗಿ ಬಂದಿದ್ದರಿಂದ ರಾತ್ರಿ 8.30ಕ್ಕೆ ಸಭಾ ಕಾರ್ಯಕ್ರಮ ಆರಂಭವಾಯಿತು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ ಅವರು ತಮ್ಮ ಭಾಷಣದಲ್ಲಿ ಕರ್ಫ್ಯೂ ಆರಂಭವಾಗುವುದರೊಳಗಾಗಿ ಕಾರ್ಯಕ್ರಮ ಮುಗಿಸಬೇಕು ಎಂದು ತಿಳಿಸಿದರು. ಆದರೆ, ಸಚಿವ ಖೂಬಾ ಅವರ ಭಾಷಣ ರಾತ್ರಿ 9.25ಕ್ಕೆ ಆರಂಭವಾಯಿತು. 9.49ಕ್ಕೆ ಕಾರ್ಯಕ್ರಮ ಮುಗಿಯಿತು.

ನೋಟಿಸ್: ಯಾತ್ರೆಗೆ ಅನುಮತಿ ನೀಡಿರಲಿಲ್ಲ. ಸಂಘಟಕರಿಗೆ ನೋಟಿಸ್ ಜಾರಿಗೊಳಿಸುತ್ತಿದ್ದೇವೆ ಎಂದು ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಪ್ರತಿಕ್ರಿಯಿಸಿದರು.

ಗ್ರಾಮೀಣ ವಸತಿ ಫಲಾನುಭವಿಗಳ ವಿವರ ದಾಖಲಿಸಿ: ಬೊಮ್ಮಾಯಿ ಸೂಚನೆ

'1.67ಲಕ್ಷ ಮನೆಗಳಿಗೆ ಜಿಪಿಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಗ್ರಾಮೀಣ ವಸತಿ ಯೋಜನೆಗಳಡಿ 4.09 ಲಕ್ಷ ಮನೆಗಳ ನಿರ್ಮಾಣ ಪ್ರಗತಿಯಲ್ಲಿದೆ. ಬಾಕಿ ಇರುವ 1.67 ಲಕ್ಷ ಮನೆಗಳಿಗೆ 15 ದಿನಗಳ ಒಳಗೆ ಜಿಪಿಎಸ್ ಅಪ್‌ಲೋಡ್ ಮತ್ತು ಆಧಾರ್ ಜೋಡಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ವಸತಿ ಇಲಾಖೆ ಪ್ರಗತಿ ಪರಿಶೀಲನೆ ಮಂಗಳವಾರ ನಡೆಸಿದ ಮುಖ್ಯಮಂತ್ರಿ, 'ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ (ನಗರ) 1.8 ಲಕ್ಷ ಮನೆಗಳ ನಿರ್ಮಾಣ ಆರಂಭವಾಗಿಲ್ಲ. ಈ ಯೋಜನೆಗೆ ಪರಿಶಿಷ್ಟರ ಉಪ ಯೋಜನೆ (ಎಸ್‌ಸಿಎಸ್‌ಪಿ, ಟಿಎಸ್‌ಪಿ), ಹಿಂದುಳಿದ ವರ್ಗಗಳು ಹಾಗೂ ಕಾರ್ಮಿಕ ಫಲಾನುಭವಿಗಳ ವಂತಿಗೆ ಮೊತ್ತವನ್ನು ಆಯಾ ಇಲಾಖೆಗಳ ಯೋಜನೆಗಳಡಿ ಪಡೆದುಕೊಂಡು ಅನುಷ್ಠಾನಗೊಳಿಸಬೇಕು' ಎಂದು ಸೂಚಿಸಿದರು.

ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆಯಡಿ ಬೆಂಗಳೂರಿನಲ್ಲಿ 42,361 ಮನೆ ನಿರ್ಮಾಣವಾಗುತ್ತಿದ್ದು, ಬಾಕಿ ಮನೆಗಳ ಟೆಂಡರ್ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ವಿವಿಧ ವಸತಿ ಯೋಜನೆಗಳಡಿ 5 ಲಕ್ಷ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆಗೆ ಸಿದ್ಧತೆ ಮಾಡಿಕೊಳ್ಳಬೇಕು. ಅಲ್ಲದೆ, ಪ್ರವಾಹ ಸಂದರ್ಭದಲ್ಲಿ ಮನೆ ಹಾನಿಗೆ ಪರಿಹಾರ ಮೊತ್ತ ಬಿಡುಗಡೆ ಮಾಡಬೇಕು ಎಂದೂ ಮುಖ್ಯಮಂತ್ರಿ ಸೂಚಿಸಿದರು.

ವಸತಿ ಸಚಿವ ವಿ. ಸೋಮಣ್ಣ ಸಭೆಯಲ್ಲಿ ಇದ್ದರು.

ವಿಶ್ವಾಸಕ್ಕೆ ಪಡೆದು ಶಿಕ್ಷಣ ನೀತಿ ಜಾರಿ: ಶಿಕ್ಷಣ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಬೇಕು' ಎಂದು ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಲಹೆ ನೀಡಿದರು.

ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ನೀತಿ ಜಾರಿಗೆ ಪೂರಕವಾಗಿ ಕರ್ನಾಟಕ ರಾಜ್ಯ ಶಿಕ್ಷಣ ಆಯೋಗ ಮತ್ತು ಇತರ ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲು ರೂಪುರೇಷೆಗಳನ್ನು ಸಿದ್ಧಪಡಿಸಬೇಕು. ಖಾಸಗಿಯವರ ಸಹಯೋಗವನ್ನೂ ಪಡೆದುಕೊಳ್ಳಬೇಕು' ಎಂದು ಸೂಚಿಸಿದರು.

ರಾಜ್ಯದ ಉನ್ನತ ಶಿಕ್ಷಣದಲ್ಲಿ ನಿವ್ವಳ ದಾಖಲಾತಿ ಅನುಪಾತ (ಜಿಇಆರ್) ಶೇ32ರಷ್ಟಿದ್ದು, ಇದನ್ನು ಶೇ 50ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಹೊಸ ನೀತಿ ಅನುಷ್ಠಾನಕ್ಕೆ ಪೂರಕವಾಗಿ ಬಿ.ಇಡಿ., ಡಿ.ಇಡಿ ಪಠ್ಯ ವಿಷಯವನ್ನು ಇನ್ನಷ್ಟು ಪರಿಣಾಮಕಾರಿಯಾಗುವಂತೆ ಪರಿಷ್ಕರಿಸಬೇಕು. ಯುವಕರು ಉದ್ಯೋಗ ಪಡೆದುಕೊಳ್ಳಲು ಅನುವಾಗುವಂತೆ ಜಿಲ್ಲೆಗೊಂದು ತಾಂತ್ರಿಕ ಶಿಕ್ಷಣ ಶಾಲೆ ಆರಂಭಿಸಬೇಕು' ಎಂದೂ ಮುಖ್ಯಮಂತ್ರಿ ಸಲಹೆ ನೀಡಿದರು.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಸಭೆಯಲ್ಲಿದ್ದರು.



ವಸತಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ವಿ. ಸೋಮಣ್ಣ ಇದ್ದರು

ರಸ್ತೆ ದುರಸ್ತಿಗೆ ಆದ್ಯತೆ: ಸಿ.ಎಂ ಸೂಚನೆ

ಬೆಂಗಳೂರು: ಭಾರಿ ಮಳೆಯಿಂದ ಹಾಳಾದ ರಸ್ತೆಗಳ ದುರಸ್ತಿ ಕಾರ್ಯವನ್ನು ಆದ್ಯತೆಯಲ್ಲಿ ಕೈಗೆತ್ತಿಕೊಳ್ಳುವಂತೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ರಸ್ತೆ ದುರಸ್ತಿಗೆ ₹ 300 ಕೋಟಿ ಬಿಡುಗಡೆ ಮಾಡಲಾಗಿದೆ. ಪ್ರತಿ ಜಿಲ್ಲೆಯ ರಸ್ತೆಗಳ ಸಾಂದ್ರತೆ ಪರಿಶೀಲಿಸಿ, ಕಡಿಮೆ ಇರುವ ಜಿಲ್ಲೆಗಳಲ್ಲಿ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಬೇಕು' ಎಂದು ಸೂಚಿಸಿದರು.

'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ₹ 1000 ಕೋಟಿಯ ಕಾಮಗಾರಿಗಳು ಕೈಗೆತ್ತಿಕೊಳ್ಳಲಾಗಿದೆ. ರಸ್ತೆ ಅಭಿವೃದ್ಧಿ ಯೋಜನೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸಲಾಗುವುದು' ಎಂದು ತಿಳಿಸಿದರು.

ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಸಭೆಯಲ್ಲಿ ಇದ್ದರು.



ನಿಯಮ ಉಲ್ಲಂಘನೆ...

ರಾಯಚೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ವಿಭಾಗಮಟ್ಟದ ಕಾಂಗ್ರೆಸ್ ಸಮಾವೇಶದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೋವಿಡ್ ನಿಯಮ ಉಲ್ಲಂಘಿಸಿ ಮಹಾತ್ಮಗಾಂಧಿ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ನೆರೆದಿದ್ದರು. ಪಕ್ಷದ ನಾಯಕರಿಗೆ ಕ್ರೇನ್ ನೆರವಿನಿಂದ ಬೃಹತ್ ಪುಷ್ಪಮಾಲೆ ಹಾಕಿದರು

ಪ್ರಜಾವಾಣಿ ಚಿತ್ರ: ಶ್ರೀನಿವಾಸ ಇನಾಮದಾರ

ರೇಸ್ ವ್ಯೂ-1 ನಿವಾಸಕ್ಕೆ ಸಿಎಂ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸರ್ಕಾರದ ರೇಸ್‌ವ್ಯೂ: ನಂ-1 ವಸತಿ ಗೃಹವನ್ನು ಹಂಚಿಕೆ ಮಾಡಲಾಗಿದೆ.

ಈ ವಸತಿ ಗೃಹವನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ಹಂಚಿಕೆ ಮಾಡಲಾಗಿತ್ತು, ಅದನ್ನು ಈಗ ಹಿಂದಕ್ಕೆ ಪಡೆಯಲಾಗಿದೆ.

ಮುಖ್ಯಮಂತ್ರಿ ವಾಸ್ತವ್ಯಕ್ಕಾಗಿಯೇ ನಿರ್ಮಿಸಿದ 'ಅನುಗ್ರಹ'ಕ್ಕೆ ಅಥವಾ 'ಕಾವೇರಿ'ಗೂ ಬೊಮ್ಮಾಯಿ ಹೋಗುತ್ತಿಲ್ಲ. ಬೊಮ್ಮಾಯಿ ಅವರ ಅಧಿಕೃತ ಸರ್ಕಾರಿ ನಿವಾಸ ಇನ್ನು ಮುಂದೆ ರೇಸ್‌ವ್ಯೂ-1 ಆಗಲಿದೆ.

ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಅವರು ಉಪಮುಖ್ಯಮಂತ್ರಿ ಮತ್ತು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಈ ಮನೆಯಲ್ಲೇ ವಾಸವಿದ್ದರು. 'ಅದೃಷ್ಟ'ದ ಮನೆ ಎಂದೇ ಭಾವಿಸಿ ಯಡಿಯೂರಪ್ಪ ಬಹಳ ಕಾಲ ಅಲ್ಲಿದ್ದರು. ಈ ಬಾರಿ ಮುಖ್ಯಮಂತ್ರಿ ಆದಾಗ ಕಾವೇರಿ ನಿವಾಸ ಪಡೆದರು.

ಈ ಮಧ್ಯೆ 'ಕಾವೇರಿ' ನಿವಾಸ ಸಚಿವ ಆರ್.ಅಶೋಕ ಅವರಿಗೆ ಹೊಸದಾಗಿ ಹಂಚಿಕೆ ಮಾಡಲಾಗಿತ್ತು. ಆದರೆ, ಬಿ.ಎಸ್.ಯಡಿಯೂರಪ್ಪ ಅವರು ಅಲ್ಲೇ ಉಳಿಯಲು ನಿರ್ಧರಿಸಿರುವುದರಿಂದ ಕಾವೇರಿಯನ್ನು ಅವರಿಗೆ ಬಿಟ್ಟುಕೊಡಲು ಅಶೋಕ ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿ.ಎಂ ಮನೆಗೆ ಮೊಬೈಲ್ ನಿಷೇಧ: ಬಸವರಾಜ ಬೊಮ್ಮಾಯಿ ಅವರ ಆರ್.ಟಿ.ನಗರದ ಮನೆಯೊಳಗೆ ಮೊಬೈಲ್ ಒಯ್ಯುವುದಕ್ಕೆ ಕಡಿವಾಣ ಹಾಕಲಾಗಿದೆ. ಮೊಬೈಲ್ ಫೋನ್ ಮೂಲಕ ಸೆಲ್ಫಿ ತೆಗೆಯಲು ಹಲವರು ಕಿರಿಕಿರಿ ಉಂಟು ಮಾಡುತ್ತಿರುವ ಕಾರಣ ಬೊಮ್ಮಾಯಿ ಅವರ ಮನೆಯ ಗೇಟ್‌ಗೆ ಈ ಸಂಬಂಧ ಮಾಹಿತಿ ಫಲಕ ಹಾಕಲಾಗಿದೆ.

ಆದರೆ, ಗೃಹ ಕಚೇರಿ 'ಕೃಷ್ಣಾ'ಕ್ಕೆ ಈ ನಿರ್ದೇಶನ ಅನ್ವಯ ಆಗುವುದಿಲ್ಲ ಎಂದು ಮೂಲಗಳು ಹೇಳಿವೆ.

ವೈದ್ಯೆ, ಸಾಹಿತಿ ಎಚ್. ಗಿರಿಜಮ್ಮ ನಿಧನ



ದಾವಣಗೆರೆ: ಖ್ಯಾತ ವೈದ್ಯೆ, ಲೇಖಕಿ ಡಾ. ಎಚ್. ಗಿರಿಜಮ್ಮ (70) ಮಂಗಳವಾರ ಹೃದಯಾಘಾತದಿಂದ ನಿಧನರಾದರು.

ಹರಿಹರದಲ್ಲಿ ಜನಿಸಿದ ಗಿರಿಜಮ್ಮ ಅವರು ಪಿಯುಸಿವರೆಗೂ ದಾವಣಗೆರೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆದ ನಂತರ ಹರಿಹರದಲ್ಲಿ ವೈದ್ಯಕೀಯ ಸೇವೆ ಆರಂಭಿಸಿ ಬೆಂಗಳೂರು ಹಾಗೂ ಕಾರ್ಯನಿರ್ವಹಿಸಿದ್ದರು.

ತ್ರಿವೇಣಿ ಅವರ ಬರಹಗಳಿಂದ ಪ್ರೇರಣೆ ಪಡೆದು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದರು.

ಅವರ ಮೊದಲ ಕತೆ 'ಹೂಬಳ್ಳಿಗೆ ಈ ಆಸರೆ' 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. 'ಚಂದಮಾಮ', 'ತಮಸೋಮ ಜ್ಯೋತಿರ್ಗಮಯ', 'ಅಂಬರತಾರೆ' ಸೇರಿ 27 ಕಾದಂಬರಿಗಳು ಪ್ರಕಟವಾಗಿವೆ. 'ಅರ್ಧಾಂಗಿ', 'ಸಂಜೆಮಲ್ಲಿಗೆ', 'ಅನಾವರಣ' ನೀಳ್ಗತೆಗಳು ಮಯೂರದಲ್ಲಿ ಪ್ರಕಟಗೊಂಡಿವೆ. ಒಟ್ಟು 50 ಕತೆಗಳನ್ನು ಬರೆದಿದ್ದಾರೆ. ಐದು ಕಥಾಸಂಗ್ರಹಗಳು ಪ್ರಕಟಗೊಂಡಿವೆ.

ವೃತ್ತಿಯಿಂದ ವೈದ್ಯರಾದರೂ ಪ್ರವೃತ್ತಿಯಿಂದ ಸಾಹಿತ್ಯ, ಚಲನಚಿತ್ರ, ಸಾಕ್ಷ್ಯಚಿತ್ರಗಳಲ್ಲಿ ತೊಡಗಿಸಿಕೊಂಡಿದ್ದರು. 26 ವೈದ್ಯ ವಿಜ್ಞಾನದ ಕೃತಿಗಳನ್ನು ಪ್ರಕಟಿಸಿರುವ ಗಿರಿಜಮ್ಮ, 'ಅಂತರಗಂಗೆ' ಚಲನಚಿತ್ರವನ್ನೂ ನಿರ್ದೇಶಿಸಿದ್ದಾರೆ. ಇವರು ರಚಿಸಿದ 'ಮೇಘ ಮಂದಾರ' ಕಾದಂಬರಿ ಸಿನಿಮಾವಾಗಿದೆ. 15 ಟೆಲಿ ಫಿಲ್ಮ್‌ಗಳು, 5 ಟೆಲಿ ಧಾರಾವಾಹಿಗಳು ಮತ್ತು ಹತ್ತು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದ್ದಾರೆ.

'ಕಾಡತಾವ ನೆನಪುಗಳು' ಇವರ ಆತ್ಮಕಥನ. 2014ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2006ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಬಿ.ಸರೋಜಾದೇವಿ ದತ್ತಿನಿಧಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಅವರಿಗೆ ಪತಿ ಭಾಸ್ಕರ್ ಹೆಗಡೆ ಇದ್ದಾರೆ. ಅಂತ್ಯಕ್ರಿಯೆ ಇಲ್ಲಿನ ಮುಕ್ತಿಧಾಮದಲ್ಲಿ ನೆರವೇರಿತು.



ಕಾಬೂಲ್‌ನಲ್ಲಿರುವ ಒಳಾಡಳಿತ ಸಚಿವಾಲಯದ ಪ್ರವೇಶ ದ್ವಾರದಲ್ಲಿ ಕಾವಲು ಕಾಯುತ್ತಿರುವ ತಾಲಿಬಾನ್ ಹೋರಾಟಗಾರರು



ಅಫ್ಗಾನಿಸ್ತಾನ–ಪಾಕಿಸ್ತಾನ ಗಡಿ ದಾಟುವ ಸ್ಥಳವಾದ ಚಮನ್‌ನಲ್ಲಿ ಸರದಿಯಲ್ಲಿ ನಿಂತಿರುವ ಜನರು – ಎಎಫ್‌ಪಿ ಚಿತ್ರ

ಪ್ರತಿರೋಧ ತೋರದ ಅಫ್ಗಾನಿಸ್ತಾನ ನಾಯಕತ್ವವನ್ನು ದೂಷಿಸಿದ ಅಮೆರಿಕ

ಸೇನೆ ವಾಪಸ್: ಬೈಡನ್ ಸಮರ್ಥನೆ

ವಾಷಿಂಗ್ಟನ್ (ಪಿಟಿಐ): ಅಫ್ಗಾನಿಸ್ತಾನದಿಂದ ಅಮೆರಿಕದ ಸೇನಾ ಪಡೆಯನ್ನು ವಾಪಸ್ ಕರೆಸಿಕೊಂಡಿರುವುದನ್ನು ಸಮರ್ಥಿಸಿಕೊಂಡಿರುವ ಅಧ್ಯಕ್ಷ ಜೋ ಬೈಡನ್, ತಮ್ಮ ನಿರ್ಧಾರಕ್ಕೆ ಬದ್ಧ ಇರುವುದಾಗಿ ಹೇಳಿದ್ದಾರೆ.

ಇದೇ ವೇಳೆಗೆ, ದೇಶವನ್ನು ಸುಲಭವಾಗಿ ತಾಲಿಬಾನ್ ತುತ್ತಾಗಿಸಿದ, ಅಫ್ಗಾನಿಸ್ತಾನ ಸರ್ಕಾರ ಹಾಗೂ ಸೇನೆಯನ್ನೂ ದೂಷಿಸಿದ್ದಾರೆ.

ರಾಷ್ಟ್ರವನ್ನು ಉದ್ದೇಶಿಸಿ ಸೋಮವಾರ ಶ್ವೇತಭವನದಿಂದ ಮಾತನಾಡಿದ ಅವರು, ತಾಲಿಬಾನ್ ಪಡೆಯು ನಿರೀಕ್ಷೆಗಿಂತಲೂ ಹೆಚ್ಚು ಕ್ಷಿಪ್ರವಾಗಿ ಅಫ್ಗಾನಿಸ್ತಾನವನ್ನು ಕೈವಶ ಮಾಡಿಕೊಂಡಿತು ಎಂಬುದನ್ನು ಒಪ್ಪಿಕೊಂಡರು.

'ನಮ್ಮ ಎಣಿಕೆಗಿಂತ ತ್ವರಿತವಾಗಿ, ತಾಲಿಬಾನ್ ಆಕ್ರಮಣ ಮಾಡಿದ್ದು ನಿಜ. ಆದರೆ, ದೇಶದ ರಕ್ಷಣೆಗಾಗಿ ಅಲ್ಲಿನ ಸರ್ಕಾರ ಮತ್ತು ಸೇನೆಯು ಪ್ರತಿರೋಧ ತೋರಬೇಕಿತ್ತಲ್ಲವೇ? ಆದರೆ ಆಗಿದ್ದೇನು? ರಾಜಕೀಯ ನಾಯಕರು ದೇಶಬಿಟ್ಟು ಪರಾರಿಯಾದರು. ತಮಗಾಗಿ ತಾವು ಹೋರಾಡಲು ಅಫ್ಗಾನಿಸ್ತಾನದ ಸೇನಾಪಡೆಗಳೇ ಸಿದ್ಧವಿಲ್ಲವೆಂದ ಮೇಲೆ ಅಲ್ಲಿ ಅಮೆರಿಕದ ಸೈನಿಕರೇಕೆ ಸಾಯಬೇಕು' ಎಂದು ಕೇಳಿದರು.

'ಅಫ್ಗಾನಿಸ್ತಾನದಿಂದ ಬರುತ್ತಿರುವ ಚಿತ್ರಗಳು 'ಅಹಿತಕರವಾದವು'. ಆದರೆ, ಅಮೆರಿಕದ ಸೇನೆಯನ್ನು ವಾಪಸ್‌ಕರೆಸಿಕೊಳ್ಳಲು ಒಳ್ಳೆಯ ಸಮಯವೆಂಬುದು ಬರುವುದೇ ಇಲ್ಲ ಎಂಬುದೂ ತಿಳಿದಿದೆ. ಹೀಗಾಗಿ, ನಾನು ನನ್ನ ನಿರ್ಧಾರಕ್ಕೆ



ಕಾಬೂಲ್‌ನ ರಸ್ತೆಗಳಲ್ಲಿ ಗಸ್ತು ತಿರುಗುತ್ತಿದ್ದ ತಾಲಿಬಾನಿಗಳು –ಎಎಫ್‌ಪಿ ಚಿತ್ರ

ಬದ್ಧನಿದ್ದೇನೆ. ಎದುರಾಗಬಹುದಾದ ಸಂಕಷ್ಟ– ಅಪಾಯಗಳ ಬಗ್ಗೆ ಸ್ಪಷ್ಟತೆಯೂ ನಮಗಿತ್ತು. ಎದುರಾಗಬಹುದಾದ ಪ್ರತಿಯೊಂದು ಅನಿರೀಕ್ಷಿತವನ್ನೂ ಎದುರಿಸಲೂ ನಾವು ಯೋಜಿಸಿದ್ದು, ಏನೇ ಆದರೂ ನಾನು ಯಾವಾಗಲೂ ಅಮೆರಿಕದ ಜನರೊಂದಿಗೆ ಇರುವುದಾಗಿ ಮಾತು ಕೊಟ್ಟಿದ್ದೇನೆ' ಎಂದು ಹೇಳಿದರು.

ಆ ದೇಶದ ಸೇನೆಯು, ಹಲವು ಸಂದರ್ಭಗಳಲ್ಲಿ ಕಾದಾಡುವ ಪ್ರಯತ್ನ ಮಾಡದೇ ಕೈಚೆಲ್ಲಿತು. ಕಳೆದ ಒಂದು ವಾರದಲ್ಲಿನ ಬೆಳವಣಿಗೆಗಳು, ಅಲ್ಲಿಂದ ಸೇನೆಯನ್ನು ಹಿಂದೆಗೆದುಕೊಂಡ ನಿರ್ಧಾರವು ಸರಿಯಾದುದೇ ಆಗಿದೆ ಎಂಬುದಕ್ಕೆ ಪುಷ್ಟಿ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು.

'ಅಲ್ಲಿ ನಾವು ಸಾವಿರಾರು ಕೋಟಿ ಡಾಲರ್ ಖರ್ಚು ಮಾಡಿದ್ದೇವೆ. ಮೂರು ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯ ಆ ದೇಶದ ಸೇನಾಪಡೆಯನ್ನು ಶಸ್ತ್ರಸಜ್ಜಿತಗೊಳಿಸಿ, ತರಬೇತಿ ನೀಡಿದ್ದೇವೆ. ಇಂಥ ಯಾವ ಸೌಲಭ್ಯವೂ ತಾಲಿಬಾನ್ ಪಡೆಗೆ ಇರಲಿಲ್ಲ. ಅಫ್ಗನ್ ಸೈನಿಕರಿಗೆ ಸಂಬಳ ನೀಡಿದ್ದೇವೆ. ವಾಯುಪಡೆಯ ನಿರ್ವಹಣೆ ವೆಚ್ಚ ಭರಿಸಿದ್ದೇವೆ. ಅವರ ಭವಿಷ್ಯವನ್ನು ರೂಪಿಸಿಕೊಳ್ಳಲು ಇರುವ ಪ್ರತಿಯೊಂದು ಅವಕಾಶವನ್ನೂ ನೀಡಿದ್ದೆವು. ಆದರೆ, ನಿರ್ಣಾಯಕವಾದ ಹೊತ್ತಿನಲ್ಲಿ ಇದಾವುದನ್ನೂ ಸಮರ್ಪಕವಾಗಿ ಬಳಸಿಕೊಳ್ಳುವ ಆಸಕ್ತಿಯನ್ನು ಆ ದೇಶ ತೋರಲಿಲ್ಲ' ಎಂದು ವಿಷಾದಿಸಿದರು.

ತನ್ನನ್ನು ತಾನು ಉಳಿಸಿಕೊಳ್ಳಲು ಮುಂದಾಗದ ದೇಶದಲ್ಲಿ ಅಲ್ಲಿ ಎಷ್ಟೇ ದೊಡ್ಡ ಪ್ರಮಾಣದಲ್ಲಿ ಸೇನಾ ಪಡೆಗಳನ್ನು ನಿಯೋಜಿಸಿದರೂ ಪ್ರಯೋಜನವಿಲ್ಲ. ಮತ್ತೊಂದು ವರ್ಷ, ಮಗದೊಂದು ವರ್ಷ, ಮತ್ತೆ ಐದು ವರ್ಷ ಎಂದು ಅವಕಾಶ ನೀಡುವುದು ವ್ಯರ್ಥ ಎಂದಿದ್ದಾರೆ.

ಅಮೆರಿಕದ ಸೇನಾ ಪಡೆಯನ್ನು ಹಿಂದಕ್ಕೆ ಕರೆಸಿಕೊಂಡಿದ್ದರಿಂದ ತಾಲಿಬಾನಿಗಳು ಆಕ್ರಮಣ ಹೆಚ್ಚಿಸುವ ಮೂಲಕ ಅಫ್ಗಾನಿಸ್ತಾನವನ್ನು ತಮ್ಮ ಹಿಡಿತಕ್ಕೆ ಪಡೆದಿದ್ದಾರೆ. ಆ ದೇಶದಲ್ಲಿನ ಆತಂಕದ ಸ್ಥಿತಿಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ನಿರ್ಧಾರವೇ ಕಾರಣ ಎಂದು ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳಲ್ಲಿರುವ ಅಫ್ಗಾನಿಸ್ತಾನ ನಾಗರಿಕರು ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದರು.

ಈ ಹಿನ್ನೆಲೆಯಲ್ಲಿ, ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿರುವ ಬೈಡನ್, 'ಕಳೆದ 20 ವರ್ಷಗಳಲ್ಲಿ ಮಾಡಿದ ತಪ್ಪುಗಳನ್ನು ಮತ್ತೆ ಮಾಡಲಾಗದು. ಅಫ್ಗಾನಿಸ್ತಾನದಲ್ಲಿ ಸಮರ ಪರಿಸ್ಥಿತಿಯ ಮೇಲೆ ನಿಗಾವಹಿಸುವ ಕೆಲಸವನ್ನು ಇನ್ನು ಮುಂದೆಯೂ ಮಾಡಲಾಗದು. ನಮ್ಮ ಸೈನಿಕರ ಕುಟುಂಬಗಳನ್ನು ಸಂಕಷ್ಟಕ್ಕೆ ದೂಡಿ, ಮತ್ತೊಂದು ರಾಷ್ಟ್ರದ ನಾಗರಿಕ ಯುದ್ಧದಲ್ಲಿ ನಿರಂತರವಾಗಿ ಹೋರಾಡಲು ನಮ್ಮ ಪಡೆಗಳಿಗೆ ಸೂಚಿಸಲು ಸಾಧ್ಯವಿಲ್ಲ. ಇದು ನಮ್ಮ ರಾಷ್ಟ್ರದ ಭದ್ರತೆ ಹಿತಾಸಕ್ತಿಗೆ ಪೂರಕವಾಗಿಲ್ಲ ಹಾಗೂ ಅಮೆರಿಕದ ಜನತೆಗೆ ಇದು ಬೇಕಿಲ್ಲ' ಎಂದಿದ್ದಾರೆ.

ಅಫ್ಗನ್ ಸಂಘರ್ಷ: 40 ಸಾವಿರಕ್ಕೂ ಹೆಚ್ಚು ಗಾಯಾಳುಗಳಿಗೆ ರೆಡ್‌ಕ್ರಾಸ್ ಚಿಕಿತ್ಸೆ

ಜಿನೀವಾ (ರಾಯಿಟರ್ಸ್): ತಾಲಿಬಾನ್ ಪಡೆ ಮತ್ತು ಅಫ್ಗನ್ ಸಂಘರ್ಷದಲ್ಲಿ ಗಾಯಗೊಂಡ 40 ಸಾವಿರಕ್ಕೂ ಹೆಚ್ಚು ಜನರಿಗೆ ಜೂನ್‌ನಿಂದ ಇಲ್ಲಿಯವರೆಗೆ ಚಿಕಿತ್ಸೆ ನೀಡಲಾಗಿದೆ ಎಂದು ರೆಡ್‌ಕ್ರಾಸ್ ಅಂತರರಾಷ್ಟ್ರೀಯ ಸಮಿತಿ (ಐಸಿಆರ್‌ಸಿ) ತಿಳಿಸಿದೆ.

ಆಗಸ್ಟ್‌ನ ಮೊದಲ ಹತ್ತು ದಿನಗಳಲ್ಲಿ, 4,042 ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗಿದೆ. ತಾಲಿಬಾನ್ ಪಡೆಯು ಸಂಘರ್ಷವಿಲ್ಲದೇ ಕಾಬೂಲ್ ಅನ್ನು ವಶಪಡಿಸಿಕೊಳ್ಳುವುದಕ್ಕಿಂತ ಮೊದಲಿನ ವಾರದಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ಜನರಿಗೆ ಚಿಕಿತ್ಸೆ ನೀಡಲಾಗಿದೆ' ಎಂದಿರುವ ಐಸಿಆರ್‌ಸಿ ಮಹಾನಿರ್ದೇಶಕ ರಾಬರ್ಟ್ ಮರ್ದಿನಿ, ಕಾಬೂಲ್‌ನಲ್ಲಿ ರಕ್ತಪಾತ ತಪ್ಪಿದ್ದಕ್ಕೆ ಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ.

'ತಿಂಗಳುಗಳಿಂದ, ವರ್ಷಗಳಿಂದ ನಮ್ಮ ವೈದ್ಯಕೀಯ ತಂಡಗಳು, ಪುನರ್ವಸತಿ ಕೇಂದ್ರಗಳು ಸ್ಫೋಟದಲ್ಲಿ ಗಾಯಗೊಂಡಿರುವವರನ್ನು ನೋಡುತ್ತಲೇ ಬಂದಿದ್ದು, ಅವರಲ್ಲಿ ಕೆಲವರು ಕೆಲವು ವಾರಗಳ ಹಿಂದಷ್ಟೇ ಚೇತರಿಸಿಕೊಂಡಿದ್ದಾರೆ. ಕಾಲು ಕಳೆದುಕೊಂಡ ಮಕ್ಕಳು, ತರುಣರು, ಮಹಿಳೆಯರಿಂದ ತುಂಬಿದ ವಾರ್ಡ್‌ಗಳನ್ನು ನೋಡಿದಾಗ ಹೃದಯ ಒಡೆದುಹೋಗುತ್ತದೆ' ಎಂದು ಅವರು ಹೇಳಿದ್ದಾರೆ.


ಅಫ್ಗಾನಿಸ್ತಾನದಲ್ಲಿ 1987ರಿಂದಲೂ ಕಾರ್ಯನಿರ್ವಹಿಸುತ್ತಿರುವ ರೆಡ್‌ಕ್ರಾಸ್, ಶಸ್ತ್ರ ಚಿಕಿತ್ಸಕರೂ ಸೇರಿದಂತೆ ಅಂದಾಜು 1,800 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಿಬ್ಬಂದಿಯನ್ನು ಅಲ್ಲಿ ನಿಯೋಜಿಸಿದೆ ಎಂದು ಐಸಿಆರ್‌ಸಿ ವಕ್ತಾರರಾದ ಫ್ಲೋರಿನಾ ಸೆರಿಕ್ಸ್ ತಿಳಿಸಿದ್ದಾರೆ.

ತಾಲಿಬಾನ್ ನಾಯಕತ್ವ ರಚನೆ:



ನಾಯಕ (ಅಮೀಲ್ ಅಲ್–ಮೂಮಿನೀನ್): **ಮೌಲಾವಿ ಹಿಬಾತುಲ್ಲಾ ಅಖುಂಜಾದಾ**

- 2016ರಿಂದ ತಾಲಿಬಾನ್ ಸಂಘಟನೆಯ ನಾಯಕತ್ವ. ಮಾಜಿ ಮುಖ್ಯ ನ್ಯಾಯಮೂರ್ತಿ. ರಾಜಕೀಯ, ಧಾರ್ಮಿಕ ಮತ್ತು ಸೇನಾ ವಿಚಾರಗಳಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ



ಉಪನಾಯಕ (ರಾಜಕೀಯ): **ಮುಲ್ಲಾ ಅಬ್ದುಲ್ ಘನಿ ಬರದರ್**

- ತಾಲಿಬಾನ್ ಸಹ ಸ್ಥಾಪಕ. ದೋಹಾದಲ್ಲಿರುವ ತಾಲಿಬಾನ್ ರಾಜಕೀಯ ಕಚೇರಿಯ ಮುಖ್ಯಸ್ಥ

ಉಪನಾಯಕ (ಸೇನೆ): **ಮುಲ್ಲಾ ಮುಹಮ್ಮದ್ ಯಾಕೂಬ್**

- ತಾಲಿಬಾನ್ ಸ್ಥಾಪಕ ಮುಲ್ಲಾ ಒಮರ್‌ನ ಪುತ್ರ. ಸೇನಾ ಕಾರ್ಯಾಚರಣೆಯ ಕಮಾಂಡರ್

ಉಪನಾಯಕ: ಸಿರಾಜುದ್ದೀನ್ ಹಕ್ಕಾನಿ

- ಹಕ್ಕಾನಿ ಸಂಘಟನೆಯ ನಾಯಕ

ವಿಭಾಗಗಳು:

- **ಸೇನಾ, ಗುಪ್ತಚರ, ರಾಜಕೀಯ, ಆರ್ಥಿಕತೆ ಸೇರಿ 13 ವಿಭಾಗಗಳಿವೆ. 'ತಾಲಿಬಾನ್ ಸಂಪುಟದ ಸಚಿವರು' ಈ ವಿವಿಧ ವಿಭಾಗಗಳನ್ನು ನೋಡಿಕೊಳ್ಳುತ್ತಾರೆ.**

- **ದೋಹಾದಲ್ಲಿರುವ ರಾಜಕೀಯ ಕಚೇರಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ತಾಲಿಬಾನ್ ಅನ್ನು ಪ್ರತಿನಿಧಿಸುತ್ತದೆ.**

ಹಿರಿಯ ನ್ಯಾಯಮೂರ್ತಿ: ಮುಲ್ಲಾ ಅಬ್ದುಲ್ ಹಕೀಂ

- ತಾಲಿಬಾನ್‌ನ ನ್ಯಾಯಾಂಗ ವ್ಯವಸ್ಥೆ ನೋಡಿಕೊಳ್ಳುವ ವ್ಯಕ್ತಿ. ದೋಹಾದಲ್ಲಿ ಮಾತುಕತೆ ತಂಡವನ್ನು ಮುನ್ನಡೆಸುತ್ತಾರೆ.

ನಾಯಕತ್ವ ಮಂಡಳಿ (ರಹಬಾರಿ ಶೌರಾ)

- ತಾಲಿಬಾನ್‌ನ ಅತ್ಯುನ್ನತ ಸಲಹಾ ಹಾಗೂ ನೀತಿ ನಿರ್ಧಾರ ಮಂಡಳಿ. ಇಲ್ಲಿ 26 ಸದಸ್ಯರಿದ್ದಾರೆ.

ಸರ್ಕಾರ ಸೇರಿ: ಮಹಿಳೆಯರಿಗೆ ಆಹ್ವಾನ

ಕಾಬೂಲ್ (ಎಪಿ): ಮಹಿಳೆಯರ ಬಗೆಗಿನ ನಿಲುವು ಬದಲಾಗಿದೆ ಎಂಬ ಸಂದೇಶವನ್ನು ನೀಡಲು ತಾಲಿಬಾನ್ ಬಯಸಿದೆ. ಅದಕ್ಕಾಗಿ, ತಮ್ಮ ಸರ್ಕಾರಕ್ಕೆ ಮಹಿಳೆಯರೂ ಸೇರಬೇಕು ಎಂಬ ಆಹ್ವಾನ ನೀಡಿದೆ.

ತಾಲಿಬಾನ್ ಆಡಳಿತ ಹೇಗಿರಲಿದೆ ಎಂಬುದರ ಬಗ್ಗೆ ಮೊದಲ ಪ್ರತಿಕ್ರಿಯೆಯಾಗಿ, ತಾಲಿಬಾನ್‌ನ ಸಾಂಸ್ಕೃತಿಕ ಆಯೋಗದ ಸದಸ್ಯ ಇನಾಂಉಲ್ಲಾ ಸಮಂಗಾನಿ ಈ ಹೇಳಿಕೆ ನೀಡಿದ್ದಾರೆ. ಆದರೆ, ದೇಶದಲ್ಲಿ ತಾಲಿಬಾನ್ ಆಡಳಿತ ಯಾವ ರೀತಿ ಇರುತ್ತದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ.

ಮಹಿಳೆಯರು ಸಂತ್ರಸ್ತರಾಗುವುದನ್ನು ಇಸ್ಲಾಮಿಕ್ ಎಮಿರೇಟ್ ಬಯಸುವುದಿಲ್ಲ. ಷರಿಯಾ ಕಾನೂನಿನ ಅಡಿಯಲ್ಲಿ ಮಹಿಳೆಯರೂ ಸರ್ಕಾರದಲ್ಲಿ ಇರಬೇಕು ಎಂದು ಅವರು ಹೇಳಿದ್ದಾರೆ.

ತಾಲಿಬಾನ್ ಆಡಳಿತದಲ್ಲಿ ತಾವು ಯಾವೆಲ್ಲ ಕಾನೂನುಗಳನ್ನು ಪಾಲಿಸಬೇಕೆಂಬುದು ಅಲ್ಲಿನ ಜನರಿಗೆ ಗೊತ್ತಿದೆ. ಆದರೆ, ಅವರು ಷರಿಯಾ, ಇಸ್ಲಾಮಿಕ್, ಕಾನೂನು ಎಂದರೇನು ಸ್ಪಷ್ಟವಾಗಿ ಏನು ಎಂಬುದನ್ನು ವಿವರಿಸಿಲ್ಲ. ಸರ್ಕಾರದಲ್ಲಿ 'ಎಲ್ಲರೂ ಭಾಗಿಯಾಗಬೇಕು' ಎಂದಷ್ಟೇ ಹೇಳಿದ್ದಾರೆ.

ತಾಲಿಬಾನ್‌ನ ಪ್ರತಿಜ್ಞೆಗಳನ್ನು ನೆನಪಿಸಿಕೊಂಡಿರುವ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ವಕ್ತಾರ ರೂಪರ್ಟ್ ಕಾಲ್‌ವಿಲ್ಲೆ, ತಾಲಿಬಾನ್ ಆಡಳಿತದ ಅವಧಿಯಲ್ಲಿ ಅವುಗಳು ಜಾರಿಯಾಗುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

'ಇಂಥದೊಂದು ಭರವಸೆಯನ್ನು ಗೌರವಿಸಲೇಬೇಕು. ಆದರೆ, ತಾಲಿಬಾನ್ ಪಡೆಯ ಇತಿಹಾಸ ಗೊತ್ತಿರುವುದರಿಂದ ಅದರ ಈ ಹೇಳಿಕೆಯನ್ನು ಸಂಶಯದಿಂದಲೇ ನೋಡಬೇಕಾಗುತ್ತದೆ. ಆದರೆ, ಅಲ್ಲಿನ ಜನರ ಹಕ್ಕುಗಳನ್ನು ರಕ್ಷಿಸಬೇಕಾಗಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಖಾಸಗಿ ವಾಹಿನಿಯ ಕಾರ್ಯಕ್ರಮ ನಿರೂಪಕಿಯೊಬ್ಬರು, ತಾಲಿಬಾನ್ ಅಧಿಕಾರಿಯೊಬ್ಬರನ್ನು ಸ್ಟುಡಿಯೊದಲ್ಲಿ ಮಂಗಳವಾರ ಸಂದರ್ಶನ ಮಾಡಿದ್ದು ಗಮನ ಸೆಳೆದಿದೆ. ಈ ಮಧ್ಯೆ, ಕಾಬೂಲ್‌ನಲ್ಲಿ ಹಿಜಾಬ್‌ನಲ್ಲಿರುವ ಮಹಿಳೆಯರು ಪ್ರತಿಭಟನೆ ನಡೆಸಿದ್ದು, 'ಮಹಿಳೆಯರನ್ನು ತೊಡೆದುಹಾಕದಿರಿ' ಎಂಬ ಫಲಕಗಳನ್ನು ಪ್ರದರ್ಶಿಸಿದ್ದಾರೆ.

ಅಫ್ಗನ್‌ನ ಮಾಜಿ ಅಧ್ಯಕ್ಷ ಹಮೀದ್ ಕರ್ಜೈ, ಅಬ್ದುಲ್ಲಾ ಅಬ್ದುಲ್ಲಾ ಸೇರಿದಂತೆ ಸರ್ಕಾರಿ ಅಧಿಕಾರಿಗಳೊಂದಿಗೆ ತಾಲಿಬಾನ್ ಮಂಗಳವಾರವೂ ಮಾತುಕತೆ ಮುಂದುವರಿಸಿದೆ. 20 ವರ್ಷಗಳಲ್ಲಿ ಬದಲಾವಣೆ ಕಂಡಿರುವ ದೇಶದಲ್ಲಿ, ತಾಲಿಬಾನ್ ನೇತೃತ್ವದ ಸರ್ಕಾರದ ಕಾರ್ಯವಿಧಾನ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ಚರ್ಚೆಯು ಕೇಂದ್ರೀಕೃತವಾಗಿದೆ ಎನ್ನಲಾಗಿದೆ.

ಬೀದಿಗಳಲ್ಲಿ ಗಸ್ತು

ಕಾಬೂಲ್‌ನ ಬೀದಿಗಳಲ್ಲಿ ಈಗ ತಾಲಿಬಾನ್ ಪಡೆ ಗಸ್ತು ತಿರುಗುತ್ತಿದ್ದು, ಸದ್ಯಕ್ಕೆ ಅಲ್ಲಿಂದ ಯಾವುದೇ ಅಹಿತಕರ ಘಟನೆಯು ವರದಿಯಾಗಿಲ್ಲ. ಆದರೆ, ಜನರು ಮನೆಯೊಳಗೇ ಬಂದಿಯಾಗಿದ್ದು, ಹೆದರಿಕೆಯಲ್ಲಿಯೇ ಇದ್ದಾರೆ. ಎರಡು ದಶಕಗಳಲ್ಲಿ ತಮ್ಮ ಹಕ್ಕುಗಳನ್ನು ಹಿಗ್ಗಿಸಿಕೊಂಡಿದ್ದ ಹಾಗೂ ದೇಶವನ್ನು ಮತ್ತೆ ಕಟ್ಟುವಲ್ಲಿ ಕೈಗೂಡಿಸಿದ್ದ ಮಹಿಳೆಯರು, ಹೆಚ್ಚಿನ ಭಯದಲ್ಲಿದ್ದಾರೆ.



ಫ್ರಾನ್ಸ್‌ನ ಪ್ರಜೆಗಳು ಮತ್ತು ಅವರ ಸಹೋದ್ಯೋಗಿಗಳು ಕಾಬೂಲ್ ವಿಮಾನ ನಿಲ್ದಾಣದಲ್ಲಿ ಫ್ರೆಂಚ್ ಮಿಲಿಟರಿ ಸಾರಿಗೆ ವಿಮಾನ ಏರಲು ಸಾಲಿನಲ್ಲಿ ನಿಂತಿರುವುದು –ಎಎಫ್‌ಪಿ ಚಿತ್ರ

ತಾಲಿಬಾನಿಗಳ ಪೈಕಿ ಇಬ್ಬರು ಮಲಯಾಳ ಭಾಷಿಕರು?

ತಿರುವನಂತಪುರ: ತಾಲಿಬಾನ್ ಉಗ್ರರು ಸಂತೋಷ, ಸಂಭ್ರಮದಿಂದ ಭಾವುಕರಾದ ವಿಡಿಯೊವೊಂದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು, ಆ ಗುಂಪಿನಲ್ಲಿ ಇದ್ದ ತಾಲಿಬಾನ್ ಉಗ್ರರು ಮಲಯಾಳಿ ಭಾಷಿಕರೇ ಎಂಬ ಸಂಶಯ ಮೂಡಿಸಿದೆ.

ಇಬ್ಬರು ಉಗ್ರರು ಮಲಯಾಳ ಭಾಷೆಯಲ್ಲಿ ಸಂವಹನ ನಡೆಸುತ್ತಿದ್ದಾರೆ ಎಂದಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು, ವಿಡಿಯೊ ತುಣಕನ್ನು ಟ್ವೀಟ್ ಮಾಡಿದ್ದಾರೆ. 'ಇಲ್ಲಿ ಕನಿಷ್ಠ ಇಬ್ಬರು ಮಲಯಾಳಿ ತಾಲಿಬಾನ್‌ಗಳಿರುವಂತೆ ತೋರುತ್ತದೆ. ಒಬ್ಬ ಮಲಯಾಳ ಭಾಷೆಯಲ್ಲಿ 'ಸಂಸಾರಿಕ್ಕಟ್ಟೆ' (ಅವರು ಮಾತನಾಡಲಿ) ಎನ್ನುತ್ತಾನೆ. ಮತ್ತೊಬ್ಬ ಆ ಮಾತು ಅರ್ಥವಾದಂತೆ ಪ್ರತಿಕ್ರಿಯಿಸುತ್ತಾನೆ' ಎಂದು ಟ್ವೀಟ್ ಮಾಡಿದ್ದಾರೆ.

ಕೇರಳದ 100ಕ್ಕೂ ಹೆಚ್ಚು ಯುವಕರು ಕಳೆದ ಕೆಲವು ವರ್ಷಗಳಿಂದ ದೇಶ ತೊರೆದು ಐಎಸ್ ಸೇರಿದಂತೆ ವಿವಿಧ ಉಗ್ರ ಸಂಘಟನೆಗಳನ್ನು ಸೇರಿರುವುದರಿಂದ, ತರೂರ್ ಅವರ ಈ ಟ್ವೀಟ್ ಗಮನ ಸೆಳೆದಿದೆ.

ಐಎಸ್ ಸಂಪರ್ಕದ ಆರೋಪದ ಮೇಲೆ ಕೇರಳದ ಇಬ್ಬರು ಮಹಿಳೆಯರನ್ನು ಎನ್‌ಐಎ ಮಂಗಳವಾರ ಬಂಧಿಸಿದೆ.

ಭಾರತೀಯರ ರಕ್ಷಣೆಗೆ ಕೇಂದ್ರ ಬದ್ಧ: ಜೋಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಅಫ್ಗಾನಿಸ್ತಾನದಲ್ಲಿರುವ ಭಾರತೀಯರೊಂದಿಗೆ ಕೇಂದ್ರ ಸರ್ಕಾರ ಸಂಪರ್ಕದಲ್ಲಿದ್ದು, ಅವರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಫ್ಗಾನಿಸ್ತಾನದ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ಭಾರತೀಯರ ಜೀವ ರಕ್ಷಣೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಈಗಾಗಲೇ ಕಾರ್ಯ ಪ್ರವೃತ್ತರಾಗಿದ್ದಾರೆ' ಎಂದರು.

'ಅಲ್ಲಿಯ ಜನರ ಜೀವ ಕಾಪಾಡುವುದು ಅವಶ್ಯವಾಗಿದೆ. ಅಮೆರಿಕ ಸರ್ಕಾರ ಅಲ್ಲಿನ ಜನರ ರಕ್ಷಣೆಗೆ ಮುಂದಾಗಬೇಕು' ಎಂದು ಹೇಳಿದರು.

ಅಫ್ಗನ್ ವಿದ್ಯಾರ್ಥಿಗಳು: ಚರ್ಚಿಸಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರಾಜ್ಯದಲ್ಲಿ ಶಿಕ್ಷಣ ಪಡೆಯುತ್ತಿರುವ ಅಫ್ಗಾನಿಸ್ತಾನದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಮಂಗಳವಾರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿ, 'ಶಿಕ್ಷಣ ಪಡೆಯುವ ಉದ್ದೇಶದಿಂದ ಅಫ್ಗಾನಿಸ್ತಾನದ ಅನೇಕ ವಿದ್ಯಾರ್ಥಿಗಳು ರಾಜ್ಯದಲ್ಲಿದ್ದಾರೆ. ಇವರ ವೀಸಾ ಏನಾಗಿದೆ ಎಂಬುದನ್ನು ಪರಿಶೀಲಿಸಿ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಅಫ್ಗಾನಿಸ್ತಾನಕ್ಕೆ ಮರಳುವಂತೆ ವಿದ್ಯಾರ್ಥಿಗಳನ್ನು ದೇಶದಿಂದ ಹೊರಗೆ ತಳ್ಳಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಮಾನವೀಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲು ಸಾಧ್ಯವಿದೆ ಎಂಬುದನ್ನು ಆಲೋಚಿಸಲಾಗುವುದು' ಎಂದು ಹೇಳಿದರು.

ತೆರವು ಕಾರ್ಯ ಯಶಸ್ವಿ

ಒಂದನೇ ಪುಟದಿಂದ

ಕಳೆದ ವರ್ಷ ಆಗಸ್ಟ್‌ನಲ್ಲಿ ಅಫ್ಗನ್ ಭಾರತೀಯ ರಾಯಭಾರಿಯಾಗಿ ಅಧಿಕಾರ ಸ್ವೀಕರಿಸಿದ್ದ ಟಂಡನ್, ಕಾಬೂಲ್‌ನಲ್ಲಿ ಕ್ಷಿಪ್ರವಾಗಿ ಬದಲಾದ ಪರಿಸ್ಥಿತಿಯನ್ನು ಗಮನಿಸಿ ತೊಂದರೆಗೀಡಾದ ಅನೇಕ ಭಾರತೀಯರಿಗೆ ರಾಯಭಾರ ಕಚೇರಿ ನೆರವು ಮತ್ತು ಆಶ್ರಯ ನೀಡಿದೆ ಎಂದರು.

'ನಾವು ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇವೆ. ಏಕೆಂದರೆ ಇನ್ನೂ ಕೆಲವು ಭಾರತೀಯ ನಾಗರಿಕರು ಇದ್ದಾರೆ. ಅದಕ್ಕಾಗಿಯೇ ಏರ್ ಇಂಡಿಯಾ ತನ್ನ ನಾಗರಿಕ ವಿಮಾನ ಯಾನ ಸೇವೆಗಳನ್ನು ಕಾಬೂಲ್‌ಗೆ ಮುಂದುವರಿಸಲಿದೆ' ಎಂದು ಹೇಳಿದರು.

ದಿನದ ಬೆಳವಣಿಗೆ:

- **ತಾಲಿಬಾನ್ ನಿಯಂತ್ರಿತ ಅಫ್ಗಾನಿಸ್ತಾನದ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ, ದೇಶಕ್ಕೆ ಬರಲು ಬಯಸುವ ಅಫ್ಗನ್ ಪ್ರಜೆಗಳಿಗೆ ತುರ್ತು ಇ-ವೀಸಾ ನೀಡುವುದಾಗಿ ಮಂಗಳವಾರ ಘೋಷಿಸಿದೆ. ಧರ್ಮಾತೀತ ವಾಗಿ ಯಾರು ಬೇಕಾದರೂ ಆನ್‌ಲೈನ್‌ನಲ್ಲಿ 'ಇ-ಎಮರ್ಜೆನ್ಸಿ ಎಕ್ಸ್-ಮಿಸ್ಕ್ ವೀಸಾ'ಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ.**
- ಕಾಬೂಲ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಒಂಬತ್ತು ಭಾರತೀಯ ಪ್ರಜೆಗಳು ಮತ್ತು 118 ನೇಪಾಳದ ಜನರು ವಿಶೇಷ ವಿಮಾನದಲ್ಲಿ ಮಂಗಳವಾರ ನೇಪಾಳದ ಕಠ್ಮಂಡು ತಲುಪಿದ್ದಾರೆ.
- ಕಾಬೂಲ್‌ನಲ್ಲಿ ಸಿಲುಕಿಕೊಂಡಿರುವ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 41 ಮಲಯಾಳಿಗರನ್ನು ಸುರಕ್ಷಿತವಾಗಿ ಕರೆತರಲು ಕೇಂದ್ರ ಸರ್ಕಾರ ಅಗತ್ಯ ವ್ಯವಸ್ಥೆ ಮಾಡಬೇಕು ಎಂದು ಕೇರಳ ಸರ್ಕಾರ ಮಂಗಳವಾರ ವಿನಂತಿಸಿದೆ
- ತಾಲಿಬಾನ್ ನಿಯಂತ್ರಣಕ್ಕೆ ಒಳಪಟ್ಟಿರುವ ಪ್ರದೇಶಗಳಲ್ಲಿ ತಮ್ಮ ಕುಟುಂಬಗಳು ಪರಿಸ್ಥಿತಿ ಹೇಗಿದೆಯೋ ಎಂಬ ಬಗ್ಗೆ ಪಂಜಾಬ್‌ನ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ಅಫ್ಗಾನ್ ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಪುಣೆಯಲ್ಲಿ ಓದುತ್ತಿರುವ ಯುದ್ಧಪೀಡಿತ ಅಫ್ಗನ್ ವಿದ್ಯಾರ್ಥಿಗಳು ತಮ್ಮ ವೀಸಾ ಅವಧಿ ವಿಸ್ತರಿಸುವಂತೆಮನವಿ ಮಾಡಿದ್ದಾರೆ.

> **ಭಾರತೀಯ ರಾಯಭಾರಿ ಮತ್ತು ರಾಜತಾಂತ್ರಿಕ ಸಿಬ್ಬಂದಿಯನ್ನು ಕಾಬೂಲ್‌ನಿಂದ ಭಾರತಕ್ಕೆ ಕರೆತರುವುದು ಅತ್ಯಂತ ಕಷ್ಟಕರ ಮತ್ತು ಸಂಕೀರ್ಣ ಸಂಗತಿಯಾಗಿತ್ತು**
> **ಜೈಶಂಕರ್,** ವಿದೇಶಾಂಗ ಸಚಿವ

ಬ್ಲಿಂಕೆನ್ ಜತೆ ಜೈಶಂಕರ್ ಚರ್ಚೆ

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ನಾಲ್ಕು ದಿನಗಳ ಭೇಟಿಗಾಗಿ ನ್ಯೂಯಾರ್ಕ್‌ಗೆ ತೆರಳಿದ್ದು, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಅವರೊಂದಿಗೆ ಅಫ್ಗಾನಿಸ್ತಾನದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಿದರು. ಕಾಬೂಲ್ ವಿಮಾನ ನಿಲ್ದಾಣದ ಕಾರ್ಯಾಚರಣೆಯನ್ನು ಮರುಸ್ಥಾಪಿಸುವ ತುರ್ತು ಇದೆ ಎಂದು ಅವರು ಒತ್ತಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅಮೆರಿಕ ಭಾರಿ ಪ್ರಯತ್ನ ನಡೆಸುತ್ತಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಕಾಬೂಲ್‌ನಲ್ಲಿರುವ ಭಾರತೀಯರ ಸುರಕ್ಷಿತ ತೆರವಿಗಾಗಿ ಅಮೆರಿಕದ ಅಧಿಕಾರಿಗಳ ಜೊತೆ ಜೈಶಂಕರ್ ಸತತ ಮಾತುಕತೆ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಅಫ್ಗಾನಿಸ್ತಾನದ ಪರಿಸ್ಥಿತಿಯನ್ನು ಭಾರತ ನಿರಂತರವಾಗಿ ಅವಲೋಕಿಸುತ್ತಿದೆ ಎಂದು ಜೈಶಂಕರ್ ತಿಳಿಸಿದ್ದಾರೆ. ಕಾಬೂಲ್‌ನಲ್ಲಿರುವ ಸಿಖ್ ಮತ್ತು ಹಿಂದೂ ಸಮುದಾಯದ ನಾಯಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಸುರಕ್ಷತೆಗೆ ಆದ್ಯತೆ ನೀಡಲಾಗುವುದು ಎಂದು ಮತ್ತೊಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಕಾಬೂಲ್‌ನಿಂದ ಮರಳಿದ ಎರಡನೇ ವಿಮಾನ

ವಾಯುಪಡೆಯ ವಿಮಾನವು ಕಾಬೂಲ್ ವಿಮಾನ ನಿಲ್ದಾಣದಿಂದ ಬುಧವಾರ ಬೆಳಿಗ್ಗೆ 8 ಗಂಟೆಗೆ ಭಾರತದತ್ತ ಹೊರಟಿತು. ರಾಯಭಾರ ಕಚೇರಿಯ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿ ಸೇರಿದಂತೆ 120ಕ್ಕೂ ಹೆಚ್ಚು ಜನರು ವಿಮಾನದಲ್ಲಿದ್ದರು. ಕೆಲವು ಭಾರತೀಯ ಪ್ರಜೆಗಳು ಸಹ ಹಿಂದಿರುಗಿದ್ದಾರೆ. ಇದು ಎರಡನೇ ಮಹತ್ವದ ತೆರವು ಕಾರ್ಯಾಚರಣೆಯಾಗಿದೆ. ಸಿ–17 ವಿಮಾನವು ಸೋಮವಾರ 40 ಜನರನ್ನು ಕಾಬೂಲ್‌ನಿಂದ ಹೊತ್ತು ತಂದಿತ್ತು. ಎರಡು ಸೇನಾ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶದ ಮಾರ್ಗದ ಬದಲಾಗಿ, ಇರಾನ್ ವಾಯುಪ್ರದೇಶ ಬಳಸಿಕೊಂಡು ಕಾಬೂಲ್‌ಗೆ ಹಾರಿದ್ದವು ಎಂದು ತಿಳಿದುಬಂದಿದೆ.



ತಾಲಿಬಾನಿಗಳು ಕಾಬೂಲ್ ಅನ್ನು ವಶಪಡಿಸಿಕೊಂಡ ನಂತರ ಅಲ್ಲಿನ ರಸ್ತೆಗಳು ವಾಹನ ಸಂಚಾರವಿಲ್ಲದೆ ಬಿಕೊ ಎನ್ನುತ್ತಿವೆ ಎಎಫ್‌ಪಿ ಚಿತ್ರ

ಕಾಬೂಲ್‌ನಲ್ಲಿ 'ಹೊಸ' ಸಹಜ ಸ್ಥಿತಿ


ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದ ಅದರಲ್ಲೂ ವಿಶೇಷವಾಗಿ ರಾಜಧಾನಿ ಕಾಬೂಲ್‌ನ ಫ್ಯಾಷನ್ ಕಾಳಜಿಯ ಜನರು ಪಾಶ್ಚಿಮಾತ್ಯ ಶೈಲಿಯ ದಿರಿಸಿನ ಮೊರೆ ಹೋಗಿದ್ದರು. ಜೀವನಶೈಲಿಯಲ್ಲಿಯೂ ಪಶ್ಚಿಮದ ಪದ್ಧತಿಗಳು ಇಣುಕು ಹಾಕತೊಡಗಿದ್ದವು. ಈಗ ಅದು ಬದಲಾಗಿದೆ. ಜನರು ಸಾಂಪ್ರದಾಯಿಕವಾದ ಸಲ್ವಾರ್ ಕಮೀಜ್ ಮೊರೆ ಹೋಗಿದ್ದಾರೆ. ಬೀದಿಗಳಲ್ಲಿ ಮಹಿಳೆಯರ ಸುಳಿವೇ ಇಲ್ಲ.

'ಭಯ ಎಲ್ಲರಲ್ಲಿಯೂ ಇದೆ' ಎಂದು ಕೆಲ ದಿನಗಳ ಬಳಿಕ ಕಿರಾಣಿ ಅಂಗಡಿ ತೆರೆದಿರುವ ಅಂಗಡಿಯಾತ ಹೇಳಿದ್ದಾರೆ.

ಜೀವನ ಸಹಜ ಸ್ಥಿತಿಗೆ ನಿಧಾನಕ್ಕೆ ಮರಳುತ್ತಿದೆ. ಆದರೆ, ಇದು ಹೊಸ ರೀತಿಯ ಸಹಜ ಸ್ಥಿತಿ ಎಂಬುದು ಜನರಿಗೆ ಅರಿವಾಗಿದೆ. ಜನರು ಬಹಳ ಎಚ್ಚರಿಕೆಯಿಂದಲೇ ಹೊರಗೆ ಕಾಲಿರಿಸಿದ್ದಾರೆ. ಬಹಳಷ್ಟು ಮಂದಿಗೆ ಕಳೆದ 20 ವರ್ಷಗಳು ಕನಸಿನಂತೆ ಕಳೆದುಹೋಗಿವೆ.

ಜನರ ಜೀವನಶೈಲಿ ಯಾವ ರೀತಿ ಇರಬೇಕು ಎಂದು ತಾಲಿಬಾನ್ ಆದೇಶವನ್ನೇನೂ ಮಾಡಿಲ್ಲ. ಆದರೆ, ಜನರೇ ತಮ್ಮ ಹಿಂದಿನ ಶೈಲಿಯನ್ನು ಮರೆತು ತಾಲಿಬಾನ್‌ಗೆ ಅನುಗುಣವಾದ ಶೈಲಿಗೆ ಮರಳಿದ್ದಾರೆ.

ಇರಾನ್, ಟರ್ಕಿಗೆ ಆತಂಕ: ಅಫ್ಗಾನಿಸ್ತಾನದ ಆಳ್ವಿಕೆಯು ತಾಲಿಬಾನ್ ಕೈಗೆ ಸಿಕ್ಕಿದ್ದು ಸುತ್ತಲಿನ ದೇಶಗಳಾದ ಇರಾನ್ ಮತ್ತು ಟರ್ಕಿಯ ಕಳವಳಕ್ಕೆ ಕಾರಣವಾಗಿದೆ. ತಾಲಿಬಾನ್ ಆಳ್ವಿಕೆಯಿಂದ ಕಂಗೆಡುವ ಜನರು ಈ ಎರಡೂ ದೇಶಗಳಿಗೆ ನುಗ್ಗುವ ಸಾಧ್ಯತೆ ಹೆಚ್ಚು. ಎರಡೂ ದೇಶಗಳಲ್ಲಿ ಕೊರೊನಾ ಸಾಂಕ್ರಾಮಿಕವು ತೀವ್ರವಾಗಿದೆ. ಈ ಸಂದರ್ಭದಲ್ಲಿ ಹೊರಗಿನ ಜನರು ನುಗ್ಗುವುದು ಇನ್ನಷ್ಟು ಅಪಾಯಕ್ಕೆ ಕಾರಣ ಆಗಬಹುದು ಎಂಬ ಆತಂಕವೂ ಇದೆ.





ಕೃಷಿಗೂ ತಂತ್ರಜ್ಞಾನದ ಖುಷಿ

ಕೃಷ್ಣ ಭಟ್

ಎಲ್ಲ ಕ್ಷೇತ್ರಗಳಲ್ಲಿ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ವ್ಯಾಪಿಸಿದೆ ಹಾಗೆಯೇ ಕೃಷಿಗೂ ಸಾಕಷ್ಟು ಆವರಿಸಿಕೊಂಡಿದೆ. ಇಂಥ ತಂತ್ರಜ್ಞಾನವನ್ನು ಬಳಸಿಕೊಂಡ ಕೃಷಿಕರ ಜೀವನ, ಬೆಳೆ, ಫಸಲು ನಿರ್ವಹಣೆ ಇನ್ನಷ್ಟು ಸುಧಾರಿಸಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಂತೂ ಕೃಷಿಯ ಪ್ರತಿ ಹಂತಕ್ಕೂ ಆ್ಯಪ್‌ಗಳು ಲಭ್ಯವಿವೆ. ಪ್ರತಿ ಬೆಳೆಯ ಬಗ್ಗೆಯೂ ಮಾಹಿತಿ ನೀಡುವ ಹಲವು ಆ್ಯಪ್‌ಗಳಿವೆ.

‘ಕಿಸಾನ್ ಸುವಿಧಾ’ ಎಂಬ ಕೇಂದ್ರ ಸರ್ಕಾರ 2016ರಲ್ಲಿ ಬಿಡುಗಡೆ ಮಾಡಿದ ಆ್ಯಪ್‌ನಲ್ಲಿ ರೈತರಿಗೆ ಉಪಯುಕ್ತ ಮಾಹಿತಿ ಇವೆ. ರಸಗೊಬ್ಬರ, ವಿಮೆ, ಮಣ್ಣಿನ ಫಲವತ್ತತೆ, ಸಾವಯವ ಕೃಷಿ ಸೇರಿದಂತೆ ಹಲವು ಅಗತ್ಯ ಮಾಹಿತಿ ಇದರಲ್ಲಿ ಸಿಗುತ್ತದೆ.

ಬೆಂಗಳೂರಿನ ಇಫ್ಕೋ ಕೂಡ ಒಂದು ಅತ್ಯುತ್ತಮ ‘ಇಫ್ಕೋ ಕಿಸಾನ್’ ಎಂಬ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ. ಇದರಲ್ಲೂ ರೈತರಿಗೆ ಬೆಳೆ ಹಾಗೂ ಇತರ ಅಗತ್ಯ ಮಾಹಿತಿ ಸಿಗುತ್ತದೆ. ಖಾಸಗಿ ಸಂಸ್ಥೆಗಳು ಅಭಿವೃದ್ಧಿಪಡಿಸಿರುವ ‘ಕೃಷಿಮಿತ್ರ’, ‘ಅಗ್ರಿಆ್ಯಪ್’ ಕೂಡ ಉಪಯುಕ್ತ ಮಾಹಿತಿಗಳನ್ನು ಹೊಂದಿವೆ.



> ಇತ್ತೀಚಿನ ಕೆಲವು ವರ್ಷಗಳಲ್ಲಿ ಕೃಷಿಯ ಪ್ರತಿ ಹಂತಕ್ಕೂ ಆ್ಯಪ್‌ಗಳು ಲಭ್ಯವಿವೆ. ಪ್ರತಿ ಬೆಳೆಯ ಬಗ್ಗೆಯೂ ಮಾಹಿತಿ ನೀಡುವ ಹಲವು ಆ್ಯಪ್‌ಗಳಿವೆ.



ಮಾರಾಟ ಖರೀದಿಗೂ ಇದೆ ಆ್ಯಪ್

ಮಾಹಿತಿ ಕುರಿತ ಆ್ಯಪ್‌ಗಳೇನೋ ಸಾಕಷ್ಟಿವೆ. ಹಲವು ಜನಪ್ರಿಯವಾಗಿರುವ ಒಂದೊಂದು ಬೆಳೆಗೂ ಆ್ಯಪ್‌ಗಳು ಸಿಗುತ್ತವೆ. ಆದರೆ, ಈವರೆಗೆ ಕೃಷಿ ಸರಕುಗಳ ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದ ಆ್ಯಪ್ ಆಧರಿತ ವ್ಯವಸ್ಥೆಯ ಕೊರತೆ ಇತ್ತು. ಅದೂ ಕೂಡ ಈಗ ನೀಗುತ್ತಿದೆ. ಇದಕ್ಕೆ ಖಾಸಗಿ ಕಂಪನಿಗಳು ಹೆಚ್ಚು ಆಸಕ್ತಿ ತೋರಿಸುತ್ತಿರುವುದು ಕೂಡ ವಿಶೇಷ.

ದೆಹಲಿ ಮೂಲದ ಕೃಷಿ ಆಚಾರ್ಯ ಟೆಕ್ನಾಲಜೀಸ್ ಸಂಸ್ಥೆ ‘ಬೀಜಕ್’ ಎಂಬ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ. ಇದರಲ್ಲಿ ಬೆಳೆಗಳನ್ನು ರೈತರು ಮಾರಾಟ ಮಾಡಬಹುದು ಮತ್ತು ಖರೀದಿದಾರರು ಖರೀದಿ ಮಾಡಬಹುದು. ಇದಕ್ಕೆ ಅಮೆರಿಕದ ವೆಂಚರ್ ಕ್ಯಾಪಿಟಲ್ ಸಂಸ್ಥೆ ಸೆಖೋಯಾ ಹೂಡಿಕೆ ಮಾಡಿದೆ ಎಂಬುದು ಈ ಉದ್ಯಮದ ವ್ಯಾಪ್ತಿಯನ್ನು ಸೂಚಿಸುತ್ತದೆ. ಈ ಆ್ಯಪ್ ಸೇರಿದಂತೆ ಬಹುತೇಕ ಕೃಷಿ ಸಂಬಂಧಿತ ಆ್ಯಪ್‌ಗಳು ಕನ್ನಡದ ಸೇರಿದಂತೆ ಹಲವು ಭಾರತೀಯ ಭಾಷೆಗಳಲ್ಲಿ ಲಭ್ಯವಿರುತ್ತವೆ. ಹೀಗಾಗಿ, ಇಂಗ್ಲಿಷ್ ಬರದ ಕೃಷಿಕರು ಆ್ಯಪ್ ಬಳಕೆಗೆ ಹಿಂಜರಿಯುವಂತಿಲ್ಲ.

ಇನ್ನು ಎನ್‌ಬಿಎಚ್‌ಸಿ ಎಂಬ ಸರಕು ನಿರ್ವಹಣೆ ಸಂಸ್ಥೆ ಕೂಡ ‘ಕೃಷಿಸೇತು’ ಎಂಬ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದೆ. ಇದು ಕೂಡ ಕೃಷಿಸಾಮಗ್ರಿಗಳ ಮಾರಾಟ ಮತ್ತು ಖರೀದಿಗೆ ಅವಕಾಶ ಮಾಡಿಕೊಡುತ್ತದೆ. ಎನ್‌ಬಿಎಚ್‌ಸಿ ಹೆಚ್ಚು ಸಾಂಸ್ಥಿಕ ಹೂಡಿಕೆ ಮತ್ತು ಸಗಟು ಹೂಡಿಕೆಗೆ ಹೆಚ್ಚು ಒತ್ತು ನೀಡಿದೆ.

ಅಗ್ರಿ ಮಾರ್ಕೆಟ್ ಎಂಬ ಸರ್ಕಾರ ಪ್ರಕಟಿಸಿದ ಆ್ಯಪ್‌ನಲ್ಲಿ ಎಲ್ಲ ಬೆಳೆಗಳ ಬೆಲೆ ಮಾಹಿತಿ ಸಿಗುತ್ತದೆ. ಇದರಲ್ಲಿ ವ್ಯಕ್ತಿ ಇರುವ 50 ಕಿ.ಮೀ. ಸುತ್ತಮುತ್ತಲಿನ ಮಂಡಿಗಳಲ್ಲಿನ ಸದ್ಯದ ಬೆಲೆ ಮಾಹಿತಿ ಲಭ್ಯವಾಗುತ್ತದೆ. ಇದು ರೈತರಿಗೆ ತಮ್ಮ ಬೆಳೆಗೆ ಎಷ್ಟು ಬೆಲೆ ಲಭ್ಯವಾಗಬಹುದು ಎಂಬ ಸ್ಪಷ್ಟ ಮಾಹಿತಿ ಸಿಕ್ಕಿಬಿಡುತ್ತದೆ.

ಇನ್ನು ಸರ್ಕಾರವೇ ಸಿಎಚ್‌ಸಿ ಫಾರ್ಮ್ ಮಶಿನರಿ ಆ್ಯಪ್ ಅಭಿವೃದ್ಧಿಪಡಿಸಿದೆ. ಇದಂತೂ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಿ ಯೋಚನೆ. ರೈತರು ತಮ್ಮ ಬಳಿ ಇರುವ ಕೃಷಿ ಸಲಕರಣೆಗಳನ್ನು ಬಾಡಿಗೆಗೆ ಈ ಆ್ಯಪ್ ಮೂಲಕ ಕೊಡಬಹುದು.

ತಮ್ಮ ಸಲಕರಣೆಯ ಕುರಿತ ಮಾಹಿತಿಯೊಂದಿಗೆ ಆ್ಯಪ್‌ನಲ್ಲಿ ನೊಂದಣಿ ಮಾಡಿಕೊಂಡರೆ, ಅಗತ್ಯ ಇದ್ದವರು ಇದೇ ಆ್ಯಪ್‌ನಲ್ಲಿ ಬುಕ್ ಮಾಡಬಹುದು. ಹಲವು ಪ್ರದೇಶಗಳಲ್ಲಿ ಈ ಆ್ಯಪ್ ಯಶಸ್ಸು ಕಂಡಿದೆ. ಆದರೆ, ಇದಕ್ಕೆ ಅಗತ್ಯವಿರುವ ಪ್ರಚಾರ ಸಿಗದಿರುವುದರಿಂದ ಬಳಕೆಯಲ್ಲಿ ಹಿಂದುಳಿದಿದೆ.

ಇದೇ ಯೋಚನೆಯನ್ನಿಟ್ಟುಕೊಂಡು ಅಗ್ರಿಶೇರ್ ರೀತಿಯ ಖಾಸಗಿ ಆ್ಯಪ್‌ಗಳೂ ಪ್ಲೇಸ್ಟೋರ್‌ನಲ್ಲಿ ಸಿಗುತ್ತವೆ.

ಅರಿವು ಮತ್ತು ಬಳಕೆಗೆ ಬೇಕಿದೆ ಒತ್ತು

ಕೃಷಿಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಆ್ಯಪ್‌ಗಳು ಈಗ ಲಭ್ಯವಿವೆ. ಇಂಟರ್ನೆಟ್ ಬಳಕೆ ಗ್ರಾಮೀಣ ಪ್ರದೇಶಗಳಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದಂತೆಯೇ, ತಂತ್ರಜ್ಞಾನದ ಮೂಲಕ ಮಾಹಿತಿ ಒದಗಿಸುವ ಪ್ರಕ್ರಿಯೆಗೂ ಇಂಬು ಸಿಕ್ಕಿದೆ. ಇಂಟರ್ನೆಟ್ ಅಳವಡಿಕೆಯ ಮೊದಲ ಹೆಜ್ಜೆಯೇ ಮಾಹಿತಿ ಒದಗಿಸುವಿಕೆಯಾಗಿರುವುದರಿಂದ, ಈ ನಿಟ್ಟಿನಲ್ಲಿ ಮಹತ್ವದ ಮುನ್ನಡೆಯಾಗುತ್ತಿದೆ. ಈಗಾಗಲೇ ಬೆಲೆ, ಬೆಳೆ, ಸಲಕರಣೆ ಕುರಿತ ಮಾಹಿತಿ ಆ್ಯಪ್‌ಗಳು ಜನಪ್ರಿಯವಾಗುತ್ತಿವೆ. ಇಂತಹ ಆ್ಯಪ್‌ಗಳನ್ನು ಬಳಸಿಕೊಂಡರೆ ರೈತರಿಗೆ ಈಗ ಮಾಹಿತಿ ಕೊರತೆ ಎದುರಾಗದು. ಕೃಷಿಗೆ ಹವಾಮಾನ ಕೂಡ ಅತ್ಯಂತ ಪ್ರಮುಖವಾದ್ದರಿಂದ, ಎಲ್ಲ ಪ್ರಮುಖ ಹವಾಮಾನ ಮುನ್ಸೂಚನೆಗಳನ್ನೂ ಈ ಆ್ಯಪ್‌ಗಳು ಕೊಡುತ್ತವೆ. ಅಲ್ಲದೆ, ಪ್ರತಿ ಕೃಷಿಸಂಬಂಧಿ ಉತ್ಪನ್ನ, ರಾಸಾಯನಿಕವನ್ನು ಉತ್ಪಾದಿಸುವ ಕಂಪನಿಗಳೂ ತಮ್ಮ ಉತ್ಪನ್ನಗಳನ್ನು ಬಳಕೆ ಮಾಡುವ ರೈತರಿಗಾಗಿ ಆ್ಯಪ್ ಅನ್ನು ಸಿದ್ಧಪಡಿಸಿದ್ದು, ಇದರಲ್ಲಿ ನಿರ್ದಿಷ್ಟ ಉತ್ಪನ್ನ ಬಳಕೆಯಾಗುವ ಬೆಳೆಗೆ ಸಂಬಂಧಿಸಿದ ಮಾಹಿತಿಯೂ ಸಿಗುತ್ತದೆ.

ಆದರೆ, ಮಾಹಿತಿಗಾಗಿ ಆ್ಯಪ್‌ಗಳ ಬಳಕೆ ಕೃಷಿಕ್ಷೇತ್ರದಲ್ಲಿ ಇನ್ನೂ ಹೆಚ್ಚಬೇಕಿದೆ. ಆಗ ಈ ವಲಯ ಹೆಚ್ಚು ಹೊಸತನಕ್ಕೆ ತೆರೆದುಕೊಳ್ಳುತ್ತದೆ ಮತ್ತು ಇನ್ನಷ್ಟು ಹೊಸ ಹೊಸ ಯೋಚನೆಗಳಿರುವ ಆ್ಯಪ್‌ಗಳು ಮತ್ತು ಅದರ ಮೂಲಕ ಸೇವೆಗಳು ಚಾಲ್ತಿಗೆ ಬರುತ್ತವೆ.

ಅಡುಗೆಮನೆಯಲ್ಲಿ ಸ್ಮಾರ್ಟ್ ‘ಕುಕ್ಕು’ಗಳು

ಪೃಥ್ವಿರಾಜ್

ನಮ್ಮದು ಬಿಡುವಿಲ್ಲದ ಜೀವನ; ನಮಗೆ ದೊರೆಯುವ ಅಲ್ಪ ಸಮಯದಲ್ಲೇ ಮನೆಕೆಲಸಗಳನ್ನು ಮುಗಿಸಬೇಕೆಂಬ ತವಕ. ಹೀಗಾಗಿ ಕಡಿಮೆ ಅವಧಿಯಲ್ಲಿ ಶೀಘ್ರವಾಗಿ ಅಡುಗೆಯನ್ನು ತಯಾರಿಸಲು ನೆರವಾಗುವ ವಸ್ತು-ಉಪಕರಣಗಳಿಗೆ ಬೇಡಿಕೆಗಳು ಹೆಚ್ಚು. ಇದರಿಂದ ಅಡುಗೆಮನೆಗೂ ತಂತ್ರಜ್ಞಾನ ನುಗ್ಗುತ್ತಿದೆ. ಅಡುಗೆಮನೆಗೆ ಆಧುನಿಕ ತಂತ್ರಜ್ಞಾನ ಕೊಟ್ಟಿರುವ ಕೆಲವು ವಸ್ತು-ಉಪಕರಣಗಳು ಇಲ್ಲಿವೆ.

ಸ್ಮಾರ್ಟ್ ಒವೆನ್

ನಮ್ಮ ಮಾತನ್ನು ಕೇಳಿಸಿಕೊಂಡು ಖಾದ್ಯಗಳನ್ನು ತಯಾರಿಸಬಲ್ಲ ಉಪಕರಣಗಳು ನಮಗೆ ಇಷ್ಟವಾಗದಿದ್ದೀತೆ? ಸಾಂಪ್ರದಾಯಿಕ ಪದ್ಧತಿಯಲ್ಲಿ, ನಮ್ಮ ಕೌಶಲವನ್ನು ಶಕ್ತಿ ಬಳಸಿ ಅಡುಗೆಮಾಡುತ್ತಲೇ ಬಂದಿದ್ದೇವೆ. ಇದೇ ಕೆಲಸವನ್ನು ತಂತ್ರಜ್ಞಾನ ನೆರವಿನೊಂದಿಗೆ ಮಾಡಿಕೊಳ್ಳುವಂತಿದ್ದರೆ? ಹೀಗೆ ನಮ್ಮ ಪಾಕಶಾಲೆಯಲ್ಲಿ ತಾಂತ್ರಿಕವಾಗಿ ನೆರವಾಗುವ ಹಲವು ಉಪಕರಣಗಳು ಈಗಾಗಲೇ ಲಭ್ಯವಿವೆ. ಅವುಗಳಲ್ಲಿ ಕ್ಯಾಸೊರಿ ಟೋಸ್ಟರ್ ಒವೆನ್ ಕೂಡ ಒಂದು. ವೈ-ಫೈ ತಂತ್ರಜ್ಞಾನ ನೆರವಿನೊಂದಿಗೆ ಕಾರ್ಯನಿರ್ವಹಿಸುವ ಈ ಉಪಕರಣ ನಮ್ಮ ಧ್ವನಿಯ ಆದೇಶಾನುಸಾರ ಅಡುಗೆಯನ್ನು ಸಿದ್ಧಗೊಳಿಸುತ್ತದೆ. ನಮ್ಮ ಸ್ಮಾರ್ಟ್‌ಫೋನ್‌ಗೆ ಜೋಡಿಸಿಕೊಂಡು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು. ಇದರಲ್ಲಿ ಹೈ-ಸ್ಪೀಡ್, ಏರ್ ಫ್ರೈ, ಬೇಕ್, ಟೋಸ್ಟ್, ಪ್ರೀಹೀಟ್, ರೋಸ್ಟ್, ಬ್ರಾಯಿಲ್, ಕೀಪ್ ವಾರ್ಮ್, ಸ್ಲೋ ಕುಕ್‌ನಂತಹ ಮೋಡ್‌ಗಳು ಇರುವುದರಿಂದ ಅಡುಗೆಯನ್ನು ತಯಾರಿಸುವುದು ಸುಲಭ. ವಿಶೇಷವೆಂದರೆ 12 ಇಂಚುಗಳ ಗಾತ್ರದ ಪಿಜ್ಜಾ ತಯಾರಿ ಮೋಡ್ ಕೂಡ ಇದೆ. ಆಂಡ್ರಾಯ್ಡ್ ಹಾಗೂ ಐಒಎಸ್ ಎರಡೂ ತಂತ್ರಾಂಶಗಳಿಗೂ ಹೊಂದಿಕೊಳ್ಳುತ್ತದೆ. ಗೂಗಲ್ ಅಸಿಸ್ಟೆಂಟ್ ಅಥವಾ ಅಮೆಜಾನ್ ಅಲೆಕ್ಸಾ ಮೂಲಕ ಅಡುಗೆ ಮಾಡಲು ಆದೇಶಿಸಬಹುದು.




ಬೇಯಿಸುವ ಅವಧಿ ನಿಖರ

ನಾವು ಸೇವಿಸುವ ಆಹಾರ ಹದವಾಗಿ ಬೆಂದರಷ್ಟೇ ರುಚಿ. ಇದಕ್ಕಾಗಿಯೇ ರೂಪಿಸಲಾಗಿದೆ: ಅನೊವಾ ಕಲಿನರಿ ಸಾಸ್ ವೈಡ್ ಸ್ಮಾರ್ಟ್ ಪ್ರಿಸನ್ ಕುಕ್ಕರ್. ನಳಿಕೆ ರೂಪದಲ್ಲಿರುವ ಈ ಉಪಕರಣವನ್ನು ಬಳಸುವುದು ಸುಲಭ. ಇದನ್ನು ನಮ್ಮ ಸ್ಮಾರ್ಟ್‌ಫೋನ್‌ಗೆ ಜೋಡಿಸಿ ಆ್ಯಪ್ ನೆರವಿನೊಂದಿಗೆ ಉಪಯೋಗಿಸಿಕೊಳ್ಳಬಹುದು. ಬೇಯಿಸಬೇಕಿರುವ ಹಣ್ಣು, ತರಕಾರಿ ಮುಂತಾದ ಆಹಾರಪದಾರ್ಥಗಳನ್ನು ಸೀಲ್‌ಬ್ಯಾಗ್‌ಗೆ ಹಾಕಿ ಪಾತ್ರೆಯಲ್ಲಿಟ್ಟು ಈ ಉಪಕರಣವನ್ನು ಪಾತ್ರೆಗೆ ಜೋಡಿಸಿ, ಆ್ಯಪ್‌ನಲ್ಲಿ ಆಹಾರ ಪದಾರ್ಥದ ಮಾಹಿತಿ ನೀಡಿದರೆ ಆ ಪದಾರ್ಥವನ್ನು ಎಷ್ಟು ಹೊತ್ತು ಬೇಯಿಸಬೇಕು ಎಂಬ ಮಾಹಿತಿ ಈ ಉಪಕರಣದ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗಾಗಿ ನಿರ್ದಿಷ್ಟ ಸಮಯದೊಳಗೆ ಪದಾರ್ಥಗಳನ್ನು ಬೇಯಿಸಿ, ರುಚಿ ರುಚಿಯಾಗಿ ಸೇವಿಸಬಹುದು.



ಹ್ಯಾಮಿಲ್ಟನ್ ಸ್ಮಾರ್ಟ್ ಕಾಫಿ ಮೇಕರ್


‘ಅಲೆಕ್ಸಾ ಹಾಡು ಕೇಳಿಸು...’, ‘ಅಲೆಕ್ಸಾ ಸುದ್ದಿ ತಿಳಿಸು...’ ಎಂದು ಕೇಳಿದ ಹಾಗೆ ‘ಅಲೆಕ್ಸಾ ಕಾಫಿ ತಯಾರಿಸಿ ಕೊಡು’ ಎಂದು ಹೇಳುವಂತಿದ್ದರೆ ಎಷ್ಟು ಚೆನ್ನ! ಇಂಥ ಬಯಕೆ ಹಲವರಿಗೆ ಈಗಾಗಲೇ ಬಂದಿರಬಹುದು. ಇಂಥವರಿಗಾಗಿ ಈಗಾಗಲೇ ಮಾರುಕಟ್ಟೆಗೆ ಕೆಲವು ಸ್ಮಾರ್ಟ್ ಕಾಫಿ ಮೇಕರ್‌ಗಳು ಲಗ್ಗೆಯಿಟ್ಟಿವೆ. ಅಂಥವುಗಳಲ್ಲಿ ವೈ-ಫೈ ತಂತ್ರಜ್ಞಾನ ನೆರವಿನೊಂದಿಗೆ ಕಾರ್ಯನಿರ್ವಹಿಸುವ ಈ ಸ್ಮಾರ್ಟ್ ಕಾಫಿ ಮೇಕರ್ ಕೂಡ ಒಂದು. ಇದರಲ್ಲಿ ಒಮ್ಮೆಗೆ 12 ಕಪ್ ಕಾಫಿ ತಯಾರಿಸಿಕೊಳ್ಳಬಹುದು. ಇದರ ವಿಶೇಷವೆಂದರೆ ನಿರ್ವಹಣೆಗಾಗಿ ನಮ್ಮ ಸ್ಮಾರ್ಟ್‌ಫೋನ್‌ಗೆ ಯಾವುದೇ ಆ್ಯಪ್ ಅಳವಡಿಸಿಕೊಳ್ಳುವ ಅಗತ್ಯವಿಲ್ಲ. ಜೊತೆಗೆ ಅಲೆಕ್ಸಾ ತಂತ್ರಜ್ಞಾನ ಜೋಡಿಸಿರುವುದರಿಂದ ಹಾಲು, ಸಕ್ಕರೆ, ಕಾಫಿ ಪುಡಿ ಹಾಕಿಟ್ಟರೆ ಸಾಕು, ನಿಮ್ಮ ಮಾತು ಕೇಳಿದ ಕೂಡಲೇ ಕಾಫಿ ತಯಾರಿಸಿ ಕೊಡುತ್ತದೆ. ಕಾಫಿ ಮೇಕರ್‌ನ ಮೇಲ್ಭಾಗದಲ್ಲಿರುವ ಸೂಚನಾಫಲಕದಲ್ಲಿನ ಕೀ ಬಟನ್‌ಗಳು ನಿರ್ವಹಣೆಗೆ ನೆರವಾಗುತ್ತವೆ.



ರೆನ್ಫೋ ಸ್ಮಾರ್ಟ್ ಸ್ಕೇಲ್

ವೈದ್ಯರು ಆರೋಗ್ಯದೃಷ್ಟಿಯಿಂದ ಅಳತೆಯ ಊಟಕ್ಕೆ ಹೆಚ್ಚು ಶಿಫಾರಸು ಮಾಡುತ್ತಿರುತ್ತಾರೆ. ಆದರೆ ನಾವು ಸೇವಿಸುತ್ತಿರುವ ಆಹಾರ ಪ್ರಮಾಣದ ಬಗ್ಗೆ ನಮಗೆ ತಿಳಿಯುವುದಿಲ್ಲ. ಈ ಸಮಸ್ಯೆಯ ಪರಿಹಾರಕ್ಕೆ ನೆರವಾಗುತ್ತದೆ: ರೆನ್ಫೊ ಸ್ಮಾರ್ಟ್ ಸ್ಕೇಲ್.

ಐಒಎಸ್ ಹಾಗೂ ಅಂಡ್ರಾಯ್ಡ್ – ಎರಡೂ ತಂತ್ರಾಂಶಗಳಿಗೆ ಹೊಂದಿಕೊಳ್ಳುವ ಈ ಉಪಕರಣವನ್ನು ಬ್ಲೂಟೂತ್ ನೆರವಿನಿಂದ ನಮ್ಮ ಸ್ಮಾರ್ಟ್‌ಫೋನ್‌ಗೆ ಜೋಡಿಸಿ ಬಳಸಿಕೊಳ್ಳಬಹುದು. ಗರಿಷ್ಠ 5 ಕೆ.ಜಿ. ತೂಕದ ಹಣ್ಣು, ತರಕಾರಿ, ಆಹಾರಪದಾರ್ಥಗಳನ್ನು ಈ ಸ್ಕೇಲ್ ಮೇಲಿಟ್ಟು ಪರಿಶೀಲಿಸಬಹುದು. ಉದಾಹರಣೆಗೆ, ಯಾವುದಾದರೂ ಒಂದು ಹಣ್ಣನ್ನೊ ಅಥವಾ ಆಹಾರ ಪದಾರ್ಥವನ್ನೋ ಇದರ ಮೇಲಿಟ್ಟರೆ ಅದರಲ್ಲಿನ ವಿಟಮಿನ್ಸ್, ಕ್ಯಾಲರಿ, ಪ್ರೊಟೀನ್ಸ್ ಸೇರಿದಂತೆ ಎಲ್ಲ ಪೋಷಕಾಂಶಗಳ ವಿವರಗಳು ನಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಇದಕ್ಕಾಗಿಯೇ ರೂಪಿಸಲಾಗಿರುವ ಆ್ಯಪ್‌ನಲ್ಲಿ ಕಾಣಿಸಿಕೊಳ್ಳುತ್ತವೆ. ಇದರಿಂದ ನಮ್ಮ ದೇಹಕ್ಕೆ ಎಷ್ಟು ಪೋಷಕಾಂಶಗಳು ಲಭಿಸುತ್ತವೆ ಎಂದು ಸುಲಭವಾಗಿ ತಿಳಿಯುತ್ತದೆ. ಆರೋಗ್ಯವನ್ನು ಕಾಪಾಡಿಕೊಳ್ಳಲು ಹಂಬಲಿಸುವವರಿಗೆ ಈ ಉಪಕರಣ ಪ್ರಯೋಜನಕಾರಿ.



ಸಿಇಟಿ ದಿಕ್ಸೂಚಿ

Chemistry – Thermodynamics & Equilibrium-4

1. Conjugate base of $H_2PO_4^-$ is
   (1) HPO_4^- (2) HPO_4^{2-}
   (3) H_3PO_4 (4) PO_4^{3-}

2. Identify a species which is ‘NOT’ a Bronsted acid but a Lewis acid.
   (1) BF_3 (2) H_3^+O
   (3) NH_3 (4) $HC\ell$

3. The pH of 10^{-8} M $HC\ell$ solution is
   (1) 8 (2) 6.9586
   (3) More than 8 (4) Slightly more than 7

4. In the reaction ; $Fe(OH)_{3(s)} \rightleftharpoons Fe^{3+}_{(aq)} + 3OH^-_{(aq)}$, if the concentration of OH^- ions is decreased by 1 / 4 times, then the equilibrium concentration of Fe^{3+} will increase by,
   (1) 8 times (2) 16 times
   (3) 64 times (4) 4 times

5. In the reaction ; $Fe(OH)_{3(s)} \rightleftharpoons Fe^{3+}_{(aq)} + 3OH^-_{(aq)}$, if the concentration of OH^- ions is decreased by 1 / 4 times, then the equilibrium concentration of Fe^{3+} will increase by,
   (1) 8 times (2) 16 times
   (3) 64 times (4) 4 times

6. Solubility of AgCl is least in
   (1) Pure water (2) 0.1 M NaCl
   (3) 0.1 M $AlCl_3$ (4) 0.1 M $BaCl_2$

7. .Addition of excess $AgNO_3$ to an aqueous solution of 1 mole of $PdCl_2$+$4NH_3$, gives 2 moles of AgCl. The conductivity of this solution corresponds to
   (1) 1 : 3 electrolyte
   (2) 1 : 1 electrolyte
   (3) 1 : 4 electrolyte
   (4) 1 : 2 electrolyte

8. The equilibrium constant for the reaction
   $N_{2(g)} + O_{2(g)} \rightleftharpoons 2NO_{(g)}$ is 4×10^{-4} at 2000 K.
   In presence of a catalyst the equilibrium is attained ten times faster. Therefore the equilibrium constant in presence of catalyst at 2000 K is
   (1) 40×10^{-4} (2) 4×10^{-2}
   (3) 4×10^{-3} (4) 4×10^{-4}

9. The reaction quotient ‘Q_c’ is useful in predicting the direction of the reaction. Which of the following is incorrect?
   (1) If $Q_c > K_c$ the reverse reaction is favoured
   (2) If $Q_c < K_c$ the forward reaction is favoured
   (3) If $Q_c = K_c$ reaction at equilibrium
   (4) If $Q_c > K_c$ forward reaction is favoured

10. The aqueous solution of following salt will have the lowest pH:
    (1) $NaClO_3$ (2) NaClO
    (3) $NaClO_2$ (4) $NaClO_4$

11. In presence of HCl,H_2S results the precipitation of Group-2 elements but not Gp-4 elements during qualitative analysis. It is due to
    (1) higher concentration of S^{2-}
    (2) higher concentration of H^+
    (3) lower concentration of S^{2-}
    (4) lower concentration of H^+

12. The pH of the solution obtained by mixing 100 ml of a solution of pH = 3 with 400 ml of a solution of pH = 4 is
    (1) 3 –log 2.8 (2) 7 – log 2.8
    (3) 4 – log 2.8 (4) 5 – log 2.8

13. ml of 0.4 N NaOH is mixed with 20 ml of 0.1 N HCl. The pH of the resulting solution will be
    (1) 6 (2) 7
    (3) 8 (4) 5

14. On adding which of the following, the pH of 20 ml of 0.1 N HCl will not alter?

Answers

1. Answer (2)
   Solution: Conceptual

2. Answer (1)
   Solution: BF_3 is an electron deficient compound

3. Answer (2)
   Solution:
   $[H^+]_{Total} = [H^+]_{Acid} + [H^+]_{Water}$
   $= 10^{-8} + 10^{-7}$
   $= 1.1 \times 10^{-7}$
   $\Rightarrow pH = -\log 1.1 \times 10^{-7}$
   $= 7 - \log 1.1$
   $= 6.95$

4. Answer (3)
   Solution: For the reaction:
   $Fe(OH)_{3(s)} \rightleftharpoons Fe^{3+}_{(aq)} + 3OH^-_{(aq)}$
   Equilibrium constant (k) = $[Fe^{+3}]\,[^-OH]^3$
   If the concentration of ^-OH ion is decreased by ¼ times,
   Now, K = $[Fe^{+3}]\,[^-OH / 4]^3$
   K = $[Fe^{+3}]\,[^-OH / 64]$
   So, at equilibrium concentration of Fe^{+3} is increased by 64 times.
   So that equilibrium constant does not change.

5. Answer (3)
   Solution: For the reaction:
   $Fe(OH)_{3(s)} \rightleftharpoons Fe^{3+}_{(aq)} + 3OH^-_{(aq)}$
   Equilibrium constant (k) = $[Fe^{+3}]\,[^-OH]^3$
   If the concentration of ^-OH ion is decreased by ¼ times,
   Now, K = $[Fe^{+3}]\,[^-OH / 4]^3$
   K = $[Fe^{+3}]\,[^-OH / 64]$
   So, at equilibrium concentration of Fe^{+3} is increased by 64 times.
   So that equilibrium constant does not change.

6. Answer (3)
   Solution: The solubility of AgCl is least in 0.1 M $AlCl_3$ due to common ion effect.

7. Answer (4)
   Solution:
   $[Pd(CH_3)_4]Cl_2\ [Pd(NH_3)_4]^{2+} + 2Cl^-$
   It is 1:2 i.e., AB_2 type of electrolyte.

8. Answer (4)
   Solution:
   Equilibrium constant does not depend on the catalyst.
   So, the value of constant is the same that is 4×10^{-4}.

9. Answer (4)
   Solution: If the reaction is in reverse direction then the reaction quotient is greater than equilibrium constant $Q_c > K_c$.
   If the reaction is in equilibrium then reaction quotient is equal to equilibrium constant $Q_c > K_c$.
   If $Q_c > K_c$. The reaction is forward.

10. Answer (4)
    Solution: Acidic strength of chlorine oxo acids increases with increase in oxidation state
    Acidic strength order:
    $HClO < HClO_2 < HClO_3 < HClO_4$
    Strong acid has lower P^H
    $\therefore NaClO_4$ salt of $HClO_4$ will have lowest P^H.

11. Answer (3)
    Solution: Lower concentration of is due to common ion effect

12. Answer (3)
    Solution: pH = 3 means 10^{-3} M solution contain
    $= \frac{10^{-3} \times 100}{1000} = 10 \times 10^{-5}$ mol
    400 mL of 10^{-4} M
    $= \frac{10^{-4} \times 400}{1000} = 4 \times 10^{-5}$ mol
    Total number of moles present
    $= \frac{10^{-4} \times 400}{1000} = 4 \times 10^{-5}$ mol
    Total volume after mixing = (100 + 400) = 500 mL
    Molarity of the mixture
    $= \frac{14 \times 10^{-5}}{500} \times 1000$
    $= \left(\frac{14}{5} \times 10^{-4}\right)$M
    pH of the mixture solution
    $= -\log\left(\frac{14}{5} \times 10^{-4}\right)$
    $= -\log 2.8 - (-4)$
    pH = 4 – log 2.8

13. Answer (2).
    Solution: Millimoles of NaOH = 5×0.4 = 2
    Millimole of HCl = 20 ×0.1 = 2
    So, 2 millimoles of NaOH and 2 millimoles of HCl completely neutralize each other, rest into a neutral solution (pH = 7)

14. Answer (4)
    Solution: 0.1 N HCl has pH = 1 and adding an 500 mL of HCl of same pH will not alter pH

15. Answer (1)
    Solution:
    $2N_2O_4 \rightarrow 4NO_2$

Initially	2	0
At 596	2p	4p
Finally	2-2p	4p

    As given, $2p = \frac{20 \times 2}{100}$
    2p = 0.4
    $\therefore$ p = 0.2 atm
    Resulting pressure = 2- 2p+4p = 2.4 atm.

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 43

574. ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ನಂತರ ಭಾರತದ 2ನೇ ಗೃಹ ಸಚಿವರಾದವರು ಯಾರು?
ಎ) ಅಬುಲ್ ಕಲಾಂ ಆಜಾದ್
ಬಿ) ಮದನ್ ಮೋಹನ ಮಾಳವೀಯ
ಸಿ) ಸಿ. ರಾಜಗೋಪಾಲಾಚಾರಿ
ಡಿ) ಮೇಲಿನ ಯಾರೂ ಅಲ್ಲ

575. ಎರಡನೇ ಪಂಚವಾರ್ಷಿಕ ಯೋಜನೆಯ ಆದ್ಯತಾ ವಲಯ ಯಾವುದಾಗಿತ್ತು?
ಎ) ಕೃಷಿ
ಬಿ) ಕೈಗಾರಿಕೆ
ಸಿ) ಪಶುಸಂಗೋಪನೆ
ಡಿ) ಜಲಾಶಯ ನಿರ್ಮಾಣ

576. ವಿಶ್ವಬ್ಯಾಂಕ್ ಮುಖ್ಯ ಕಚೇರಿ ಎಲ್ಲಿದೆ?
ಎ) ಜಿನೇವಾ
ಬಿ)ವಿಯೆನ್ನಾ
ಸಿ)ನ್ಯೂಯಾರ್ಕ್
ಡಿ)ವಾಷಿಂಗ್ಟನ್ ಡಿ.ಸಿ

577. ಕೆಳಗಿನ ಯಾವ ರಾಜ್ಯದಲ್ಲಿ ಒಟ್ಟು ಸಂತಾನೋತ್ಪತ್ತಿ ದರ ಹೆಚ್ಚಿದೆ?
ಎ) ಬಿಹಾರ
ಬಿ) ಮಧ್ಯಪ್ರದೇಶ
ಸಿ) ಕರ್ನಾಟಕ
ಡಿ) ಕೇರಳ

578. ಭಿಮ್ ಆ್ಯಪ್ ಲೋಕಾರ್ಪಣೆಗೊಂಡದ್ದು ಎಂದು?
ಎ) ಡಿಸೆಂಬರ್ 30, 2016
ಬಿ) ಜನವರಿ 30, 2017
ಸಿ) ಜನವರಿ 26, 2015
ಡಿ) ಆಗಸ್ಟ್ 15, 2015

579. ರಾಷ್ಟ್ರೀಯ ಗಣಿತ ದಿನವನ್ನು ಯಾವತ್ತು ಆಚರಿಸಲಾಗುತ್ತದೆ?
ಎ) ಡಿಸೆಂಬರ್-1
ಬಿ) ಡಿಸೆಂಬರ್-11
ಸಿ) ಡಿಸೆಂಬರ್-2
ಡಿ) ಡಿಸೆಂಬರ್-22

580. ಕರ್ನಾಟಕದ ಪ್ರಸ್ತುತ ಗೃಹಮಂತ್ರಿ ಯಾರು?
ಎ) ಎಸ್.ಆರ್.ಬೊಮ್ಮಾಯಿ
ಬಿ) ಆರಗ ಜ್ಞಾನೇಂದ್ರ
ಸಿ) ಎಸ್. ಅಂಗಾರ
ಡಿ) ಅಶ್ವತ್ಥನಾರಾಯಣ

581. ಯುರೋಪ್‌ನಿಂದ ಭಾರತಕ್ಕೆ ಜಲಮಾರ್ಗ ಕಂಡುಹಿಡಿದವರು ಯಾರು?
ಎ) ಕೊಲಂಬಸ್
ಬಿ) ವಾಸ್ಕೋಡಗಾಮ
ಸಿ) ಮೆಗಲಾನ್
ಡಿ) ಜೇಮ್ಸ್ ವ್ಯಾಟ್ಸನ್

582. ಆನಂದಮಠ ಕೃತಿಯ ಕರ್ತೃ ಯಾರು?
ಎ) ಬಂಕಿಮಚಂದ್ರ ಚಟರ್ಜಿ
ಬಿ) ಜವಾಹರಲಾಲ್ ನೆಹರು
ಸಿ) ರವೀಂದ್ರನಾಥ ಟಾಗೋರ್
ಡಿ) ಶಿವರಾಮ ಕಾರಂತ

583. ಬೈಸಿಕಲ್ ಕಂಡುಹಿಡಿದವರು ಯಾರು?
ಎ) ಮೆಕ್ಮಿಲನ್
ಬಿ) ರೈಟ್ ಸಹೋದರರು
ಸಿ) ಆಲ್ಫ್ರೆಡ್ ನೋಬೆಲ್
ಡಿ) ಅಲೆಗ್ಸಾಂಡರ್ ಪ್ಯಾಸ್ಕಲ್

584. ಬಿಸ್ಮಿಲ್ಲಾ ಖಾನ್ ನುಡಿಸುತ್ತಿದ್ದ ವಾದ್ಯ ಯಾವುದು?
ಎ) ಶಹನಾಯಿ
ಬಿ) ಕೊಳಲು
ಸಿ) ಸ್ಯಾಕ್ಸೋಫೋನ್
ಡಿ) ಸಿತಾರ್

585. ಕನ್ನಡದ ಮೊಟ್ಟಮೊದಲ ನಾಟಕ ಯಾವುದು?
ಎ) ಮೃಚ್ಛಕಟಿಕ
ಬಿ) ಶಾಕುಂತಲಾ
ಸಿ) ಸಂಗೀತ ಚೂಡಾಮಣಿ
ಡಿ) ಮಿತ್ರಾವಿಂದ ಗೋವಿಂದ

586. ಮಹಮ್ಮದ್ ಗವಾನ್ ನಿರ್ಮಿಸಿದ ಮದರಸಾ ಎಲ್ಲಿದೆ?
ಎ) ಬೀದರ್
ಬಿ) ಕಲಬುರ್ಗಿ
ಸಿ) ರಾಯಚೂರು
ಡಿ) ವಿಜಯಪುರ

587. ರಾಷ್ಟ್ರಕೂಟರ ರಾಜಧಾನಿ ಯಾವುದು?
ಎ) ಬ್ರಹ್ಮಗಿರಿ
ಬಿ) ಬನವಾಸಿ
ಸಿ) ಮಾನ್ಯಕೇಟ
ಡಿ) ಕಲ್ಯಾಣ

588. ದಕ್ಷಿಣ ಭಾರತದ ತಾಜ್‌ಮಹಲ್ ಯಾವುದು?
ಎ) ಗೋಲಗುಮ್ಮಟ
ಬಿ) ಇಬ್ರಾಹಿಂ ರೋಜಾ
ಸಿ) ಚಾರ್ ಮಿನಾರ
ಡಿ) ದರಿಯಾ ದೌಲತ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 42ರ ಉತ್ತರಗಳು: 561. ಡಿ, 562. ಎ, 563. ಬಿ, 564. ಡಿ, 565. ಸಿ, 566. ಎ, 567. ಸಿ, 568. ಡಿ, 569. ಎ, 570. ಬಿ, 571. ಸಿ, 572. ಬಿ, 573. ಎ



❦ ಸುಭಾಷಿತ ❦

ಒಬ್ಬ ವ್ಯಕ್ತಿಯ ಉದ್ದೇಶ ಏನೆಂದು ಅರಿಯುವವರೆಗೂ ಆತನ ಕಾರ್ಯಗಳ ಬಗ್ಗೆ ಯಾವುದೇ ನಿರ್ಣಯಕ್ಕೆ ಬರಬೇಡಿ. -ವಿಕಾಸ್ ಸ್ವರೂಪ್

ಅಫ್ಗಾನಿಸ್ತಾನದ ಜನರ ರಕ್ಷಣೆಗೆ ಜಾಗತಿಕ ಸಮುದಾಯ ಒಗ್ಗೂಡಲಿ

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಉಗ್ರರು ಮತ್ತೆ ಅಧಿಕಾರ ಕೈವಶ ಮಾಡಿಕೊಂಡಿದ್ದಾರೆ. ರಾಜಧಾನಿ ಕಾಬೂಲನ್ನು ಸುತ್ತ ತಾಲಿಬಾನ್ ಪಡೆಗಳು ಜಮಾಯಿಸಿದ ಸುದ್ದಿ ತಿಳಿದ ಬೆನ್ನಿಗೇ ಅಲ್ಲಿನ ಅಧ್ಯಕ್ಷ ಅಶ್ರಫ್ ಘನಿ ಅವರು ದೇಶದಿಂದ ಪಲಾಯನ ಮಾಡಿದ್ದಾರೆ. ಅಮೆರಿಕ ಸೇನೆಯ ನೆರವಿನಿಂದ ಪ್ರಜಾಸತ್ತಾತ್ಮಕವಾಗಿ ಬೆಳೆಯುವ ಭರವಸೆ ತೋರಿದ್ದ ಅಫ್ಗಾನಿಸ್ತಾನ ಮತ್ತೆ ತಾಲಿಬಾನ್ ಉಗ್ರರ ಕರಾಳ ಆಡಳಿತ ತೆಕ್ಕೆಗೆ ಜಾರಿದೆ. 20 ವರ್ಷಗಳ ನಂತರ ಆ ದೇಶದ ಮಟ್ಟಿಗೆ ಇತಿಹಾಸಚಕ್ರ ಒಂದು ಸುತ್ತು ಬಂದಂತಾಗಿದೆ. ಹಿಂದೆ ತಾಲಿಬಾನ್ ಪಡೆಗಳ 'ಉಗ್ರ ಆಡಳಿತ'ದ ಕಹಿ ಉಂಡಿರುವ ಅಫ್ಗಾನಿಸ್ತಾನದ ಜನ ಸಹಜವಾಗಿಯೇ ಆತಂಕಕ್ಕೆ ಒಳಗಾಗಿದ್ದಾರೆ. ಸಾವಿರಾರು ನಾಗರಿಕರು ದೇಶ ಬಿಟ್ಟು ಹೊರಹೋಗಲು ನಿರ್ಧರಿಸಿ ವಿಮಾನ ನಿಲ್ದಾಣಕ್ಕೆ ನುಗ್ಗಿದಾಗ ಉಂಟಾದ ನೂಕುನುಗ್ಗಲಿನಲ್ಲಿ ಐದು ಮಂದಿ ಮೃತಪಟ್ಟಿರುವ ಸುದ್ದಿಯೂ ಬಂದಿದೆ. ಅಫ್ಗಾನಿಸ್ತಾನದಿಂದ ಅಮೆರಿಕದ ಸೇನೆ ಹಿಂತೆಗೆತ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ತಾಲಿಬಾನ್ ಪಡೆಯು ಕ್ಷಿಪ್ರಗತಿಯಲ್ಲಿ ರಾಜಧಾನಿ ಕಾಬೂಲ್ ಸಹಿತ ದೇಶದ ಬಹುತೇಕ ಪ್ರಾಂತ್ಯಗಳನ್ನು ತನ್ನ ವಶಕ್ಕೆ ಪಡೆದಿರುವುದು ಜಾಗತಿಕ ವಲಯದಲ್ಲಿ ಅಚ್ಚರಿಗೆ ಕಾರಣವಾಗಿದೆ. ಅಲ್ಲಿನ ಸರ್ಕಾರವು ಹೆಚ್ಚಿನ ಪ್ರತಿರೋಧವನ್ನೇ ತೋರದೆ ಶರಣಾಗಿದೆ. ಜಗತ್ತಿನ ಶಕ್ತರಾಷ್ಟ್ರಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಅಮೆರಿಕದ ಮಟ್ಟಿಗೆ ಇದೊಂದು ರಾಜಕೀಯ ಸೋಲು ಎನ್ನದೆ ನಿರ್ವಾಹವಿಲ್ಲ. 20 ವರ್ಷಗಳ ಹಿಂದೆ ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ ಘೋಷಿಸಿದ್ದ ಅಮೆರಿಕಕ್ಕೆ ಈಗಿನ ವಿದ್ಯಮಾನವು ಮುಜುಗರ ಉಂಟುಮಾಡುವಂತಹದು.



ಅಫ್ಗಾನಿಸ್ತಾನ ಸರ್ಕಾರವನ್ನು ಬಂದೂಕಿನ ಬಲದಿಂದ ಪತನಗೊಳಿಸಿ ಅಧಿಕಾರಕ್ಕೆ ಬರುವ ಹೊಸ ಸರ್ಕಾರಕ್ಕೆ ಮಾನ್ಯತೆ ನೀಡುವುದಿಲ್ಲ ಎಂದು ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿರುವ ಪ್ರಮುಖ ದೇಶಗಳು ಹೇಳಿವೆ. ಇದೇ ವೇಳೆ, ತಾಲಿಬಾನಿನ ಹೊಸ ಸರ್ಕಾರಕ್ಕೆ ಪಾಕಿಸ್ತಾನವು ಮಾನ್ಯತೆ ನೀಡುವ ಲಕ್ಷಣಗಳು ಗೋಚರಿಸಿವೆ. ಅಫ್ಗಾನಿಸ್ತಾನವು 'ದಾಸ್ಯದ ಸಂಕೋಲೆಯನ್ನು ಕಳಚಿಕೊಂಡಿದೆ' ಎಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಪ್ರತಿಕ್ರಿಯಿಸಿರುವುದರ ಒಳಮರ್ಮ ಇದನ್ನೇ ಧ್ವನಿಸುತ್ತದೆ. ಚೀನಾ ಸರ್ಕಾರವೂ ಬೆಂಬಲ ಚಾಚುವ ಸಾಧ್ಯತೆಯೂ ಇದೆ ಎಂದು ವಿಶ್ಲೇಷಕರು ಹೇಳಿದ್ದಾರೆ. ಕಠಿಣ ನಿಯಮಗಳ ಇಸ್ಲಾಮಿಕ್ ಆಡಳಿತವನ್ನು ಮತ್ತೆ ಜಾರಿಗೆ ತರುವುದಾಗಿ ತಾಲಿಬಾನ್ ಪಡೆಗಳ ಮುಖ್ಯಸ್ಥರು ಹೇಳಿರುವುದು ಜನರ ಆತಂಕವನ್ನು ಹೆಚ್ಚಿಸಿದೆ. 20 ವರ್ಷಗಳ ಹಿಂದೆ ತಾಲಿಬಾನ್ ಆಡಳಿತದಲ್ಲಿ ರಾಜಕೀಯ ವಿರೋಧಿಗಳನ್ನು ಹಿಂಸಾತ್ಮಕವಾಗಿ ಬಗ್ಗುಬಡಿದ ಮತ್ತು ಪ್ರಜಾಪ್ರಭುತ್ವದ ನಿಯಮಗಳನ್ನು ಕಾಲಕಸದಂತೆ ಕಂಡ ವಿದ್ಯಮಾನಗಳ ನೆನಪು ಈಗಲೂ ಅಲ್ಲಿಯ ಜನರಿಗಿದೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಹಕ್ಕುಗಳನ್ನು ಕಿತ್ತುಕೊಂಡ ತಾಲಿಬಾನ್ ಸರ್ಕಾರ, ಮಧ್ಯಯುಗದ ಕಾನೂನುಗಳನ್ನು ಜನರ ಮೇಲೆ ಹೇರಿತ್ತು. ಟಿ.ವಿ, ಸಂಗೀತ, ಚಿತ್ರಕಲೆ ಮತ್ತು ಫೋಟೊಗ್ರಫಿಯೂ ಅಲ್ಲಿ ನಿಷೇಧಕ್ಕೆ ಒಳಗಾಗಿದ್ದವು. ಈಗ ಮತ್ತೆ ಅಂತಹ ದಮನಕಾರಿ ಆಡಳಿತ ಮರುಕಳಿಸಬಹುದೇ ಎನ್ನುವ ಬಗ್ಗೆ ಇಡೀ ಜಗತ್ತೇ ಚಿಂತಿತವಾಗಿದೆ. 20 ವರ್ಷಗಳ ಕಾಲ ಅಫ್ಗಾನಿಸ್ತಾನವನ್ನು ಪ್ರಜಾಪ್ರಭುತ್ವವಾದಿ ಸಮಾಜವಾಗಿ ರೂಪಿಸಲು ಮತ್ತು ಶಾಂತಿ-ಸಹನೆಯ ಆಡಳಿತವನ್ನು ಅಲ್ಲಿ ನೆಲೆಗೊಳಿಸಲು ದುಡಿದ ದೇಶಗಳಿಗೆ ಈಗಿನ ಬೆಳವಣಿಗೆ ಭ್ರಮನಿರಸನ ತಂದಿದೆ.

> ರಾಜಕೀಯ ಪಲ್ಲಟಗಳೇನೇ ಇರಲಿ, ಹಿಂಸಾತ್ಮಕ ರಾಜಕೀಯ ಪ್ರತೀಕಾರಕ್ಕೆ ಒಳಗಾಗುವ ಅಪಾಯದಿಂದ ಅಫ್ಗಾನಿಸ್ತಾನದ ಜನರನ್ನು ರಕ್ಷಿಸಬೇಕಾದ ಹೊಣೆಗಾರಿಕೆ ಭಾರತ ಸಹಿತ ಜಗತ್ತಿನ ಎಲ್ಲ ಪ್ರಜಾಪ್ರಭುತ್ವವಾದಿ ದೇಶಗಳ ಮೇಲಿದೆ

ಸಮರ್ಥ ಸರ್ಕಾರವೊಂದರ ಸುಳಿವೇ ಇಲ್ಲದಂತೆ, ಯಾವ ಸೈನಿಕ ಪ್ರತಿರೋಧವೂ ಎದುರಾಗದೆ, ದೇಶವೊಂದು ಉಗ್ರಪಡೆಗಳ ಹಿಡಿತಕ್ಕೆ ಸಿಲುಕಿದ ಈ ವಿದ್ಯಮಾನವು ಹಲವು ಪ್ರಶ್ನೆಗಳನ್ನೂ ಹುಟ್ಟುಹಾಕಿದೆ. ಅಮೆರಿಕದ ಬೆಂಬಲವನ್ನು ಹೊಂದಿದ್ದ ಅಫ್ಗಾನಿಸ್ತಾನದ ಸೇನೆಯು ಪ್ರತಿರೋಧವನ್ನೇ ತೋರದಂತೆ ಶರಣಾಗಲು ಕಾರಣವಾದದ್ದು ಏನು? ರಾಜಧಾನಿ ಕಾಬೂಲ್ ನಿರಾಯಾಸವಾಗಿ ತಾಲಿಬಾನ್ ತೆಕ್ಕೆಗೆ ಸೇರಲು ಹೇಗೆ ಸಾಧ್ಯವಾಯಿತು? ಅಫ್ಗಾನಿಸ್ತಾನದಲ್ಲಿ ಅಧಿಕಾರದಲ್ಲಿದ್ದ ಸರ್ಕಾರವೂ ಒಳಗೊಳಗೇ ತಾಲಿಬಾನನ್ನು ಒಪ್ಪಿಕೊಂಡು ಆಡಳಿತ ಕಾಯ್ದುಕೊಂಡು ಬಂದಿರುವ ಸಾಧ್ಯತೆಗಳೂ ಇವೆ ಎಂಬ ಅನುಮಾನ ಮೂಡಿದೆ. ಅಶ್ರಫ್ ಘನಿ ನೇತೃತ್ವದ ಸರ್ಕಾರದಲ್ಲಿ ಭ್ರಷ್ಟಾಚಾರ ವಿಪರೀತವಾಗಿದ್ದು ಅಲ್ಲಿನ ಸೇನೆಯೂ ನೈತಿಕ ಸ್ಥೈರ್ಯ ಕಳೆದುಕೊಂಡಿತ್ತು ಎಂಬ ವರದಿಗಳಿವೆ. ತಾಲಿಬಾನ್ ಪುನಃ ಅಧಿಕಾರ ಪಡೆಯುವಲ್ಲಿ ಪಾಕಿಸ್ತಾನದ ಕೈವಾಡ ಇದೆ ಎಂದೂ ಹೇಳಲಾಗುತ್ತಿದೆ. ರಾಜಕೀಯ ಪಲ್ಲಟಗಳೇನೇ ಇರಲಿ, ಹಿಂಸಾತ್ಮಕ ರಾಜಕೀಯ ಪ್ರತೀಕಾರಕ್ಕೆ ಒಳಗಾಗುವ ಅಪಾಯದಿಂದ ಅಫ್ಗಾನಿಸ್ತಾನದ ಜನರನ್ನು ರಕ್ಷಿಸಬೇಕಾದ ಹೊಣೆಗಾರಿಕೆ ಭಾರತ ಸಹಿತ ಜಗತ್ತಿನ ಎಲ್ಲ ಪ್ರಜಾಪ್ರಭುತ್ವವಾದಿ ದೇಶಗಳ ಮೇಲಿದೆ. ಜನರ ಹಕ್ಕುಗಳನ್ನು ಕಸಿದುಕೊಂಡು ಅಲ್ಲಿ ದಮನಕಾರಿ ಆಡಳಿತ ನಡೆಸದಂತೆ ತಾಲಿಬಾನ್ ಪಡೆಗಳ ಮೇಲೆ ಒತ್ತಡ ಹೇರುವ ಕೆಲಸ ವಿಶ್ವಸಂಸ್ಥೆಯಿಂದಲೂ ಪರಿಣಾಮಕಾರಿಯಾಗಿ ಆಗಬೇಕಿದೆ.

ದಿನದ ಟ್ವೀಟ್




ಮಾನವೀಯವಾಗಿ ಪ್ರತಿಕ್ರಿಯಿಸೋಣ

ಅಫ್ಗಾನಿಸ್ತಾನವನ್ನು ಭಯ ಮತ್ತು ಅನಿಶ್ಚಿತತೆ ಹೇಗೆ ಆವರಿಸಿಕೊಂಡಿವೆ ಎಂಬುದನ್ನು ಆ ದೇಶದಿಂದ ಬರುತ್ತಿರುವ ವರದಿಗಳು ತೋರಿಸುತ್ತಿವೆ. ಇದು, ಭಾರತ ಮತ್ತು ಇಡೀ ಪ್ರದೇಶಕ್ಕೆ ಕಠಿಣವಾದ ಸಂದರ್ಭವಾಗಿದೆ. ನಮ್ಮ ನೆರೆದೇಶದೊಂದಿಗೆ ಸ್ನೇಹ ಮತ್ತು ಶಾಂತಿ ಸ್ಥಾಪಿಸುವ ಸಂಬಂಧ ಸ್ವತಂತ್ರವಾದ ನೀತಿಯೊಂದನ್ನು ರೂಪಿಸುವುದರ ಜೊತೆಗೆ ನಾವು ಮಾನವೀಯವಾದ ರೀತಿಯಲ್ಲಿ ಪ್ರತಿಕ್ರಿಯಿಸಬೇಕಾಗಿದೆ.

ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ

ಕಿಡಿನುಡಿ

ಕೇರಳದಲ್ಲಿ ರಾಹುಲ್ ಗಾಂಧಿ ಅವರ ರಾಜಕೀಯ ಪ್ರವಾಸೋದ್ಯಮ ನಡೆಯುತ್ತಿದೆ. ಅವರು ಅಮೇಠಿಯಲ್ಲಿ ಸೋಲು ಕಂಡು ವಯನಾಡ್‌ಗೆ ಓಡಿ ಹೋದರು. ರಾಜ್ಯ ಬದಲಿಸುವುದರಿಂದ ಯಾರೊಬ್ಬರ ನಡವಳಿಕೆ, ಉದ್ದೇಶಗಳು ಮತ್ತು ಜನರಿಗೆ ಸೇವೆ ಸಲ್ಲಿಸುವ ಸಮರ್ಪಣಾ ಭಾವದಲ್ಲಿ ಬದಲಾವಣೆಗಳಾಗುವುದಿಲ್ಲ.



ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 18-8-1996

● **ದೇಶದ ನದಿಗಳ ಸಂಪರ್ಕ ಯತ್ನ**

ಬೆಂಗಳೂರು, ಆ. 17– ದೇಶದ ಎಲ್ಲ ನದಿಗಳಿಗೆ ಅಂತರ್ ಸಂಪರ್ಕ ಕಲ್ಪಿಸಿ, ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಅದರ ಬಳಕೆಯಾಗುವಂತೆ ಮಾಡಲು ಕೇಂದ್ರ ಯೋಜನೆ ಮತ್ತು ಕಾರ್ಯಕ್ರಮ ಜಾರಿ ಸಚಿವ ಡಾ. ವೈ.ಕೆ. ಅಲಘ್ ಅವರ ನೇತೃತ್ವದಲ್ಲಿ ತಜ್ಞ ಎಂಜಿನಿಯರ್‌ಗಳನ್ನು ಒಳಗೊಂಡ ಸಮಿತಿಯೊಂದನ್ನು ಕೇಂದ್ರ ಸರ್ಕಾರ ಶೀಘ್ರವೇ ರಚಿಸಲಿದೆ ಎಂದು ಪ್ರಧಾನ ಮಂತ್ರಿ ಎಚ್.ಡಿ. ದೇವೇಗೌಡ ಇಂದು ಇಲ್ಲಿ ಪ್ರಕಟಿಸಿದರು.

ಘನೀಕೃತ ನೀರಿನ ಪರ್ವತವೇ ಆಗಿರುವ ಹಿಮಾಲಯದ ಹಿನ್ನೆಲೆಯಿದ್ದರೂ ದೇಶ ಪ್ರತಿವರ್ಷ ಅತಿವೃಷ್ಟಿ ಇಲ್ಲವೇ ಅನಾವೃಷ್ಟಿಯಿಂದ ಬಳಲುತ್ತಿದೆ. ಪ್ರಾದೇಶಿಕವಾದ ಸಂಕುಚಿತ ಭಾವನೆಯಿಂದ ನಾವು ಸಮಸ್ಯೆಯನ್ನು ರಾಜಕೀಕರಣಗೊಳಿಸುತ್ತಿದ್ದೇವೆ. ಸಮಸ್ಯೆಯನ್ನು ಪರಿಹರಿಸುವ ಸಾಹಸಕ್ಕೆ ಕೈ ಹಾಕಲು ನಿಮ್ಮಿಂದ ಸಾಧ್ಯವಾಗುತ್ತಿಲ್ಲ. ಮುಂದುವರಿದ ರಾಷ್ಟ್ರಗಳಲ್ಲಿ ನೀರನ್ನು ರಾಷ್ಟ್ರೀಯ ಆಸ್ತಿ ಎಂದು ಪರಿಗಣಿಸುತ್ತಾರೆ. ಆದರೆ ಚಿನ್ನಕ್ಕಿಂತ ಅಮೂಲ್ಯವಾದ ಈ ಪ್ರಾಕೃತಿಕ ಸಂಪನ್ಮೂಲಗಳನ್ನು ನಾವು ಆ ಅರ್ಥದಲ್ಲಿ ಭಾವಿಸುತ್ತಿಲ್ಲ ಎಂದು ಅವರು ವಿಷಾದಿಸಿದರು.

50 ವರ್ಷಗಳ ಹಿಂದೆ

ಬುಧವಾರ, 18-8-1971

● **ತೀವ್ರಗೊಳ್ಳುತ್ತಿರುವ ಅಭಾವ ಪರಿಸ್ಥಿತಿ: ಕೇಂದ್ರ ತಜ್ಞರ ತಂಡ ಇನ್ನೂ ರಾಜ್ಯಕ್ಕೆ ಭೇಟಿ ಕೊಡದಿರುವ ಬಗ್ಗೆ ಆತಂಕ**

ಬೆಂಗಳೂರು, ಆ. 17– ಎರಡು ವಾರಗಳ ಹಿಂದೆ, ಅಭಾವಪೀಡಿತ ತಾಲ್ಲೂಕುಗಳ ಸಂಖ್ಯೆ ಸುಮಾರು 60 ಇದ್ದಿದ್ದು, ಇದೀಗ ಆ ಸಂಖ್ಯೆ 106ಕ್ಕೇರಿದೆಯಾದರೂ ಕೇಂದ್ರದಿಂದ ನೆರವು ಶಿಫಾರಸು ಮಾಡಲಿರುವ ತಜ್ಞರ ತಂಡ, ಮೈಸೂರಿಗೆ ಭೇಟಿ ಕೊಡುವ ಸೂಚನೆಗಳು ಇನ್ನೂ ಕಂಡುಬರುತ್ತಿಲ್ಲ.

ಬಿಜಾಪುರ, ಬಿದರೆ, ಗುಲ್ಬರ್ಗ, ರಾಯಚೂರುಗಳಂಥ ಜಿಲ್ಲೆಗಳ ಹೆಚ್ಚಿನ ತಾಲ್ಲೂಕುಗಳಲ್ಲಿ ಹೆಚ್ಚು ಕಡಿಮೆ ಕ್ಷಾಮ ಪರಿಸ್ಥಿತಿಯೇ ತೀವ್ರ ಕಳವಳಕ್ಕೆಡೆಯಾಗಿದೆ.

ಪರಿಸ್ಥಿತಿ ತೀವ್ರವಾಗಿರುವ ಕಡೆಗಳಲ್ಲಿ ದಿವಸಕ್ಕೆ ಎರಡು ಲಕ್ಷ ಜನರಿಗೆ ನಿರಂತರವಾಗಿ ನೂರು ದಿನಗಳಿಗೆ ಉದ್ಯೋಗ ಕೊಡುವ ಆರೇಳು ಕೋಟಿ ರೂಪಾಯಿಗಳ ಕಾಮಗಾರಿಗಳು ಮಂಜೂರಾಗಿ, ಆರಂಭವಾಗಿವೆಯಾದರೂ, ಅದು ಸಮಸ್ಯೆಗೆ ಸಾಕಷ್ಟು ಪರಿಹಾರ ನೀಡುವಂತಿಲ್ಲ.

ಈ ಘಟ್ಟದಲ್ಲಿ ಕೇಂದ್ರದಿಂದ ತಕ್ಷಣ ನೆರವು ಅಗತ್ಯ. ಅದನ್ನು ಮನಗಂಡೇ ಈ ತಿಂಗಳ ಆದಿ ಭಾಗದಲ್ಲೇ ರಾಜ್ಯಪಾಲರು ದೆಹಲಿಗೆ ಈ ಬಗ್ಗೆ ತುರ್ತು ಸಂದೇಶ ಕಳುಹಿಸಿ, ತಜ್ಞರ ತಂಡವನ್ನು ಕೂಡಲೇ ಕಳುಹಿಸಿ ಕೊಡುವಂತೆ ಕೇಳಿಕೊಂಡರು. ಆದರೆ, ತಂಡದ ಆಗಮನದ ಬಗ್ಗೆ ಕೇಂದ್ರದಿಂದ ನಿರ್ದಿಷ್ಟ ಸೂಚನೆ ಇನ್ನೂ ಬಂದಿಲ್ಲ ಎಂದು ಅಧಿಕೃತ ವಕ್ತಾರರೊಬ್ಬರು ತಿಳಿಸಿದರು.

ಶಿಕ್ಷಣದಲ್ಲಿನ ಅಸಮಾನತೆಯ ಸಮಸ್ಯೆಯನ್ನು ಈ ದೇಶ ವಿಶಿಷ್ಟವಾಗಿ ನಿಭಾಯಿಸಲು ಶುರುಮಾಡಿದೆ

ಚೀನಾದಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಅಂಕುಶವೇಕೆ?



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಈ ಬಾರಿಯ 'ಗುರುಪೂರ್ಣಿಮೆ'ಯ ದಿನ ವಾಟ್ಸ್ ಆ್ಯಪ್‌ನಲ್ಲಿ ಒಂದು ಮರಾಠಿ ಕವನ ವೈರಲ್ ಆಯಿತು. ಅದು ಒಬ್ಬಳು ಹಳ್ಳಿಯ ಹುಡುಗಿಯ ನೋವಿನ ಅಭಿವ್ಯಕ್ತಿ. ಲಾಕ್‌ಡೌನ್ ಹೊತ್ತಿನಲ್ಲಿ ಶಾಲೆಗಳೆಲ್ಲ ಮುಚ್ಚಿದ್ದರಿಂದ ಕೋಟ್ಯಂತರ ವಿದ್ಯಾರ್ಥಿಗಳು ಅನುಭವಿಸಿದ ಬವಣೆಯೇ ಅವಳದು ಕೂಡ. ಆದರೆ ಬಡತನದಿಂದಾದ ಅವಳ ವೇದನೆ ಹೆಚ್ಚಿನದು. ಅವಳು ತನ್ನ ಮೆಚ್ಚಿನ ಶಿಕ್ಷಕಿಗೆ ಹೇಳುತ್ತಾಳೆ– 'ನಾನು ಇಂದು ನಿಮ್ಮನ್ನು ಭೇಟಿಯಾಗಿ ನಮಸ್ಕರಿಸಲು ಬರಲಾರೆ, ಕ್ಷಮಿಸಬೇಕು. ಕೊರೊನಾದಿಂದಾಗಿ ನನ್ನ ಅಪ್ಪ ತೀರಿಕೊಂಡರು. ಕುಟುಂಬದ ಹೊಟ್ಟೆಪಾಡಿಗಾಗಿ ನಾನೀಗ ಹಳ್ಳಿ ಬಿಟ್ಟು ಕೆಲಸ ಹುಡುಕುತ್ತ ಪಟ್ಟಣಕ್ಕೆ ಬಂದಿದ್ದೇನೆ. ಶಿಕ್ಷಣ ನಿಂತು ಹೋಗಿದೆ. ಫೋನ್ ಕೂಡ ಇಲ್ಲದ ನನಗೆ ಆನ್‌ಲೈನ್ ಶಿಕ್ಷಣ ನಿಲುಕದು. ಆದರೆ ಒಂದು ದಿನ ನಿಮ್ಮ ಕ್ಲಾಸಿನಲ್ಲಿ ಮತ್ತೊಮ್ಮೆ ಕೂಡುವ ಹಂಬಲವಿದೆ'. ಈ ಕವನ ಓದಿ ನನಗೆ ಕಣ್ಣೀರು ಬಂತು.

ನಾನು ಲಾಕ್‌ಡೌನ್ ಸಂದರ್ಭದಲ್ಲಿ, ಬೈಜು ಕಂಪನಿಯು ಶಾರೂಖ್ ಖಾನ್ ಅವರನ್ನು ನೇಮಿಸಿಕೊಂಡು ಸಿದ್ಧಪಡಿಸಿದ್ದ ಜಾಹೀರಾತನ್ನು ನೆನಪಿಸಿಕೊಂಡೆ. ಈ ಜಾಹೀರಾತಿಗಾಗಿ ಆನ್‌ಲೈನ್ ಶಿಕ್ಷಣ ಕಂಪನಿಯು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದ್ದಿರಬಹುದು. 'ಬೈಜು ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ನಿಮ್ಮ ಬೆಳವಣಿಗೆ ಖಚಿತ' ಎಂದು ಶಾರೂಖ್ ಇದರಲ್ಲಿ ಹೇಳುತ್ತಾರೆ. ಈ ಕಂಪನಿಯನ್ನು ಹತ್ತು ವರ್ಷಗಳ ಹಿಂದೆ ಬೈಜು ರವೀಂದ್ರನ್ ಸ್ಥಾಪಿಸಿದರು. ಇದರ ಮಾರುಕಟ್ಟೆ ಮೌಲ್ಯ ಈಗ ₹ 1.22 ಲಕ್ಷ ಕೋಟಿಯನ್ನು ದಾಟಿದೆ (ಇದು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಶಾಲಾ ಶಿಕ್ಷಣಕ್ಕಾಗಿ ನಿಗದಿ ಮಾಡಿರುವ ವಾರ್ಷಿಕ ಮೊತ್ತ ₹ 54,873 ಕೋಟಿಗಿಂತ ಹೆಚ್ಚು). ರವೀಂದ್ರನ್ ಅವರ ವೈಯಕ್ತಿಕ ಸಂಪತ್ತಿನ ಮೌಲ್ಯ ₹ 18 ಸಾವಿರ ಕೋಟಿಗೆ ತಲುಪಿದೆ. ಬೈಜು ಈಗ 40 ಸಾವಿರ ಚಂದಾದಾರರನ್ನು ಹೊಂದಿದೆ. ಭಾರಿ ಪ್ರಮಾಣದ ಜಾಹೀರಾತು, ಶ್ರೀಮಂತರು ಮತ್ತು ಮೇಲ್ಮಧ್ಯಮ ವರ್ಗದವರು ಮಾತ್ರ ಭರಿಸಬಹುದಾದ ಶುಲ್ಕ ಪಡೆಯುವ ಮೂಲಕ ಇವೆಲ್ಲ ಸಾಧ್ಯವಾಗಿವೆ. ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಹಲವು ಕಂಪನಿಗಳು ಹುಟ್ಟಿಕೊಂಡಿವೆ.

ಇವನ್ನೆಲ್ಲ ದೇಶದ ಮುಖ್ಯವಾಹಿನಿಯ ಮಾಧ್ಯಮಗಳು 'ಭಾರತದ ನವೋದ್ಯಮಗಳ, ಯುವ ಕೋಟ್ಯಧಿಪತಿಗಳ ಯಶೋಗಾಥೆ' ಎಂದು ಹೊಗಳುತ್ತಿವೆ.

'ನಮ್ಮ ಮಕ್ಕಳಿಗೆ ಅತ್ಯುತ್ತಮ ಕಲಿಕಾ ಮಾರ್ಗವನ್ನು ತೋರುತ್ತಿರುವ ಬೈಜು ಮತ್ತು ಅದರಂತಹ ಇತರ ಕಂಪನಿಗಳ ಬಗ್ಗೆ ನಿಮಗೇಕೆ ತಕರಾರು' ಎಂದು ಕೆಲವರು ಖಂಡಿತ ಪ್ರಶ್ನಿಸುತ್ತಾರೆ. ಇದು ಒಳ್ಳೆಯ ಪ್ರಶ್ನೆಯೇ. ಭಾರತದ ವಿದ್ಯಾರ್ಥಿಗಳಿಗೆ ಡಿಜಿಟಲ್ ಮಾಧ್ಯಮದ ಮೂಲಕ ಉನ್ನತ ಗುಣಮಟ್ಟದ ಶಿಕ್ಷಣ ಸಿಗುವುದನ್ನು ಸ್ವಾಗತಿಸಬೇಕು. ಆದರೆ ಬೇಸರದ ಸಂಗತಿ ಇದು: ಇಂತಹ ಪ್ರಶ್ನೆಗಳನ್ನು ಕೇಳುತ್ತಿರುವವರಿಗೆ ಎರಡು ಬಗೆಯ ವಿದ್ಯಾರ್ಥಿ ಸಮೂಹಗಳ ಬಗ್ಗೆ ಗೊತ್ತಿಲ್ಲ ಅಥವಾ ಅಂಥವರ ಬಗ್ಗೆ ಅವರಿಗೆ ಕಾಳಜಿ ಇಲ್ಲ. ನಗರ ಪ್ರದೇಶಗಳ ಕೊಳೆಗೇರಿಗಳಲ್ಲಿ ವಾಸಿಸುವ, ಒಂದು ಸ್ಮಾರ್ಟ್‌ಫೋನ್ ಕೂಡ ಇಲ್ಲದ ಮಕ್ಕಳದ್ದು ಒಂದು ಗುಂಪು. ಝುಗಮಗಿಸುವ ಕಲಿಕಾ ಆ್ಯಪ್‌ಗಳ ಶುಲ್ಕವನ್ನು ಎಂದಿಗೂ ಭರಿಸಲಾಗದ ಮಧ್ಯಮ ಹಾಗೂ ಕೆಳಮಧ್ಯಮ ವರ್ಗಗಳ ಮಕ್ಕಳದ್ದು ಇನ್ನೊಂದು ಗುಂಪು. ಈ ಕಲಿಕಾ ಆ್ಯಪ್‌ಗಳಲ್ಲಿ ಬೋಧನೆಯ ಮಾಧ್ಯಮವು ಇಂಗ್ಲಿಷ್. ಕನ್ನಡ ಮತ್ತು ಭಾರತದ ಇತರ ಭಾಷೆಗಳಲ್ಲಿ ಶಿಕ್ಷಣ ನೀಡುವ ವಿಚಾರದಲ್ಲಿ ಬೇರೂರಿರುವ ತಾರತಮ್ಯವು, ಆನ್‌ಲೈನ್ ಜಗತ್ತಿನಲ್ಲಿ ಇನ್ನಷ್ಟು ಶಕ್ತಿಯುತವಾಗಿದೆ. ಲಾಕ್‌ಡೌನ್ ಅವಧಿಯಲ್ಲಿ ಡಿಜಿಟಲ್ ತಾರತಮ್ಯವನ್ನು ನಾವೆಲ್ಲ ನೋಡಿದ್ದೇವಲ್ಲವೇ? ಶಾಲೆಗಳು ಮುಚ್ಚಿವೆ, ಬಡ ಹಾಗೂ ಮಧ್ಯಮ ವರ್ಗಗಳ ಕೋಟ್ಯಂತರ ವಿದ್ಯಾರ್ಥಿಗಳು ಹಿಂದಕ್ಕೆ ಹೋಗಿದ್ದಾರೆ, ಶ್ರೀಮಂತ ವರ್ಗಗಳ ಮಕ್ಕಳು ಪ್ರಗತಿ ಸಾಧಿಸಿದ್ದಾರೆ. ನಾವು ಬಯಸುವುದು ಈ ಬಗೆಯ ಭಾರತವನ್ನೇ?


ಶಿಕ್ಷಣದಲ್ಲಿನ ಅಸಮಾನತೆಯು ಸಾಮಾಜಿಕ–ಆರ್ಥಿಕ ತರತಮವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಈ ಮಾತು ವಿಶ್ವದ ಅತ್ಯಂತ ಸಂಪದ್ಭರಿತ ದೇಶವಾದ ಅಮೆರಿಕದಲ್ಲೂ ಸತ್ಯ, ಅತ್ಯಂತ ಶ್ರೀಮಂತ ರಾಷ್ಟ್ರವಾಗುವ ಸ್ಪರ್ಧೆಯಲ್ಲಿರುವ ಚೀನಾದಲ್ಲೂ ಸತ್ಯ. ಆದರೆ, ಈ ಸಮಸ್ಯೆಯನ್ನು ವಿಶಿಷ್ಟವಾಗಿ ನಿಭಾಯಿಸಲು ಚೀನಾ ಶುರುಮಾಡಿದೆ. ಆನ್‌ಲೈನ್ ಮೂಲಕ ಶಿಕ್ಷಣ ನೀಡುವ ಕಂಪನಿಗಳು, 'ಲಾಭದ ಉದ್ದೇಶವಿಲ್ಲದ ಕಂಪನಿಗಳಾಗಿ' ಬದಲಾಗಲು ಒತ್ತಡ ತರುವಂತಹ ನಿಯಮಾವಳಿಯನ್ನು ಚೀನಾ ಸರ್ಕಾರ ಈಚೆಗೆ ಹೊರಡಿಸಿದೆ. ಇಂತಹ ಕಂಪನಿಗಳು ಚೀನಾದಲ್ಲಿ, ಭಾರತದಲ್ಲಿ ಇರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಇವೆ ಎಂಬುದನ್ನು ಗಮನಿಸಬೇಕು. ಈ ನಿಯಮಾವಳಿ ರೂಪಿಸಿರುವ ಸುದ್ದಿ ಬಹಿರಂಗವಾದ ತಕ್ಷಣ ಈ ಕಂಪನಿಗಳ ಷೇರು ಬೆಲೆ ಕುಸಿಯಿತು.

ಬೆಳೆಯುತ್ತಿರುವ ಖಾಸಗಿ ಶಿಕ್ಷಣ ಉದ್ಯಮದ ಮೇಲೆ ಚೀನಾ ಈ ಕಠಿಣ ಕ್ರಮ ಜರುಗಿಸಿದ್ದು ಏಕೆ? ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮಾಡಿದ ಎರಡು ಪ್ರಮುಖ ಭಾಷಣಗಳಲ್ಲಿ ಈ ಪ್ರಶ್ನೆಗೆ ಉತ್ತರವಿದೆ. 'ಚೀನಿ ಗುಣವಿರುವ ಸಮಾಜವಾದಿ ಶಿಕ್ಷಣ'ವನ್ನು ಬೆಳೆಸುವ ಬಗ್ಗೆ 2018ರಲ್ಲಿ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾಡಿದ ಭಾಷಣ ಹಾಗೂ ದೇಶದ ಅತ್ಯುನ್ನತ ಶಾಸನ ಸಭೆಯಲ್ಲಿ ಈ ವರ್ಷದ ಮಾರ್ಚ್‌ನಲ್ಲಿ ಮಾಡಿದ ಭಾಷಣ ಉತ್ತರ ನೀಡುತ್ತವೆ. ಭಾರಿ ಶುಲ್ಕ ಪಡೆಯುವ ಟ್ಯೂಷನ್ ವಲಯವನ್ನು ಜಿನ್‌ಪಿಂಗ್ ಅವರು ದೀರ್ಘಕಾಲೀನ ಕಾಯಿಲೆ ಎಂದು ಟೀಕಿಸಿದ್ದರು. ಕಾಯಿಲೆಯನ್ನು ಗುಣಪಡಿಸಬೇಕು ಎಂದಿದ್ದರು. ಒಳ್ಳೆಯ ಉದ್ಯೋಗಕ್ಕೆ ಇರುವ ಕಠಿಣ ಸ್ಪರ್ಧೆಯ ಕಾರಣದಿಂದಾಗಿ ಚೀನಾದ ಪಾಲಕರು ತಮ್ಮ ಮಕ್ಕಳನ್ನು ಶಾಲೆಯ ಅವಧಿಯ ನಂತರದ ಟ್ಯೂಷನ್‌ಗಳಿಗೆ ಸೇರಿಸಲು ಬಯಸುತ್ತಿದ್ದಾರೆ. ಇವುಗಳಿಗೆ ಕೊಡಬೇಕಿರುವ ಶುಲ್ಕವು ಕೆಲವು ಸಂದರ್ಭಗಳಲ್ಲಿ ಇಡೀ ಕುಟುಂಬದ ವಾರ್ಷಿಕ ಖರ್ಚುಗಳ ಶೇಕಡ 30ರಷ್ಟು ಆಗುತ್ತಿದೆ! ಇದು ಚೀನಿ ಸಮಾಜದಲ್ಲಿನ ಅಸಮಾನತೆಯನ್ನು ತೀವ್ರವಾಗಿ ಹೆಚ್ಚಿಸುತ್ತಿದೆ.

ಎಲ್ಲ ಶಾಲೆಗಳಲ್ಲಿಯೂ ಸುಧಾರಿತ ಸೌಲಭ್ಯಗಳು ಇರುವ ಶಿಕ್ಷಣ ವ್ಯವಸ್ಥೆ ಬೇಕು ಎಂದು ಜಿನ್‌ಪಿಂಗ್ ಹೇಳಿದ್ದರು. ಅಂತಹ ವ್ಯವಸ್ಥೆ ಇದ್ದಾಗ, ಮಕ್ಕಳು ಜ್ಞಾನ ಅರಸುತ್ತ, ಜವಾಬ್ದಾರಿಯ ಮನೋಭಾವವನ್ನು ಬೆಳೆಸಿಕೊಳ್ಳುತ್ತ, ಸೃಜನಶೀಲ ಆಲೋಚನೆಗಳನ್ನು ಹೆಚ್ಚಿಸಿಕೊಳ್ಳುತ್ತ, ಶಾಲೆಯಲ್ಲಿ ತಾವು ಕಳೆಯುವ ಸಮಯವನ್ನು ಬಹಳ ಅಮೂಲ್ಯವಾಗಿಸಿಕೊಳ್ಳಬಹುದು. ಅಲ್ಲದೆ, ಶಾಲೆಯ ನಂತರದ ಅವಧಿಯನ್ನು ಕ್ರೀಡೆಗಳು, ಸೌಂದರ್ಯ ಪ್ರಜ್ಞೆ, ಕಠಿಣ ಪರಿಶ್ರಮದ ಮನೋಭಾವದ ಬಗ್ಗೆ ಪ್ರೀತಿ ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳಬಹುದು ಎಂದೂ ಅವರು ಹೇಳಿದ್ದರು. 'ಮಕ್ಕಳ ಬಾಲ್ಯ ಸಂತಸಮಯವಾಗಿ ಇರಲಿ ಎಂದು ಪಾಲಕರು ಬಯಸುತ್ತಾರೆ. ಆದರೆ, ಅಂಕಗಳ ಸ್ಪರ್ಧೆಯಲ್ಲಿ ತಮ್ಮ ಮಕ್ಕಳು ಆರಂಭದಲ್ಲಿಯೇ ಸೋತುಬಿಡುತ್ತಾರೆ ಎಂಬ ಭಯ ಕೂಡ ಅವರಲ್ಲಿದೆ. ಇದನ್ನು ಪರಿಹರಿಸಬೇಕು' ಎಂದು ಜಿನ್‌ಪಿಂಗ್ ಹೇಳಿದ್ದರು.

ಬಂಡವಾಳದ ಅಸ್ತವ್ಯಸ್ತ ವಿಸ್ತರಣೆಯನ್ನು ವಿರೋಧಿಸಿ ಅವರು ಮಾತನಾಡಿದ್ದಾರೆ. ಅಂದರೆ, ರಾಷ್ಟ್ರದ ಆರ್ಥಿಕ ಸಂಪನ್ಮೂಲವು ಜನಸಾಮಾನ್ಯರ ಅಗತ್ಯಗಳನ್ನು ಈಡೇರಿಸುವ ರೀತಿಯಲ್ಲಿ ಬಳಕೆಯಾಗಬೇಕು. ಶಿಕ್ಷಣವು ಲಾಭದ ಉದ್ದೇಶದ ಉದ್ದಿಮೆಯಾಗಬಾರದು. 'ಸರಸ್ವತಿ'ಯ ಒಲಿಯುವಿಕೆಯು 'ಲಕ್ಷ್ಮಿ'ಯನ್ನು ಆಧರಿಸಿ ಇರಬಾರದು. ಚೀನಾದಲ್ಲಿನ ಹೊಸ ನಿಯಮಗಳ ಅನ್ವಯ, ಮಕ್ಕಳಿಗೆ ಮನೆಗೆಲಸದ ಹೊರೆಯನ್ನು ತಗ್ಗಿಸಬೇಕು, ಶಾಲಾ ಅವಧಿಯಲ್ಲಿನ ಶಿಕ್ಷಣದ ಗುಣಮಟ್ಟ ಹೆಚ್ಚಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಆನ್‌ಲೈನ್ ಮೂಲಕ ಸಿಗುವ ಉಚಿತ ಕಲಿಕಾ ಸೇವೆಗಳನ್ನು ಹೆಚ್ಚಿಸಲು ಸರ್ಕಾರ ತೀರ್ಮಾನಿಸಿದೆ. ಇಂತಹ ಉದ್ದಿಮೆಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ಸರ್ಕಾರ ನಿರ್ಬಂಧಿಸಲಿದೆ.

ಇವನ್ನೆಲ್ಲ ಓದಿದ ನಂತರ ನನ್ನ ಮನಸ್ಸು ಮರಾಠಿಯಲ್ಲಿರುವ ಆ ವಾಟ್ಸ್‌ಆ್ಯಪ್ ಕವನದ ಕಡೆ ಹೊರಳಿತು. ನಮ್ಮ ರಾಜಕಾರಣಿಗಳು ಮತ್ತು ನೀತಿ ನಿರೂಪಕರಿಗೆ ಆ ಹಳ್ಳಿ ಹುಡುಗಿಯ ಆಕ್ರೋಶಕ್ಕೆ ಕಿವಿಗೊಡುವ ಮನಸ್ಸಿದೆಯೇ? 'ಆನ್‌ಲೈನ್ ಶಿಕ್ಷಣ ನನಗೆ ನಿಲುಕುತ್ತಿಲ್ಲ; ಅದನ್ನು ನಾನು ಭರಿಸುವುದು ಹೇಗೆ?'. ರಾಜಕಾರಣಿಗಳು, ನೀತಿ ನಿರೂಪಕರಿಗೆ ಮುಂದಡಿ ಇರಿಸುವ ಬದ್ಧತೆ ಇದೆಯೇ?



ಚುರುಮುರಿ



ಬಿಪ್ ಬೈಗುಳ

● ಮಣ್ಣೆರಾಜು

ನ್ಯೂಸ್ ಚಾನೆಲ್‌ನವರು ನಾಯಕರನ್ನು ಮುತ್ತಿಕೊಂಡರು. 'ಸಾರ್, ಆ ಪಕ್ಷದವರು ನಿಮ್ಮನ್ನು ಬಿಪ್ ಬಿಪ್ ಎಂದು ಬೈದಿದ್ದಾರೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?' ಕೇಳಿದರು.

'ಆ ಪಕ್ಷದ ಬಿಪ್... ಬಿಪ್ ಮಕ್ಕಳಿಗೆ ಮಾಡಲು ಕೆಲ್ಸ ಇಲ್ಲ, ಅವರು ಸಂಸ್ಕೃತಿ- ಸಂಸ್ಕಾರವಿಲ್ಲದ ಅಯೋಗ್ಯರು...' ನಾಯಕರು ಉರಿದುಬಿದ್ದರು.

'ಮೊನ್ನೆ ನೀವು ಅವರಿಗೆ ಹತ್ತಾರು ಬಿಪ್ ಬೈಗುಳ ಬೈದಿರಲ್ಲಾ ಸಾರ್'.

'ಬಿಡ್ತೀನಾ, ಬದುಕಿರುವವರನ್ನು ಬೇಕಾದ್ರೆ ಬೈಯಲಿ, ಸತ್ತಿರುವ ನಮ್ಮ ಪಕ್ಷದ ನಾಯಕರನ್ನು ಬೈದು ಮರಣೋತ್ತರ ಮಾನಹಾನಿ ಮಾಡಿದರೆ ಸುಮ್ಮನಿರಬೇಕೇನ್ರೀ? ಅವರ ಪಕ್ಷದ ಸತ್ತ ನಾಯಕರನ್ನು ಸಮಾಧಿಯಿಂದ ಎಳೆದು ಬೀದಿಗೆ ತರ್ತೀವಿ...'

'ನೀವು ಬೈಗುಳ ಪರಾಕ್ರಮಿ ಸಾರ್, ನಿಮ್ಮ ಕರ್ಣಕಠೋರ ಬಿಪ್ ಬೈಗುಳಗಳಿಗೆ ಎದುರಾಳಿಗಳು ದಂಗಾಗಿಬಿಡ್ತಾರೆ'.

'ಪಕ್ಷ ನನಗೆ ತಾಯಿ ಇದ್ದಂತೆ. ತಾಯಿ ತಂಟೆಗೆ ಬಂದರೆ ಸುಮ್ನೆ ಬಿಡೋಲ್ಲ' ನಾಯಕರು ಗುಡುಗಿದರು.

'ಸಾರ್ವಜನಿಕವಾಗಿ ಬಿಪ್ ಬೈಗುಳ ಬಳಸಿದರೆ ನಿಮ್ಮ ವ್ಯಕ್ತಿತ್ವಕ್ಕೆ, ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗೋದಿಲ್ವೇ ಸಾರ್?'

'ಶತ್ರುಗಳನ್ನು ಸದೆಬಡಿಯಲು ನಮ್ಮ ಹತ್ರ ಕತ್ತಿ-ಗುರಾಣಿ ಇಲ್ಲ. ನಮಗೆ ನಾಲಿಗೆಯೇ ಅಸ್ತ್ರ...'

'ಆದರೂ ಹಿತಕರವಾಗಿ ಬೈಯುವುದನ್ನು ಅಭ್ಯಾಸ ಮಾಡಿಕೊಳ್ಳಿ ಸಾರ್, ಬೈಗುಳಗಳನ್ನು ಟಿ.ವಿಯಲ್ಲಿ ನೇರ ಪ್ರಸಾರ ಮಾಡಲಾಗದೆ, ಬಿಪ್ ಸೌಂಡ್ ಬಳಸಬೇಕಾಗುತ್ತದೆ'.

'ಸೋಶಿಯಲ್ ಮೀಡಿಯಾಗಳಲ್ಲಿ ಬಿಪ್ ಇಲ್ಲದೆ ನಮ್ಮ ಬೈಗುಳ ಪ್ರಸಾರವಾಗುತ್ತದಲ್ಲ, ಕುತೂಹಲವಿದ್ದವರು ಅಲ್ಲಿ ನೋಡಿಕೊಳ್ತಾರೆ ಬಿಡ್ರೀ...'

'ಆದ್ರೆ ಬೈಗುಳದ ಪೂರ್ಣ ಕ್ರೆಡಿಟ್ ನಮಗೆ ಸಿಗೋಲ್ಲವಲ್ಲ ಸಾರ್...'

'ನಾವು ಬೈದಾಡೋದು ನಿಮಗೆ ಕ್ರೆಡಿಟ್ ಏನ್ರೀ? ನಾವು ಬೈದದ್ದನ್ನು ಅವರಿಗೆ ಹೇಳಿ ಅವರಿಂದ ನಮ್ಮನ್ನು ಬೈಸ್ತೀರಿ, ಅವರು ಬೈದ್ರು ಅಂತ ನಮ್ಮ ಹತ್ರ ಬಂದು ನಮ್ಮಿಂದ ಅವರನ್ನು ಬೈಸ್ತೀರಿ. ನಿಮ್ಮದು ಇದೇ ಆಗೋಯ್ತಲ್ರೀ...' ರೇಗಿದ ನಾಯಕರು ಕಾರು ಹತ್ತಿ ಹೊರಟರು.

ಸಂಗತ

ಆಟದಿಂದ ಕಲಿಯೋಣ ಪಾಠ

ಆಟದಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳು ಕೊನೆಗೆ ಜೀವನದ ಸವಾಲುಗಳಿಗೂ ಅನ್ವಯಿಸುತ್ತವೆ ಎನ್ನುವುದೇ ಸ್ವಾರಸ್ಯ!

● ಡಾ. ಕೆ.ಎಸ್.ಪವಿತ್ರ

ಮಕ್ಕಳನ್ನು 'ಚಾಂಪಿಯನ್' ಆಗಿಸಬೇಕೆಂದರೆ, ಮನೋವಿಜ್ಞಾನದ ಪ್ರಕಾರ ಅಪ್ಪ-ಅಮ್ಮ ಕೇಳಬೇಕಾದುದು 'ನೀನೇನು ಕಲಿತೆ?' 'ನಿನ್ನ ಟೀಂ ಮೇಟ್‌ಗೆ ಸಹಾಯ ಮಾಡಿದೆಯಾ?' 'ತುಂಬಾ ಶ್ರಮಪಡುವುದರಲ್ಲಿಯೂ ಸಂತೋಷ ಸಿಗಲು ಸಾಧ್ಯವೇ ಎಂಬುದನ್ನು ಗಮನಿಸಿದೆಯಾ?' ಎಂಬಂಥ ಪ್ರಶ್ನೆಗಳನ್ನು.

ಮೊನ್ನೆಯಷ್ಟೇ ಒಲಿಂಪಿಕ್ಸ್ ಮುಗಿದಿದೆ. ಆಟದಿಂದ ಜೀವನಪಾಠ ಕಲಿಯುವುದು ಪದಕ ಗೆದ್ದಷ್ಟೇ ಮುಖ್ಯ. ಕೈಲಾ ರಾಸ್ ಎಂಬ ಪ್ರಸಿದ್ಧ ಒಲಿಂಪಿಕ್ ಜಿಮ್ನಾಸ್ಟ್‌ಳ ಕೋಚ್ 'ಉಕ್ಲಾ ಜಿಮ್ನಾಸ್ಟಿಕ್ಸ್ ತಂಡ'ದ ವೆಲೋರಿ ಕೊಂಡಾ ಅವರ ಅನುಭವವನ್ನು ನೋಡಿದರೆ, ಕ್ರೀಡಾಪಟುಗಳ ಮಾತನ್ನು ಒಬ್ಬ ಕೋಚ್ 'ಆಲಿಸುವುದು' ಎಷ್ಟು ಅಗತ್ಯ ಎಂಬುದರ ಅರಿವಾಗುತ್ತದೆ. ತನ್ನ ಮೇಲಿನ ದೌರ್ಜನ್ಯವನ್ನು ಕೈಲಾ ಹಂಚಿಕೊಂಡ ಬಗೆಯನ್ನು ವೆಲೋರಿ ಹೀಗೆ ಹೇಳುತ್ತಾರೆ– 'ಕೈಲಾ ಇದ್ದಕ್ಕಿದ್ದ ಹಾಗೆ ಒಮ್ಮೆ ನನ್ನ ಕೊಠಡಿಗೆ ಬಂದು ಮಾತನಾಡತೊಡಗಿದಳು. ಮೊದಲು ತನ್ನ ಶಾಲೆ-ಕಾಲೇಜು, ಮನಸ್ಸಿಗೆ ಏನೆಲ್ಲಾ ಬಂತೋ ಅದೆಲ್ಲವನ್ನೂ. ನನ್ನ ಒಳದನಿ ಪಿಸುಗುಟ್ಟುತ್ತಿತ್ತು 'ಮತ್ತೇನೋ ಇದೆ, ಸುಮ್ಮನಿರು' ಎಂದು. ತನಗಾದ ಕೆಟ್ಟ ಅನುಭವದ ಬಗ್ಗೆ ಕೊನೆಗೂ ಅವಳು ಬಾಯಿಬಿಟ್ಟಳು'.

'ತಂಡದ ಎಲ್ಲರಲ್ಲಿ ಸುರಕ್ಷಿತ ಭಾವನೆ ಮೂಡಿಸುವುದು ನನ್ನ ಕರ್ತವ್ಯವಾಗಿತ್ತು. ಟೀಂ ಮೀಟಿಂಗ್‌ಗಳಲ್ಲಿ ಈ ವಿಷಯದ ಬಗ್ಗೆ ಮಾತನಾಡುವುದನ್ನು ಮುಂದುವರಿಸಿದೆ. ಆ ವರ್ಷದ ಕೊನೆಯಲ್ಲಿ ನಾವು ರಾಷ್ಟ್ರೀಯ ಚಾಂಪಿಯನ್‌ಷಿಪ್ ಗೆದ್ದೆವು. ಬಳಿಕ ಕೈಲಾ ನನ್ನೊಡನೆ- ಈ ಸೀಸನ್‌ನಲ್ಲಿ ನಾನು ಮಾತನಾಡುತ್ತ, ನನ್ನ ಒತ್ತಡಗಳನ್ನು ಹೊರಹಾಕುತ್ತಾ 'ಎತ್ತರಕ್ಕೆ' ಬೆಳೆಯುತ್ತಾ ಹೋದೆ ಎಂದು ಹೇಳಿದಳು'.


ಕ್ಯಾಟೆಲಿನ್ ಒಹಾಶಿ ಎಂಬ ಪ್ರಸಿದ್ಧ ಜಿಮ್ನಾಸ್ಟ್‌ಗೆ ಉಕ್ಲಾ ತಂಡವು ದೊಡ್ಡ ಮೊತ್ತದ ಶಿಷ್ಯವೇತನ ನೀಡಿತ್ತು. ಆದರೂ ಕ್ಯಾಟೆಲಿನ್ 'ಮತ್ತೆ ನನಗೆ ಎಂದೂ 'ಮಹಾನ್' ವ್ಯಕ್ತಿ ಆಗಲು ಇಷ್ಟವಿಲ್ಲ!' ಎಂದೇ ಹೇಳುತ್ತಿದ್ದಳು. ವಿಜಯಕ್ಕಾಗಿ ನಡೆಸುವ ಪ್ರಯತ್ನ ತನ್ನ ಸಂತಸವನ್ನೇ ಕಸಿಯುತ್ತಿದೆ ಎಂದು ಆಕೆಗೆ ಅನ್ನಿಸತೊಡಗಿತ್ತು. ಕ್ಯಾಟೆಲಿನ್‌ಗೂ ಕೋಚ್ ಆಗಿದ್ದ ವೆಲೋರಿ, ಇಂತಹ ಮನೋಭಾವದಿಂದ ಹೊರತರಲು ಆಕೆಯಲ್ಲಿ ವಿಶ್ವಾಸ ಮೂಡಿಸುವ ದಾರಿಯನ್ನು ಅನುಸರಿಸಬೇಕಾಯಿತು. ಜಿಮ್‌ಗೆ ಹೊರತಾಗಿ ಶಾಲೆ, ಸ್ನೇಹಿತರು, ಕುಟುಂಬ, ಹವ್ಯಾಸ ಎಲ್ಲದರ ಬಗೆಗೂ ಮಾತನಾಡಬೇಕಾಯಿತು. ಕ್ಯಾಟೆಲಿನ್ ನಿಧಾನವಾಗಿ ಜಿಮ್ನಾಸ್ಟಿಕ್ಸ್ ಅನ್ನು ಪ್ರೀತಿಸತೊಡಗಿದಳು, ಚಾಂಪಿಯನ್ ಪಟ್ಟಕ್ಕೂ ಏರಿದಳು.

ಕೆಲವೊಮ್ಮೆ ಫೇವರಿಟ್ ಎಂದುಕೊಂಡ ಟೀಂ ಸೋತುಬಿಡುತ್ತದೆ ಅಥವಾ ಊಹಿಸಲಾಗದಷ್ಟು ಹಿಂದಿದ್ದ ಮತ್ತೊಂದು ಟೀಂ ಗೆದ್ದುಬಿಡುತ್ತದೆ. ಆದರೆ ಆಟದ ಹಿಂದಿರುವ ನೋವು-ನಲಿವು, ತರಬೇತಿ-ಸಾಧನೆಯ ಅಂಶಗಳನ್ನು ಗಮನಿಸುವವರು ಕಡಿಮೆ.

ಕ್ರೀಡೆಗಳಿಂದ ದೈಹಿಕ ಲಾಭವಷ್ಟೇ ಅಲ್ಲ. ಶಾಲೆಯ ಆಟಗಳಲ್ಲಿ ಭಾಗವಹಿಸುವುದು ಖಿನ್ನತೆಯ ಸಾಧ್ಯತೆಯನ್ನು ತಗ್ಗಿಸುತ್ತದೆ. ತಂಡಗಳಲ್ಲಿ ಆಡುವಾಗ ಸ್ನೇಹಪರತೆ, 'ಒಂದು ತಂಡ' ಎಂಬ ಭಾವನೆಯು ಸಾಮಾಜಿಕ ಕೌಶಲಗಳನ್ನು ಹೆಚ್ಚಿಸುತ್ತವೆ.

ನಿಮ್ಮ ಫೇವರಿಟ್ ಅಥ್ಲೀಟ್ ಇನ್ನೇನು ಗೆಲುವಿನ ಹಂತದಲ್ಲಿದ್ದಾಳೆ, ಉಸಿರು ಬಿಗಿ ಹಿಡಿದು ನೋಡುತ್ತಿದ್ದೀರಿ, ಕೊನೇ ಗಳಿಗೆಯಲ್ಲಿ ಅವಳು 'ಮಿಸ್' ಮಾಡಿಬಿಡುತ್ತಾಳೆ. ಆಗ ಆಕೆ ಅನುಭವಿಸಿದ್ದು 'ಚೋಕಿಂಗ್' ಎಂಬ ಪ್ರಕ್ರಿಯೆಯನ್ನು. ಸತತ ಅಭ್ಯಾಸದ ನಂತರ, ಎಲ್ಲಿ ಅದು ನಿಜವಾಗಿ ಬೇಕೋ ಅಂತಹ ಕಡೆ ಕೆಲಸ ಮಾಡದಿರುವ ಅಪಾಯ.

ಅನುಮಾನ-ಭಯ-ಚಿಂತೆಯಿಂದ ತುಂಬಿದ ಮನಸ್ಸನ್ನು ಒಂದೆಡೆ ಕೇಂದ್ರೀಕರಿಸುವುದು ಕಷ್ಟ. ಆಗ, ಎಷ್ಟೇ ಸಾಧನೆ, ತರಬೇತಿ ನಮ್ಮ ಬೆನ್ನಿಗಿದ್ದರೂ ತುಂಬಾ 'ಸಿಲ್ಲಿ' ಎನಿಸಬಹುದಾದ ತಪ್ಪುಗಳನ್ನು ನಾವು ಮಾಡಿಬಿಡಬಹುದು! ತೀವ್ರ ಒತ್ತಡವು ನಾವು ಮಾಡಬೇಕಾದ ಕಾರ್ಯದ ಬಗ್ಗೆ ಅತಿಯಾದ ವಿಶ್ಲೇಷಣೆ ಮಾಡಿಕೊಳ್ಳುವಂಥ ಸ್ಥಿತಿಯನ್ನು ತಂದಿಡುತ್ತದೆ. ಅಂದರೆ ನಾವು 'ಆಟೊಮ್ಯಾಟಿಕ್' ಆಗಿ ಮಾಡುತ್ತಿದ್ದ ಕಾರ್ಯವನ್ನೂ ಅತಿ ಎಚ್ಚರದಿಂದ ಮಾಡಲು ಹೋಗಿ ತಪ್ಪಿಬಿಡುತ್ತೇವೆ. ಇವೆಲ್ಲವೂ ಆಟಕ್ಕಷ್ಟೇ ಅಲ್ಲ ಕೊನೆಗೆ ಜೀವನದ ಯಾವ ಸವಾಲಿಗೂ ಅನ್ವಯಿಸುತ್ತವೆ ಎನ್ನುವುದೇ ಸ್ವಾರಸ್ಯ!



ಇಂತಹ ಸಂದರ್ಭ ಸೃಷ್ಟಿಯಾಗಬಾರದೆಂದರೆ, ಒತ್ತಡದ ಪರಿಸ್ಥಿತಿಯನ್ನು ಮತ್ತೆ ಮತ್ತೆ ಕೃತಕವಾಗಿ ಸೃಷ್ಟಿಸಬೇಕು. ಅಭ್ಯಾಸ ನಡೆಸಬೇಕು. ಆಟವಾಡುವ ಗಳಿಗೆಯಲ್ಲಿ ಕೆಲವು ದೀರ್ಘ ಶ್ವಾಸಗಳು ಸಹಾಯಕ. ತಮ್ಮ ಒಳಗಿನ ಸಾಮರ್ಥ್ಯದ ಬದಲು ಹೊರಗಿನ ಅಂಶಗಳ ಬಗ್ಗೆ ಆ ಗಳಿಗೆಯಲ್ಲಿ ಗಮನ ಕೇಂದ್ರೀಕರಿಸುವುದೂ ಉಪಯುಕ್ತ. ಅಂದರೆ, ಗಾಲ್ಫರ್‌ಗಳು ತಮ್ಮ ಕೈಗಳ ಚಲನೆ ಗಮನಿಸುವ ಬದಲು, ಬಾಲ್ ಹೇಗೆ ಹಾರುತ್ತದೆ ಎಂಬುದನ್ನು ಗಮನಿಸುವ ರೀತಿ.

ಆಟ-ಪಾಠ-ಜೀವನ ಎಲ್ಲಕ್ಕೂ ಹಳೆಯ ಇಂಗ್ಲಿಷ್ ಗಾದೆ 'ಪ್ರ್ಯಾಕ್ಟೀಸ್ ಮೇಕ್ಸ್ ಮ್ಯಾನ್ ಪರ್ಫೆಕ್ಟ್' ಎಂಬುದನ್ನು ಈಗ ನಾವು ಬದಲಿಸಬೇಕಿರುವುದು 'ಪ್ರ್ಯಾಕ್ಟೀಸ್ ಅಂಡರ್ ಪ್ರೆಷರ್, ವಿತ್ ಫೋಕಸ್ ಮೇಕ್ಸ್ ಪರ್ಫೆಕ್ಟ್' ಎಂಬಂತೆ. ಒತ್ತಡವನ್ನು ಎದುರಿಸಿ, ಅಭ್ಯಾಸ ಮಾಡಿದ ಮನಸ್ಸುಗಳಿಗೆ 'ಆಡುವುದು ಸಂತೋಷಕ್ಕಾಗಿ' ಎಂದು ಸಹಜವಾಗಿ ಅನ್ನಿಸುತ್ತದೆ. ಆಗ ಆ ಮನಸ್ಸುಗಳಿಗೆ ಗೆಲುವು ಬೇಕಾಗಿರಲಿ, ಇಲ್ಲದಿರಲಿ, ಅದು ನಿಶ್ಚಿತವಾಗಿಯೂ ಲಭಿಸುತ್ತದೆ!

ವಾಚಕರ ವಾಣಿ

ದೊಡ್ಡಣ್ಣನ ನಡೆ ಸರಿಯೇ?

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಉಗ್ರರು ಪ್ರಾಬಲ್ಯ ಮೆರೆಯುತ್ತಿರುವಾಗ, ಅದಾಗಲೇ ತನ್ನ ಬಹುಪಾಲು ಸೈನ್ಯವನ್ನು ಅಲ್ಲಿಂದ ವಾಪಸ್ ಕರೆಸಿಕೊಂಡಿರುವ ಅಮೆರಿಕವು ಪ್ರೇಕ್ಷಕನಂತೆ ಕೈಕಟ್ಟಿ ಕುಳಿತಿದೆ. ವಿಶ್ವದ ದೊಡ್ಡಣ್ಣ ಎನ್ನಿಸಿಕೊಂಡಿರುವ ಅಮೆರಿಕವು ತನ್ನ ದೇಶದ ಜನರನ್ನು ಕರೆಸಿಕೊಳ್ಳಲು ಮಾತ್ರ ಅಲ್ಲಿಗೆ ವಿಮಾನ ಕಳುಹಿಸಿದ್ದು ಒಂದು ರೀತಿಯ ಪಲಾಯನವಾದದಂತೆ ಕಾಣುತ್ತಿದೆ. ಸಂಘರ್ಷಪೀಡಿತ ದೇಶದಲ್ಲಿ ಮಾನವ ಹಕ್ಕುಗಳ ರಕ್ಷಣೆಗಾಗಿ ವಿಶ್ವಸಂಸ್ಥೆ ಅಗತ್ಯ ಕ್ರಮ ಕೈಗೊಳ್ಳಬೇಕು.

ಮಹಾದೇವ ವಿ., ಕಲಬುರ್ಗಿ

ಹೆಮ್ಮೆಯ ಸಂಗತಿ, ಆದರೆ...

ಕೇಂದ್ರ ಸಚಿವರಾದ ನಂತರ ಮೊದಲ ಬಾರಿಗೆ ರಾಜ್ಯಕ್ಕೆ ಭೇಟಿಯಿತ್ತ ಸಚಿವರನ್ನು ನಾಡಿನ ಜನ ಅದ್ದೂರಿಯಾಗಿ ಮೆರವಣಿಗೆಯಲ್ಲಿ ಸ್ವಾಗತಿಸಿದ್ದು (ಪ್ರ.ವಾ., ಆ. 17) ಹಾಗೂ 75ನೇ ಸ್ವಾತಂತ್ರ್ಯೋತ್ಸವದಂದು ಕಲಘಟಗಿಯಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಮೆರವಣಿಗೆಯಲ್ಲಿ ಸಹಸ್ರಾರು ಜನ ಪಾಲ್ಗೊಂಡು, 2 ಕಿ.ಮೀ. ಉದ್ದದ ತ್ರಿವರ್ಣ ಧ್ವಜ ಹಿಡಿದು ಸಾಗಿದ್ದು (ಪ್ರ.ವಾ., ಆ. 16) ಹೆಮ್ಮೆಯ ವಿಷಯಗಳೇ. ಆದರೆ ಕೊರೊನಾದಿಂದ ಜನ ಬಳಲಿ ಬೆಂಡಾಗಿರುವ ಈ ವಿಷಮ ಪರಿಸ್ಥಿತಿಯಲ್ಲಿ ಮಾಸ್ಕ್ ಧರಿಸದೆ, ಪರಸ್ಪರ ಅಂತರ ಕಾಯ್ದುಕೊಳ್ಳದೆ ಗುಂಪು ಗುಂಪಾಗಿ ಸ್ವಾಗತ ಕೋರುವುದು, ಮೆರವಣಿಗೆ ಮಾಡುವುದು ಆಘಾತಕಾರಿ ವಿಷಯ.

ಜನರಿಗೆ ಮಾದರಿಯಾಗಿ ಇರಬೇಕಾದ ಜನಪ್ರತಿನಿಧಿಗಳು ಕೋವಿಡ್ ಮಾರ್ಗಸೂಚಿಗಳನ್ನು ಮರೆತು ತಾವೂ ಮೆರವಣಿಗೆಯಲ್ಲಿ ಪಾಲ್ಗೊಂಡು ಅಸಡ್ಡೆ ತೋರಿದ್ದು ಸರಿಯೇ? ಇಂತಹವರಿಗೆ ಕಾನೂನಿನಲ್ಲಿ ಯಾವ ಶಿಕ್ಷೆ ಎಂಬ ಬಗ್ಗೆ ಆಳುವ ವರ್ಗ ಚಿಂತಿಸಬೇಕು.

ಯೋಗೇಶ್ ವೈ.ಸಿ., ಮಂಡ್ಯ

ಮೌನ– ಅನುಮಾನ

ತಾಲಿಬಾನಿ ಆಕ್ರಮಣವ
ಸಮರ್ಥಿಸುವ ಮೂಲಕ
ಪಾಕಿಸ್ತಾನ ತನಗರಿವಿಲ್ಲದಂತೆ
ನೀಡುತ್ತಿದೆಯೇನೋ ದುರಂತಕ್ಕೆ ಆಹ್ವಾನ,
ನೆರೆಮನೆಗೆ ಬೆಂಕಿ ಬಿದ್ದರೆ
ಚಳಿ ಕಾಯಿಸಿಕೊಳ್ಳುವೆ ಎಂಬಂತಿದೆ
ಅದರ ವಿಕೃತ ಮನ,
ಈ ಕುರಿತು, ದೊಡ್ಡಣ್ಣನೆನಿಸಿದ
ಅಮೆರಿಕದ ಮೌನ
ಯಾಕೋ ಮೂಡಿಸುತ್ತಿದೆ
ಎಲ್ಲರಲೂ ಅನುಮಾನ!

ಜೆ.ಬಿ.ಮಂಜುನಾಥ, ಪಾಂಡವಪುರ

ಸಂವಿಧಾನ ನಮ್ಮೆಲ್ಲರ ಧರ್ಮವಾಗಲಿ

ಧರ್ಮವನ್ನು ಸಂಕುಚಿತ ನೆಲೆಯಲ್ಲಿ ಅರ್ಥೈಸಿಕೊಂಡು, ದೇಶದ ಸಂವಿಧಾನ, ಕಾನೂನು ಸುವ್ಯವಸ್ಥೆಗಳನ್ನು ಧರ್ಮದ ಅಡಿಯಾಳಾಗಿ ಮಾಡಿದರೆ, ನಾಗರಿಕ ಸಮಾಜ ಅಥವಾ ರಾಷ್ಟ್ರ ಯಾವ ಗತಿಗೀಡಾಗುತ್ತದೆ ಎಂಬುದಕ್ಕೆ ಅಫ್ಗಾನಿಸ್ತಾನದ ಬೆಳವಣಿಗೆಗಳೇ ನಿದರ್ಶನ. ದೇಶವನ್ನು, ಜನರನ್ನು ಮುನ್ನಡೆಸುವ ಸಾಧನಗಳು ಸಂವಿಧಾನ ಹಾಗೂ ಕಾನೂನುಗಳು ಆಗಬೇಕೇ ವಿನಾ ಧರ್ಮಗಳಲ್ಲ. ಯಾಕೆಂದರೆ ಸಂವಿಧಾನವು ದೇಶದಲ್ಲಿ ಸಮಾನತೆಯನ್ನು ಬಯಸಿ, ಪ್ರಜೆಗಳ ಹಿತಾಸಕ್ತಿಯನ್ನು ಕಾಪಾಡುತ್ತದೆ. ಆದರೆ, ಕೆಲವೊಂದು ಸಂದರ್ಭಗಳಲ್ಲಿ ಧರ್ಮಗಳು ಪ್ರತಿಷ್ಠೆಗೆ ಕಾರಣವಾಗಿ ಜನರ ಹಿತಾಸಕ್ತಿಯನ್ನು ಬಲಿಕೊಡುತ್ತವೆ. ಹಾಗಾಗಿ, ಸಂವಿಧಾನಕ್ಕಿಂತ ಮಿಗಿಲಾದ ಧರ್ಮ, ಪ್ರಜಾಪ್ರಭುತ್ವಕ್ಕಿಂತ ದೊಡ್ಡದಾದ ತತ್ವ ಬೇರೊಂದಿಲ್ಲ. ಹಾಗಾಗಿ, ನಮ್ಮೆಲ್ಲರ ಮೂಲ ಧರ್ಮ ಮತ್ತು ತತ್ವವು ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಆಗಬೇಕಾಗಿದೆ.

ಕೆ.ಜೆ.ಕೊಟ್ರಗೌಡ, ತೂಲಹಳ್ಳಿ

ಸುರಕ್ಷತೆಯ ಅರಿವು ಸಂಸ್ಕೃತಿಯಾಗಬೇಕು

ತುಮಕೂರು ಜಿಲ್ಲೆಯ ಗ್ರಾಮವೊಂದರ ಶಾಲೆಯಲ್ಲಿ ಧ್ವಜಸ್ತಂಭ ಅಳವಡಿಸುವಾಗ ವಿದ್ಯುತ್ ಸ್ಪರ್ಶದಿಂದ ವಿದ್ಯಾರ್ಥಿಯೊಬ್ಬ ಮೃತಪಟ್ಟ ಘಟನೆ ಅತೀವ ದುಃಖ ತರುವಂಥದ್ದು (ಪ್ರ.ವಾ., ಆ. 16). ಶಿಕ್ಷಣ ಸಚಿವರು ಸಹಜವಾಗಿ ಈ ಘಟನೆ ಬಗ್ಗೆ ತನಿಖೆಗೆ ಆದೇಶಿಸಿದ್ದಾರೆ. ತನಿಖೆಯ ನಂತರ ಅಪಘಾತದ ಮೂಲ ಕಾರಣ ಜನರಿಗೆ ತಿಳಿಯುವಂತಾದರೆ ಇಂಥ ಅಪಘಾತಗಳು ಮರುಕಳಿಸದಂತೆ ಮಾಡಬಹುದು. ಶಾಲಾ ಹಂತದಲ್ಲಿಯೇ ಸುರಕ್ಷತೆ ಬಗ್ಗೆ ತಿಳಿವಳಿಕೆ ನೀಡುವುದರಿಂದ ಸುರಕ್ಷತೆ ಎಂಬುದು ಮಕ್ಕಳಲ್ಲಿ ಒಂದು ಸಂಸ್ಕೃತಿಯಾಗಿ ಬೆಳೆಯುತ್ತದೆ.

ಸಣ್ಣ ಸಣ್ಣ ಅಪಘಾತಗಳನ್ನು ತಪ್ಪಿಸಲು ಅಗತ್ಯವಾದ ಕೌಶಲಗಳನ್ನು ಬೆಳೆಸಲು ಸಾಧ್ಯವಾದರೆ, ದೊಡ್ಡ ದೊಡ್ಡ ಅಪಘಾತಗಳನ್ನು ತಡೆಯಬಹುದು ಎಂಬುದು ವೈಜ್ಞಾನಿಕವಾಗಿ ರುಜುವಾತಾಗಿದೆ. ಹೀಗೆ, ಶಾಲಾ ಹಂತದಲ್ಲಿಯೇ ಬೆಳೆಸಿಕೊಂಡ ಸುರಕ್ಷಾ ಸಂಸ್ಕೃತಿಯು ಮುಂದೆ ಉದ್ಯೋಗ ಸ್ಥಳದಲ್ಲಿ ಒಂದು ಮನೋಭಾವವಾಗಿ ಉಳಿಯುತ್ತದೆ. ಈ ದಿಸೆಯಲ್ಲಿ ಪ್ರತೀ ಶಾಲೆಯಲ್ಲಿ ಕನಿಷ್ಠ ಒಬ್ಬ ಶಿಕ್ಷಕರಿಗೆ ಸುರಕ್ಷತಾ ನಿಯಮಗಳ ಬಗ್ಗೆ ತರಬೇತಿ ನೀಡಲು ಸರ್ಕಾರ ಚಿಂತಿಸಬೇಕು.

ಡಾ. ಜಿ.ಬೈರೇಗೌಡ, ಬೆಂಗಳೂರು

ಮಹಾನ್ ನಾಯಕರ ಕೊಡುಗೆ ಪರಿಗಣಿಸಿ

ಹಿರಿಯ ರಾಜಕೀಯ ಮುತ್ಸದ್ದಿಗಳಾಗಿದ್ದ ದಿವಂಗತ ಪಂಡಿತ್ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರ ಬಗ್ಗೆ ಕೆಲವರು ನಾಲಿಗೆ ಹರಿಬಿಡುತ್ತಿರುವುದು ತೀರಾ ಖಂಡನಾರ್ಹ. ದೇಶಕ್ಕೆ ಈ ಮಹಾನ್ ನಾಯಕರ ಕೊಡುಗೆ ಅಪಾರ. ಸುದೀರ್ಘಕಾಲ ದೇಶದ ಪ್ರಧಾನಿಯಾಗಿದ್ದ ನೆಹರೂ, ಭಾರತದ ಅರ್ಥ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿದರು. ಇಂದಿರಾ ಗಾಂಧಿ ಅವರೂ ದೇಶದ ಚುಕ್ಕಾಣಿ ಹಿಡಿದು, ಸುಭದ್ರ ಆಡಳಿತ ನೀಡಿದರು. ಅವರ ಕೊಡುಗೆಯೂ ಕಡಿಮೆಯೇನಿಲ್ಲ. ವಾಜಪೇಯಿ ತಮ್ಮ ಪಕ್ಷಕ್ಕೆ ಲೋಕಸಭೆಯಲ್ಲಿ ಸ್ಪಷ್ಟ ಬಹುಮತ ಇಲ್ಲದೇ ಹೋದರೂ, ಸಣ್ಣಪುಟ್ಟ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡು, ದೇಶಕ್ಕೆ ಉತ್ತಮ ಹಾಗೂ ಸುಭದ್ರ ಆಡಳಿತ ನೀಡಿದ್ದಾರೆ. ನೆಹರೂ ಮತ್ತು ಇಂದಿರಾ ನಾಮಾಂಕಿತ ಕೆಲವು ವಿಶ್ವವಿದ್ಯಾಲಯಗಳ ಹೆಸರುಗಳನ್ನು ಬದಲಾಯಿಸುವ ಹುನ್ನಾರ ಕೆಲವು ವರ್ಷಗಳಿಂದೀಚೆಗೆ ನಡೆಯುತ್ತಿದೆ. ಹೀಗೆ ಮಹಾನ್ ನಾಯಕರ ಹೆಸರನ್ನು ಬದಲಾಯಿಸುವುದು ಅವರಿಗೆ ನಾವು ತೋರುವ ಅಗೌರವವಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ನೆಹರೂ ಅವರ ಬಗ್ಗೆ ಅತ್ಯಂತ ಅಸಹ್ಯಕರ ಚಿತ್ರಗಳನ್ನು ಪೋಸ್ಟ್ ಮಾಡಲಾಗುತ್ತಿದೆ. ವೈಯಕ್ತಿಕ ವಿಷಯಗಳನ್ನು ದೊಡ್ಡದು ಮಾಡಿ, ಅವರ ಸಾಧನೆಗಳನ್ನು ಮುಚ್ಚಿಹಾಕುವುದು ಸಹ ಅತ್ಯಂತ ಖಂಡನೀಯ. ಇಂತಹ ಕೆಟ್ಟ ಪ್ರವೃತ್ತಿಗಳು ನಿಲ್ಲಲಿ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅರಣ್ಯ ಭೂಮಿ: ಹಕ್ಕುಪತ್ರ ಪಡೆಯಲು ಅಡ್ಡಿ ಹಲವು

• ಕೃಷ್ಣಿ ಶಿರೂರ

ಅರಣ್ಯ ಹಕ್ಕು ಕಾಯ್ದೆ 2006 ಬೇಗನೆ ಅನುಷ್ಠಾನಗೊಳ್ಳಬೇಕು ಎಂಬುದು ಬುಡಕಟ್ಟು ಸಮುದಾಯಗಳು ಮತ್ತು ಅರಣ್ಯವನ್ನು ಅವಲಂಬಿಸಿರುವವರ ಬಹುಕಾಲದ ಬೇಡಿಕೆ. ಕಾಯ್ದೆಯನ್ನು ತ್ವರಿತವಾಗಿ ಜಾರಿಗೊಳಿಸಿ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ ಹಾಗೂ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಇತ್ತೀಚೆಗೆ ಜಂಟಿ ಪತ್ರ ಬರೆದಿದೆ. ಅರಣ್ಯ ಹಕ್ಕು ಕಾಯ್ದೆಯು ಸಂಪೂರ್ಣವಾಗಿ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ವಿಚಾರ. ಆದರೆ, ಪತ್ರ ಬರೆಯುವಾಗ ಪರಿಸರ ಮತ್ತು ಅರಣ್ಯ ಸಚಿವಾಲಯವನ್ನೂ ಸೇರಿಸಿಕೊಂಡಿರುವುದು ಅರಣ್ಯ ಹಕ್ಕುಗಳ ಹೋರಾಟಗಾರರಲ್ಲಿ ಅನುಮಾನಕ್ಕೆ ಕಾರಣವಾಗಿದೆ. ಅದೇನೇ ಇದ್ದರೂ, 2006ರಲ್ಲಿಯೇ ಅಂಗೀಕಾರವಾದ ಕಾಯ್ದೆಯ ಅನುಷ್ಠಾನವು ಆಮೆಗತಿಯಲ್ಲಿ ಸಾಗಿದೆ. ರಾಜ್ಯದಲ್ಲಿ ಕಾಯ್ದೆ ಜಾರಿ ಬಗೆಗಿನ ಒಂದು ನೋಟ ಇಲ್ಲಿದೆ:



ಮಲೆನಾಡಿನಲ್ಲಿ ಅರಣ್ಯಭೂಮಿಯಲ್ಲಿ ಸಾಗುವಳಿ ನೋಟ (ಸಾಂದರ್ಭಿಕ ಚಿತ್ರ)



ಸುಪ್ರೀಂಕೋರ್ಟ್ ನಡೆ

ಅರಣ್ಯ ಹಕ್ಕು ಪತ್ರ ವಿತರಣೆಗೆ ಸಂಬಂಧಿಸಿ ಅರ್ಜಿಗಳು ತಿರಸ್ಕೃತಗೊಂಡಿದ್ದರೆ ಅತಿಕ್ರಮಣದಾರರನ್ನು ತಕ್ಷಣವೇ ಅರಣ್ಯದಿಂದ ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ 2019ರ ಫೆಬ್ರುವರಿ 13ರಂದು ಆದೇಶ ನೀಡಿತ್ತು. ಅದೇ ವರ್ಷ ಫೆಬ್ರುವರಿ 28ರಂದು ಈ ಆದೇಶಕ್ಕೆ ತಡೆ ಕೊಟ್ಟಿತು. ತಿರಸ್ಕರಿಸಲಾದ ಅರ್ಜಿಗಳ ಮರುಪರಿಶೀಲನೆ ಮಾಡಲು ಸರ್ಕಾರಕ್ಕೆ ನಿರ್ದೇಶನ ನೀಡಲಾಯಿತು.

ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ತಿರಸ್ಕೃತ ಅರ್ಜಿಗಳ ಮರುಪರಿಶೀಲನೆಗೆ 18 ತಿಂಗಳ ಕಾಲಾವಕಾಶ ಕೋರಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸುಪ್ರೀಂಕೋರ್ಟ್‌ಗೆ 2019ರ ಜುಲೈಯಲ್ಲಿ ಪ್ರಮಾಣಪತ್ರ ಸಲ್ಲಿಸಿದ್ದರು.

ರಾಜ್ಯದಲ್ಲಿ 6 ಲಕ್ಷಕ್ಕೂ ಹೆಚ್ಚು ಕುಟುಂಬ ಅರಣ್ಯ ಭೂಮಿ ಸಾಗುವಳಿ ಮಾಡುತ್ತಿದ್ದು, ಸರ್ಕಾರದ ಅರಣ್ಯ ಭೂಮಿ ಅಕ್ರಮ–ಸಕ್ರಮ ಕಾಯ್ದೆಯಡಿ 2.95 ಲಕ್ಷ ಅರಣ್ಯಭೂಮಿ ಅತಿಕ್ರಮಣದಾರರು ಸಾಗುವಳಿ ಹಕ್ಕಿಗಾಗಿ 2019ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಆದರೆ ಅವುಗಳಲ್ಲಿ 1.84 ಲಕ್ಷ ಅರ್ಜಿಗಳು ತಿರಸ್ಕೃತವಾಗಿದ್ದು, ಕೇವಲ 15,798 ಹಕ್ಕುಪತ್ರಗಳ ವಿತರಣೆಯಾಗಿದೆ. 56,055 ಎಕರೆ ಪ್ರದೇಶಕ್ಕೆ ಮಂಜೂರಾತಿ ನೀಡಲಾಗಿದ್ದು, 94,862 ಅರ್ಜಿಗಳು ಇತ್ಯರ್ಥವಾಗದೇ ಬಾಕಿ ಉಳಿದುಕೊಂಡಿವೆ. ಸಾಗುವಳಿ ಹಕ್ಕುಪತ್ರ ಪಡೆಯಲು ಅಗತ್ಯ ಪುರಾವೆಗಳನ್ನು ಒದಗಿಸಲಾಗದ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಆತಂಕ ಗಿರಿಕಿ ಹೊಡೆಯುತ್ತಲೇ ಇದೆ. ಅತ್ತ ಅರಣ್ಯ ಭೂಮಿ ಸಾಗುವಳಿ ಹಕ್ಕುಪತ್ರ ಪಡೆದುಕೊಳ್ಳಲು ಆರಂಭವಾದ ಹೋರಾಟ 30 ವರ್ಷಗಳನ್ನು ದಾಟಿ ಸಾಗಿದೆ. ಆದರೆ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಅಧಿನಿಯಮದಡಿ ಅರಣ್ಯವಾಸಿಗರು ಸಲ್ಲಿಸಿ ಇತ್ಯರ್ಥವಾಗದೇ ಬಾಕಿ ಇರುವ ಅರ್ಜಿಗಳ ಪುನರ್‌ಪರಿಶೀಲನೆ ಹಾಗೂ ಹಕ್ಕು ಪತ್ರ ವಿತರಣೆ ಪ್ರಕ್ರಿಯೆ ಕೋವಿಡ್ ಕಾರಣದಿಂದ ಇನ್ನಷ್ಟು ನನೆಗುದಿಗೆ ಬಿದ್ದಿದೆ.

ಅರಣ್ಯ ಅತಿಕ್ರಮಣದ ಜಾಗದ ಸಾಗುವಳಿ ಹಕ್ಕನ್ನು ಅರಣ್ಯ ಹಕ್ಕು ಕಾಯ್ದೆಯಡಿ ಪಡೆಯಲು ಮೊದಲನೆಯದಾಗಿ ಪರಿಶಿಷ್ಟ ಪಂಗಡದವರು (ಎಸ್‌ಟಿ) ಅರ್ಹರಾದರೆ, ಎರಡನೆಯದಾಗಿ ಪಾರಂಪರಿಕ ಅರಣ್ಯವಾಸಿಗಳು (ಒಟಿಎಫ್‌ಡಿ), ಮೂರನೆಯದಾಗಿ ಸಮುದಾಯದವರು (ಕಮ್ಯುನಿಟಿ) ಅರ್ಹತೆ ಪಡೆಯಲಿದ್ದಾರೆ. ಅರಣ್ಯ ಹಕ್ಕು ಕಾಯ್ದೆ ಪ್ರಕಾರ ಹಕ್ಕುಪತ್ರ ಪಡೆಯಲು 2005ರ ಡಿಸೆಂಬರ್ 13ಕ್ಕೆ ಮುಂಚೆ ಅನುಸೂಚಿತ ಬುಡಕಟ್ಟುಗಳು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರಬೇಕು. ಅಥವಾ ಜೀವನೋಪಾಯಕ್ಕಾಗಿ ಅರಣ್ಯವನ್ನು ಅವಲಂಬಿಸಿರಬೇಕು. ಇತರೆ ಪಾರಂಪರಿಕ ಅರಣ್ಯ ವಾಸಿಗಳು ಹಕ್ಕು ಪತ್ರ ಪಡೆದುಕೊಳ್ಳಬೇಕೆಂದರೆ 2005ರ ಡಿಸೆಂಬರ್ 13ಕ್ಕೆ ಮುಂಚೆ ಕನಿಷ್ಠ 3 ತಲೆಮಾರಿನವರೆಗೆ ಅಂದರೆ 75 ವರ್ಷಗಳಿಂದ ಅರಣ್ಯ ಭೂಮಿಯಲ್ಲಿ ವಾಸಿಸುತ್ತಿದ್ದು, ಜೀವನಕ್ಕೆ ಅರಣ್ಯವನ್ನೇ ಅವಲಂಬಿಸಿರಬೇಕು.

ರಾಜ್ಯದ ಶಿವಮೊಗ್ಗ, ಉತ್ತರ ಕನ್ನಡ, ರಾಮನಗರ, ಮೈಸೂರು, ಗದಗ, ಚಿತ್ರದುರ್ಗ, ದಾವಣಗೆರೆ, ಮಂಡ್ಯ ಸೇರಿ ಹಲವು ಜಿಲ್ಲೆಗಳಲ್ಲಿ ಅತಿಕ್ರಮಣ ಸಮಸ್ಯೆ ಇದ್ದರೂ ಅತೀ ಹೆಚ್ಚು ಪ್ರಕರಣಗಳಿರುವುದು ಶಿವಮೊಗ್ಗ ಹಾಗೂ ಉತ್ತರ ಕನ್ನಡದಲ್ಲಿ. ಅರಣ್ಯವೇ ಹೆಚ್ಚಿರುವ ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಅತಿಕ್ರಮಣ ಮಾಡಿಕೊಂಡು ಸಾಗುವಳಿ ಮಾಡುತ್ತಿರುವರಿಗೆ ಮೂರು ತಲೆಮಾರುಗಳ ಹಿನ್ನೆಲೆಯಿದ್ದರೂ ಸರ್ಕಾರ ಕೇಳಿದ ದಾಖಲೆ ಒದಗಿಸಲಾಗದ ಕಾರಣಕ್ಕೆ ಅರ್ಜಿಗಳು ತಿರಸ್ಕೃತವಾಗಿವೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಕಾಂತರಾಜು, ‘ಪ್ರಜಾವಾಣಿ’ ಜೊತೆ ಮಾತನಾಡಿ, ‘ಬಾಕಿ ಅರ್ಜಿಗಳ ಪುನರ್ ಪರಿಶೀಲನೆ ಪ್ರಕ್ರಿಯೆ ಕೋವಿಡ್ ಕಾರಣಕ್ಕೆ ಹಿನ್ನಡೆ ಪಡೆದಿತ್ತು. ಈಗ ಉಪ ವಿಭಾಗೀಯ ಮಟ್ಟದ ಸಮಿತಿ, ಜಿಲ್ಲಾಮಟ್ಟದ ಸಮಿತಿ ಮೂಲಕ ಅರಣ್ಯ ಇಲಾಖೆ ಸಹಕಾರದೊಂದಿಗೆ ಇತ್ಯರ್ಥ ಪಡಿಸಲಾಗುವುದು. ಗ್ರಾಮ ಪಂಚಾಯ್ತಿ ಮಟ್ಟದ ಸಮಿತಿಯಿಂದ ಅರ್ಜಿಗಳು ತಿರಸ್ಕೃತವಾದಲ್ಲಿ ಅರ್ಜಿದಾರರು ಸ್ಥಳೀಯ ಉಪವಿಭಾಗಾಧಿಕಾರಿಗಳ ಮಟ್ಟದ ಸಮಿತಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಅಲ್ಲಿ ತಿರಸ್ಕೃತವಾದಲ್ಲಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಮೇಲ್ಮನವಿಗೆ ಅವಕಾಶವಿದೆ. ಈ ಮೂರೂ ಹಂತದಲ್ಲಿ ಅರ್ಜಿ ತಿರಸ್ಕೃತವಾದಲ್ಲಿ ಅಂಥ ಅರಣ್ಯ ನಿವಾಸಿಗಳ ಒಕ್ಕಲೆಬ್ಬಿಸುವ ಪ್ರಕ್ರಿಯೆಯನ್ನು ಅರಣ್ಯ ಇಲಾಖೆ ಕೈಗೊಳ್ಳಲಿದೆ’ ಎಂದು ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕು ಪತ್ರ ವಿತರಣೆ ಕುರಿತು ಹೇಳಿದರು.

ಈವರೆಗೂ ಅರಣ್ಯಭೂಮಿ ಸಾಗುವಳಿದಾರರು ತಮ್ಮ ಸರಳ, ಸಾಮಾನ್ಯ ಜೀವನಕ್ಕಾಗಿ ಕಿರು ಭೂಮಿ ಸಾಗುವಳಿ ಮಾಡಿಕೊಳ್ಳುತ್ತಿದ್ದರೂ ಅವರಿಗೆ ಮಾಲ್ಕಿ ಜಮೀನುಳ್ಳವರಿಗೆ ದೊರೆಯುತ್ತಿರುವ ಸರ್ಕಾರದ ಯಾವುದೇ ಸವಲತ್ತುಗಳು ದೊರೆಯುತ್ತಿಲ್ಲ. ಏಕೆಂದರೆ ಸೌಲಭ್ಯ ಪಡೆಯಲು ನೀಡಬೇಕಿರುವ ಜಮೀನು ಉತಾರವಾಗಲಿ, ಹಕ್ಕು ಪತ್ರವಾಗಲಿ ಅವರಲ್ಲಿಲ್ಲ. ಅದರಲ್ಲೂ ಅರಣ್ಯಕ್ಕೆ ಹೊಂದಿಕೊಂಡೇ ಇರುವ ಇಂಥವರ ಜಮೀನಿನಲ್ಲಿ ಬೆಳೆದ ಬೆಳೆಯ ಬಹುಪಾಲು ಕಾಡು ಪ್ರಾಣಿಗಳ ಪಾಲಾಗುತ್ತಿದೆ. ಕಾಡು ಪ್ರಾಣಿಗಳಿಂದ ಉಂಟಾದ ಹಾನಿಯನ್ನು ಸರ್ಕಾರ ಯಾವತ್ತೂ ಭರಿಸಿಲ್ಲ. ಕಾರಣ ಆ ಪರಿಹಾರ ಪಡೆಯಲು ಇವರೆಲ್ಲರೂ ಸರ್ಕಾರದ ಪ್ರಕಾರ ಅನರ್ಹರು. ಇತ್ತೀಚೆಗೆ ಅತಿವೃಷ್ಟಿ ಆದಾಗಲೆಲ್ಲ ಬೆಳೆ ನಷ್ಟವಾದರೂ ಇವರ್‍ಯಾರಿಗೂ ಒಂದು ಪೈಸೆ ಪರಿಹಾರ ದೊರೆತಿಲ್ಲ. ಅಷ್ಟೇ ಏಕೆ; ಮಳೆಗೆ ಕುಸಿದು ಹೋದ ಅದೆಷ್ಟೋ ಸೂರುಗಳ ಪುನರ್ ನಿರ್ಮಾಣಕ್ಕೂ ಅರಣ್ಯ ಇಲಾಖೆ ಅಡ್ಡಗಾಲು ಹಾಕಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅರಣ್ಯ ಭೂಮಿ ಸಾಗುವಳಿದಾರರೊಬ್ಬರು ಆತಂಕದಲ್ಲೇ ಆರೋಪ ಮಾಡಿದ್ದಾರೆ.

‘ಅರಣ್ಯ ಹಕ್ಕು ಕಾಯ್ದೆ ಪ್ರಕಾರ, ಸಾಗುವಳಿ ಹಕ್ಕನ್ನು ಪಡೆಯುವಲ್ಲಿ ಆಡಳಿತಾತ್ಮಕವಾಗಿ ಸಾಕಷ್ಟು ಸಮಸ್ಯೆಗಳು ಇವೆ. ಅರಣ್ಯ ಅತಿಕ್ರಮಣ ಸಾಗುವಳಿ ಸಮಸ್ಯೆ ಎದುರಿಸುತ್ತಿರುವ ಜಿಲ್ಲೆಗಳನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳಲ್ಲಿ ಇಚ್ಛಾಶಕ್ತಿಯ ಹಾಗೂ ಕಾಯ್ದೆಯ ಅರಿವಿನ ಕೊರತೆಯಿದೆ. ಕಾಯ್ದೆ ಪ್ರಕಾರ ಅರ್ಜಿ ಜೊತೆ ಸಲ್ಲಿಸಬೇಕಿದ್ದ ದಾಖಲೆಗಳ ಅಲಭ್ಯತೆ ಮುಂತಾದ ಕಾರಣಗಳಿಂದ ಅರಣ್ಯ ಭೂಮಿ ಅಕ್ರಮ–ಸಕ್ರಮ ಪ್ರಕ್ರಿಯೆ ಅತಂತ್ರ ಸ್ಥಿತಿಯಲ್ಲಿದೆ’ ಎನ್ನುತ್ತಾರೆ ರಾಜ್ಯ ಅರಣ್ಯಭೂಮಿ ಅತಿಕ್ರಮಣದಾರರ ಹೋರಾಟ ಸಮಿತಿ ಅಧ್ಯಕ್ಷ ಎ. ರವೀಂದ್ರ ನಾಯ್ಕ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಾರಂಪರಿಕ ಅರಣ್ಯ ವಾಸಿಗಳ ಅರ್ಜಿ ಸಲ್ಲಿಕೆ ಹಾಗೂ ಹೆಚ್ಚು ಬಾಕಿ ಇರುವ ಜಿಲ್ಲೆಗಳ ಅರ್ಜಿಗಳ ವಿವರ

(ಹೆಚ್ಚು ಅತಿಕ್ರಮಣ ಸಮಸ್ಯೆ ಇರುವ ಜಿಲ್ಲೆಗಳ ವಿವರ ಮಾಹಿತಿ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ)

ಜಿಲ್ಲೆ	ಸಲ್ಲಿಕೆಯಾದ ಅರ್ಜಿ	ಹಕ್ಕುಪತ್ರ ಹಂಚಿಕೆ	ತಿರಸ್ಕೃತ ಅರ್ಜಿ	ಬಾಕಿ ಉಳಿದಿರುವ ಅರ್ಜಿ
ಶಿವಮೊಗ್ಗ	97075	2,444	21,916	72,715
ಉತ್ತರ ಕನ್ನಡ	89,167	2,855	69733	16,579
ರಾಮನಗರ	4,582	464	642	3276
ಮೈಸೂರ	7275	760	5657	858
ಗದಗ	2368	619	1387	362
ದಾವಣಗೆರೆ	11034	527	10268	239
ಕೊಪ್ಪಳ	221	04	00	217
ಚಿತ್ರದುರ್ಗ	5272	347	4709	216
ಮಂಡ್ಯ	214	00	66	148

ಅರ್ಜಿ ತಿರಸ್ಕಾರಕ್ಕೆ ಕಾರಣಗಳು

- ಅರ್ಜಿದಾರರು ಕಂದಾಯ ಭೂಮಿಗಾಗಿ ಅರ್ಜಿ ಸಲ್ಲಿಸಿರುವುದು
- ಇತರೆ ಪಾರಂಪರಿಕ ಅರಣ್ಯ ವಾಸಿಗಳು 75 ವರ್ಷಗಳಿಂದ ಅರಣ್ಯ ಭೂಮಿಯನ್ನು ಅವಲಂಭಿಸಿರುವುದಕ್ಕೆ, ಅಗತ್ಯ ದಾಖಲೆಗಳನ್ನು ಒದಗಿಸುವಲ್ಲಿ ವಿಫಲರಾಗಿರುವುದು
- ಒಂದೇ ಕುಟುಂಬದಲ್ಲಿ ಬಹುಮಂದಿ ಅರ್ಜಿಗಳನ್ನು ಸಲ್ಲಿಸಿರುವುದು
- ಅರ್ಜಿದಾರರಲ್ಲಿ ಕೆಲವರು ಅರಣ್ಯ ಇಲಾಖೆ ವತಿಯಿಂದ ಸೌಲಭ್ಯಗಳೊಂದಿಗೆ ಈಗಾಗಲೇ ಪುನರ್ ವಸತಿ ಪಡೆದಿರುವುದು
- ಅರ್ಜಿಗಳ ಪುನರ್ ಪರಿಶೀಲನೆ ಪ್ರಕ್ರಿಯೆ ಮುಂದುವರಿಸಲು ಕೋವಿಡ್ ಸಾಂಕ್ರಾಮಿಕವೂ ಅಡ್ಡಿ ಆಗಿದೆ

ಸುಪ್ರೀಂಕೋರ್ಟ್ ಮಧ್ಯಂತರ ತಡೆಯಾಜ್ಞೆ ಆದೇಶದಲ್ಲಿ ನೀಡಿದ ನಿರ್ದೇಶನದಂತೆ ತಿರಸ್ಕರಿಸಲಾದ ಅರ್ಜಿಗಳ ಮರುಪರಿಶೀಲನೆ ಪ್ರಕ್ರಿಯೆಯನ್ನು ಶೀಘ್ರ ಕೈಗೊಳ್ಳಲಾಗುವುದು

ಕಾಂತರಾಜು, ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಟಿಬೆಟನ್ನರಿಗೆ ಸಾಗುವಳಿ ಹಕ್ಕನ್ನು ನೀಡಿರುವ ಸರ್ಕಾರ, ನಮ್ಮ ನೆಲದಲ್ಲೇ ಬದುಕು ಕಟ್ಟಿಕೊಂಡಿರುವ ಮೂಲನಿವಾಸಿಗಳನ್ನು ಒಕ್ಕಲೆಬ್ಬಿಸುವುದು ಎಷ್ಟರ ಮಟ್ಟಿಗೆ ಸರಿ?

ಎ.ರವೀಂದ್ರ ನಾಯ್ಕ, ಅರಣ್ಯ ಭೂಮಿ ಅತಿಕ್ರಮಣದಾರ ಹೋರಾಟ ಸಮಿತಿ ರಾಜ್ಯಾಧ್ಯಕ್ಷ

ನ್ಯಾಯಾಧೀಶರ ಭದ್ರತೆ: ರಾಷ್ಟ್ರಮಟ್ಟದ ಭದ್ರತಾ ಪಡೆ ಅಗತ್ಯವಿಲ್ಲ–ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿರ್ದಿಷ್ಟ ಬೆದರಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಧೀಶರು ಮತ್ತು ನ್ಯಾಯಾಲಯ ಸಂಕೀರ್ಣಗಳ ಭದ್ರತೆಗಾಗಿ ರಾಷ್ಟ್ರೀಯ ಮಟ್ಟದ ಭದ್ರತಾ ಪಡೆಯನ್ನು ನಿಯೋಜಿಸುವುದು ಸೂಕ್ತವಲ್ಲ. ಅದರ ಬದಲಿಗೆ ಸ್ಥಳೀಯ ಪೊಲೀಸರೇ ಸಮರ್ಪಕವಾಗಿ ಈ ಕಾರ್ಯ ನಿಭಾಯಿಸಬಲ್ಲರು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಈ ಸಂಬಂಧ ಕೇಂದ್ರ ಸರ್ಕಾರ 2007ರಲ್ಲಿ ಮಾರ್ಗಸೂಚಿ ಹೊರಡಿಸಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ನೇತೃತ್ವದ ಪೀಠದ ಗಮನಕ್ಕೆ ತಂದರು.

ಈ ಕಾರ್ಯಕ್ಕಾಗಿ ವಿಶೇಷ ಪೊಲೀಸ್ ಪಡೆಯನ್ನು ನಿಯೋಜಿಸುವ ಬದಲಿಗೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಗೃಹ ಸಚಿವಾಲಯಗಳು ಕೇಂದ್ರದ ಮಾರ್ಗಸೂಚಿಯನ್ನು ಪೂರ್ಣವಾಗಿ ಅನುಷ್ಠಾನಗೊಳಿಸಿದರೆ ಸಾಕು ಎಂದರು.

ಹಿಮಾಚಲ ಪ್ರದೇಶದಲ್ಲಿ ಎದುರಾಗುವ ಭದ್ರತಾ ಸಮಸ್ಯೆಗಳು ಜಾರ್ಖಂಡ್‌ಗಿಂತ ಭಿನ್ನವಾಗಿರಬಹುದು. ಆದ್ದರಿಂದ ನ್ಯಾಯಾಧೀಶರ ರಕ್ಷಣಾ ಕಾರ್ಯವನ್ನು ಕೇಂದ್ರದ ಬದಲಿಗೆ ಆಯಾ ರಾಜ್ಯಗಳೇ ನಿಭಾಯಿಸುವುದು ಸೂಕ್ತ ಎಂದು ಅವರು ಹೇಳಿದರು.

ಆರ್‌ಪಿಎಫ್, ಸಿಐಎಸ್‌ಎಫ್ ಇತ್ಯಾದಿಗಳಂತೆ ನ್ಯಾಯಾಧೀಶರ ಭದ್ರತೆಗೆ ವಿಶೇಷ ರಾಷ್ಟ್ರೀಯ ಪಡೆಯನ್ನು ನಿಯೋಜಿಸಲು ಸಾಧ್ಯವೇ ಎಂದು ಪೀಠ ಕೇಳಿದ ಪ್ರಶ್ನೆಗೆ ಮೆಹ್ತಾ ಅವರು ಮೇಲ್ಕಂಡಂತೆ ಪ್ರತಿಕ್ರಿಯಿಸಿದರು.

ಈ ಸಂಬಂಧ ಕೇಂದ್ರ ಗೃಹ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಗಳು ಪಾಲನೆ ಆಗುತ್ತಿವೆಯೇ ಅಥವಾ ಇಲ್ಲವೇ ಎಂದು ನ್ಯಾಯಪೀಠ ಇದೇ ವೇಳೆ ಕೇಳಿತು.

ನ್ಯಾಯಾಧೀಶರ ರಕ್ಷಣೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಕುರಿತು ಪ್ರಮಾಣ ಪತ್ರ ಸಲ್ಲಿಸುವಂತೆ ಈ ಹಿಂದೆಯೇ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿತ್ತು. ಆದರೂ ಹಲವು ರಾಜ್ಯಗಳು ಪ್ರತಿಕ್ರಿಯಿಸಿಲ್ಲ ಎಂದು ಪೀಠ ಬೇಸರ ವ್ಯಕ್ತಪಡಿಸಿತು.

ರಾಜ್ಯಗಳಿಗೆ ಈ ಕುರಿತು ಪ್ರತಿಕ್ರಿಯಿಸಲು 10 ದಿನಗಳ ಕಾಲಾವಕಾಶವನ್ನು ನೀಡಿದ ಪೀಠವು, ಪ್ರತಿಕ್ರಿಯಿಸಲು ವಿಫಲವಾದರೆ ಒಂದು ಲಕ್ಷ ರೂಪಾಯಿ ದಂಡ ಪಾವತಿಸಬೇಕಾಗುತ್ತದೆ ಎಂದು ಎಚ್ಚರಿಸಿತು.

ಧನಬಾದ್‌ನ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಉತ್ತಮ್ ಆನಂದ್ ಅವರ ಸಾವಿನ ನಂತರ ಸುಪ್ರೀಂ ಕೋರ್ಟ್, ನ್ಯಾಯಾಧೀಶರ ಭದ್ರತೆಗೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ನಡೆಸುತ್ತಿದೆ.

ಅಲೀಗಡ ಹೆಸರು ಬದಲು ನಿರ್ಣಯ ಅಂಗೀಕಾರ

ಲಖನೌ: ಅಲಹಾಬಾದ್ ಅನ್ನು ಪ್ರಯಾಗರಾಜ್ ಎಂದೂ ಫೈಜಾಬಾದ್ ಅನ್ನು ಅಯೋಧ್ಯಾ ಎಂದೂ ಬದಲಾಯಿಸಿದ ಬಳಿಕ ಅಲೀಗಡವನ್ನು ಹರಿಗಡ ಎಂದು ಬದಲಾಯಿಸುವ ಬೇಡಿಕೆಯು ಕೇಳಿ ಬಂದಿದೆ.

ಅಲೀಗಡವನ್ನು ಹರಿಗಡ ಎಂದು ಬದಲಾಯಿಸುವ ನಿರ್ಣಯವನ್ನು ಅಲೀಗಡ ಜಿಲ್ಲಾ ಪಂಚಾಯಿತಿ ಮಂಡಳಿಯು ಅಂಗೀಕರಿಸಿದೆ. ಪ್ರಸ್ತಾವವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿರ್ಣಯನ್ನು ಅಂಗೀಕರಿಸುವಾಗ ಜಿಲ್ಲೆಯ ಶಾಸಕರು ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರು ಹಾಜರಿದ್ದರು. ನಿರ್ಣಯವು ಅವಿರೋಧವಾಗಿ ಅಂಗೀಕಾರವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೈನ್‌ಪುರಿಯ ಹೆಸರನ್ನು ಮಾಯನ್ ನಗರ ಎಂದು ಬದಲಾಯಿಸುವ ನಿರ್ಣಯವನ್ನು ಮೈನ್‌ಪುರಿ ಜಿಲ್ಲಾ ಪಂಚಾಯಿತಿ ಅಂಗೀಕರಿಸಿದೆ. ಈ ನಗರವನ್ನು ಮಾಯನ್ ಮುನಿ ಸ್ಥಾಪಿಸಿದ್ದ. ಹಾಗಾಗಿ, ನಗರದ ಹೆಸರು ಮಾಯನ್ ನಗರ ಎಂದಿರುವುದೇ ಸೂಕ್ತ ಎಂದು ಪಂಚಾಯಿತಿ ಹೇಳಿದೆ.

ಅಲೀಗಡದ ಹೆಸರು ಬದಲಾವಣೆಯ ಪ್ರಸ್ತಾವವು 1992ರಲ್ಲಿ ಕಲ್ಯಾಣ್ ಸಿಂಗ್ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಆಗಿದ್ದಾಗಲೇ ಇತ್ತು. ಅಲೀಗಡವನ್ನು ಹರಿಗಡ ಎಂದು ಬದಲಾಯಿಸಬೇಕು ಎಂಬ ಪ್ರಸ್ತಾವವನ್ನು ವಿಶ್ವ ಹಿಂದೂ ಪರಿಷತ್ ಕೂಡ 2015ರಲ್ಲಿ ಅಂಗೀಕರಿಸಿತ್ತು.

‘ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಜನರ ಬಗ್ಗೆ ಕಾಳಜಿ ಏನೂ ಇಲ್ಲ. ಎಲ್ಲ ವಿಚಾರಗಳಲ್ಲಿಯೂ ಸರ್ಕಾರ ವಿಫಲವಾಗಿದೆ. ನಗರಗಳು ಮತ್ತು ಪಟ್ಟಣಗಳ ಹೆಸರು ಬದಲಾವಣೆಯು ಸರ್ಕಾರದ ವೈಫಲ್ಯಗಳನ್ನು ಮುಚ್ಚಿಡುವ ಯತ್ನ ಮಾತ್ರ’ ಎಂದು ವಿರೋಧ ಪಕ್ಷ ಎಸ್‌ಪಿ ಹೇಳಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಅಫ್ಗಾನಿಸ್ತಾನದಲ್ಲಿ ತಾಲಿಬಾನಿಗಳ ಪ್ರಾಬಲ್ಯ ಜೋರಾಗಿದ್ದು, ಕಾಬೂಲ್ ನಗರವನ್ನು ಪ್ರವೇಶಿಸುವಾಗ ಅವರು ಕೋವಿಡ್ ನಿಯಮಾವಳಿಗಳನ್ನು ಪಾಲಿಸಿದ್ದಾರೆ. ಮುಖಕ್ಕೆ ಮಾಸ್ಕ್ ಅಥವಾ ವಸ್ತ್ರಗಳನ್ನು ಧರಿಸಿದ್ದನ್ನು ಸಿಎನ್‌ಎನ್ ಅಂತರರಾಷ್ಟ್ರೀಯ ಸುದ್ದಿಸಂಸ್ಥೆ ಶ್ಲಾಘಿಸಿದೆ ಎಂಬ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿವೆ. ತಾಲಿಬಾನಿಗಳು ತಮ್ಮ ಜವಾಬ್ದಾರಿ ಮೆರೆದಿದ್ದಾರೆ ಎಂಬದಾಗಿ ಸಿಎನ್‌ಎನ್ ವಾಹಿನಿಯಲ್ಲಿ ಪ್ರಸಾರವಾಗಿದೆ ಎನ್ನಲಾದ ಸ್ಕ್ರೀನ್‌ಶಾಟ್‌ಗಳು ವೈರಲ್ ಆಗಿವೆ. ಬಿಜೆಪಿ ಸಂಸದ ವರುಣ್ ಗಾಂಧಿ ಸೇರಿದಂತೆ ಹಲವರು ಈ ಪೋಸ್ಟರ್ ಅನ್ನು ಹಂಚಿಕೊಂಡಿದ್ದಾರೆ.



ಸಿಎನ್‌ಎನ್ ಈ ರೀತಿಯ ಸುದ್ದಿ ಪ್ರಸಾರ ಮಾಡಿಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ಬ್ಯಾಬಿಲಾನ್ ಬಿ ಎಂಬ ವೆಬ್ ಪೋರ್ಟಲ್ ಆಗಸ್ಟ್ 14ರಂದು ವರದಿಯೊಂದನ್ನು ಪ್ರಕಟಿಸಿತ್ತು. ‘ದಾಳಿಯ ಸಮಯದಲ್ಲಿ ಮುಖಗವಸು ಧರಿಸಿದ್ದಕ್ಕಾಗಿ ಸಿಎನ್‌ಎನ್ ಸುದ್ದಿಸಂಸ್ಥೆಯು ತಾಲಿಬಾನ್ ಅನ್ನು ಪ್ರಶಂಸಿಸಿದೆ’ ಎಂಬ ಶೀರ್ಷಿಕೆ ಇತ್ತು. ಕ್ರಿಶ್ಚಿಯನ್ನರು, ರಾಜಕೀಯ ಮತ್ತು ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿಷಯವನ್ನು ಈ ಪೋರ್ಟಲ್ ವಿಡಂಬನಾತ್ಮಕವಾಗಿ ವರದಿ ಮಾಡುತ್ತದೆ. ವೆಬ್‌ಸೈಟ್‌ನಲ್ಲಿ ಈ ಮಾಹಿತಿ ಇದೆ. ಈ ಮೂಲ ಚಿತ್ರ ರಾಯಿಟರ್ಸ್‌ಗೆ ಸೇರಿದ್ದು, ಬಿಬಿಸಿ ಸುದ್ದಿಸಂಸ್ಥೆಯು 2017ರಲ್ಲಿ ಲೇಖನವೊಂದಕ್ಕಾಗಿ ಬಳಸಿಕೊಂಡಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಂದುವರೆದ ತಾಯಿಯ ದುಃಖ

ಬೋಧಿಸತ್ವನ ಮೌನವನ್ನು ಕಂಡು ಮತ್ತಷ್ಟು ಉದ್ವಿಗ್ನಳಾದ ಮಾದ್ರಿದೇವಿ ಅವನನ್ನು ಬಿಟ್ಟು ನಡುಗುತ್ತ ಬೆಳದಿಂಗಳ ರಾತ್ರಿಯಲ್ಲಿ ಮಕ್ಕಳನ್ನು ಹುಡುಕಲು ಹೊರಟಳು. ಮಕ್ಕಳು ಮೊದಲು ಆಟವಾಡುತ್ತಿದ್ದ ಜಮ್ಮುನೇರಿಳೆ ಮರಗಳ ಕೆಳಗೆ ಹೋಗಿ ಮತ್ತೆ ಅಳತೊಡಗಿದಳು, ‘ನೇರಿಳೆ, ವೆದಿಸ, ಸಿಂಧುವಾರಿಕ ಹಾಗೂ ಅನೇಕ ಮರಗಳ ಕೆಳಗೆ ಮಕ್ಕಳು ಕಾಣಿಸುತ್ತಿಲ್ಲ. ಅರಳಿ, ಹಲಸು, ಆಲ, ಬೇಲಹಣ್ಣಿನ ಮರಗಳ ಕೆಳಗೂ ಅವರು ಕಾಣುತ್ತಿಲ್ಲ. ತಂಪಾಗಿ ಹರಿಯುವ ನದಿಯ ತಟದಲ್ಲಿಯೂ ಅವರಿಲ್ಲ. ಅವರು ಸಂತೋಷದಿಂದ ಧರಿಸಿಕೊಳ್ಳುತ್ತಿದ್ದ ನಾನಾ ಪ್ರಕಾರದ ಹೂವಿನ ಗಿಡಗಳು ಇಲ್ಲಿಯೇ ಇವೆ, ಆದರೆ ಅವರಿಲ್ಲ. ಅವರ ಆಟಿಕೆಯ ವಸ್ತುಗಳಾದ ಆನೆ, ಕುದುರೆ, ಎತ್ತುಗಳು ಇಲ್ಲಿಯೇ ಬಿದ್ದಿವೆ, ಆದರೆ ಮಕ್ಕಳು ಹತ್ತಿರದಲ್ಲಿ ಎಲ್ಲಿಯೂ ಇಲ್ಲ’.

ಆಕೆ ನಂತರ ಅಲ್ಲಿಂದ ಹೊರಟು ಕೆಳಗೆ ಬಂದು ಆಶ್ರಮದ ಸುತ್ತಮುತ್ತ ಹುಡುಕತೊಡಗಿದಳು. ‘ಅವರು ಆಟವಾಡುತ್ತಿದ್ದ ಸ್ವರ್ಣಮೃಗಗಳು, ಮೊಲಗಳು, ಕದಲೀ ಮೃಗಗಳು ಇಲ್ಲಿಯೇ ಸುತ್ತಾಡುತ್ತಿವೆ, ಆದರೆ ಮಕ್ಕಳಿಲ್ಲ. ಅವರಿಗೆ ಪ್ರಿಯವಾದ ಹಂಸಗಳು, ಕ್ರೌಂಚಗಳು, ನವಿಲುಗಳು ಮುಖ ಬಾಡಿಸಿಕೊಂಡು ನಿಂತಿವೆ, ಆದರೆ ಮಕ್ಕಳು ಅವುಗಳ ಬಳಿ ಇಲ್ಲ’ ಎಂದು ಕೊರಗಿದಳು. ಆಶ್ರಮದಲ್ಲಿ ಮಕ್ಕಳನ್ನು ಕಾಣದಾದಾಗ ಮಾದ್ರಿದೇವಿ ಆಶ್ರಮದ ಹಿಂದಿದ್ದ ಪುಷ್ಪಿತ ಗಹನವಾದ ಕಾಡಿಗೆ ಬಂದಳು. ‘ಇಲ್ಲಿ ಅವರು ಆಡುತ್ತಿದ್ದ, ಸದಾ ಕಾಲದಲ್ಲಿ ಹೂವುಗಳು ಅರಳಿರುತ್ತಿದ್ದ ವನಸಮೂಹವಿದೆ. ಅವರು ಮೊದಲು ಈಜಾಡುತ್ತಿದ್ದ, ಚಕ್ರವಾಕಗಳು ಕೂಗುತ್ತಿದ್ದ, ಮಂದಾಲಕ, ಕಮಲಗಳಿಂದ ಅಮೃತವಾದ ರಮಣೀಯ ಪುಷ್ಕರಿಣಿಗಳಿವೆ. ಆದರೆ ಮಕ್ಕಳು ಇಲ್ಲಿ ಎಲ್ಲಿಯೂ ಇಲ್ಲ’.

ಎಲ್ಲಿಯೂ ಮಕ್ಕಳು ದೊರಕದಿದ್ದಾಗ ಆಕೆ ಮತ್ತೆ ಬೋಧಿಸತ್ವನ ಬಳಿಗೆ ಓಡಿ ಬಂದಳು. ಆತ ಮೌನದಲ್ಲಿದ್ದರೂ, ಚಿಂತಾಮಗ್ನವಾಗಿರುವುದನ್ನು ಕಂಡು ಕೇಳಿದಳು, ‘ಪ್ರಭೂ, ಇಂದು ನೀವು ಸೌದೆಯನ್ನು ಕತ್ತರಿಸಿಲ್ಲ, ನೀರನ್ನು ಪೂಜೆಗೆ ತಂದು ಇಟ್ಟಿಲ್ಲ. ಬೆಂಕಿಯನ್ನು ಹೊತ್ತಿಸಿಲ್ಲ. ಏನು ಯೋಚನೆ ಮಾಡುತ್ತಿರುವಿರಿ? ಮಕ್ಕಳು ಎಲ್ಲಿಗೆ ಹೋಗಿದ್ದಾರೆಂಬುದು ನಿಮಗೂ ತಿಳಿದಿಲ್ಲವೇ?’.

ಅವಳು ಅಷ್ಟು ಕೇಳಿದರೂ ಬೋಧಿಸತ್ವ ಮೌನವಾಗಿಯೇ ಕುಳಿತಿದ್ದ. ಆತನ ಮೌನದಿಂದಾಗಿ ಆಕೆ ಶೋಕಪೀಡಿತಳಾಗಿ, ಪೆಟ್ಟು ತಿಂದ ಕೋಳಿಯಂತೆ ನಡುಗುತ್ತ ಮೊದಲು ಎಲ್ಲೆಲ್ಲಿ ಹೋಗಿ ನೋಡಿ ಬಂದಿದ್ದಳೋ, ಮತ್ತೆ ಅಲ್ಲೆಡೆಯಲ್ಲಿ ಹೋಗಿ ನೋಡಿ ಬಂದು ಬೋಧಿಸತ್ವನಿಗೆ ಹೇಳಿದಳು, ‘ಸ್ವಾಮಿ, ನನಗೆ ಮಕ್ಕಳು ಎಲ್ಲಿಯೂ ಕಾಣಿಸುತ್ತಿಲ್ಲ. ಅವರು ಸತ್ತು ಹೋದರೆ? ಅವರು ಹೇಗೆ ಸತ್ತರೆಂಬುದನ್ನಾದರೂ ದಯವಿಟ್ಟು ತಿಳಿಸಿ’.

ಇಷ್ಟು ಹೇಳಿದ ಮೇಲೂ ಬೋಧಿಸತ್ವ ಬಾಯಿ ಬಿಡಲಿಲ್ಲ. ಮಕ್ಕಳ ವಿಯೋಗದ ಶೋಕದಿಂದ ಬಳಲಿ ಹೋದ ಮಾದ್ರಿದೇವಿ, ಹುಚ್ಚಿಯ ಹಾಗೆ, ವಾಯುವೇಗದಲ್ಲಿ ಆಶ್ರಮದ ಎಲ್ಲ ಭಾಗಗಳಲ್ಲಿ ರಾತ್ರಿಯೆಲ್ಲ ಸುತ್ತಾಡಿದಳು. ಆಕೆಗೆ ಒಂದೇ ರಾತ್ರಿಯಲ್ಲಿ ಸುತ್ತಾಡಬಹುದಾದ ಜಾಗ ಹದಿನೈದು ಯೋಜನಗಳಷ್ಟು ವಿಸ್ತಾರವಾದಂತೆ ಭಾಸವಾಯಿತು. ರಾತ್ರಿ ಕಳೆಯಿತು. ಅರುಣೋದಯವಾಯಿತು. ಆಕೆ ಈಗ ಬೋಧಿಸತ್ವನ ಮುಂದೆ ಧೃಡ ತೀರ್ಮಾನ ಮಾಡಿ ಕುಳಿತುಕೊಂಡಳು. ❖

ದಿನ ಭವಿಷ್ಯ

ಬುಧವಾರ ಆಗಸ್ಟ್ 18, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮಖಾ ಏಕಾದಶಿ ಗಂ. 44-14 (ರಾ. 11-56) ಬುಧವಾರ ನಿತ್ಯ ನಕ್ಷತ್ರ ಮೂಲ ಗಂ. 44-31 (ರಾ. 12-03) ವಿಷ್ಕಂಭ ನಾಮ ಯೋಗ ಗಂ. 39-27 ವಣಿಜ ಕರಣ ಗಂ. 17-03 ವಿಷ ಗಂ. 40-45 ಅಮೃತ ಗಂ. 29-41: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-11 ಸೂರ್ಯಾಸ್ತ: 6-36 ಅದೃಷ್ಟ ಸಂಖ್ಯೆ 7

ಮೇಷ: ಯುವತಿಯರಿಗೆ ಉತ್ತಮ ಅವಕಾಶಗಳು ತೆರೆದುಕೊಳ್ಳುವ ಸಂಭವ. ನೌಕರಸ್ಥ ಮಹಿಳೆಯರು ಕಚೇರಿಗಳಲ್ಲಿ ಕಿರಿಕಿರಿಯನ್ನು ಎದುರಿಸಬೇಕಾದೀತು. ಯಂತ್ರೋಪಕರಣಗಳಲ್ಲಿ ತೊಂದರೆ ಕಂಡುಬರುವ ಸಾಧ್ಯತೆ ಇದೆ.

ವೃಷಭ: ಆತ್ಮೀಯರ ಸಲಹೆಯಿಂದಾಗಿ ಎದುರಾದ ವಿಪತ್ತಿನಿಂದ ಪಾರಾಗಲಿದ್ದೀರಿ. ಮನೆಯ ತುಂಬ ಹರ್ಷದ ಹೊನಲು ಹರಿಯುವ ಲಕ್ಷಣ. ಸಂಕಲ್ಪಿಸಿದ ಕಾರ್ಯಗಳಲ್ಲಿ ಯಶಸ್ಸು. ದೇವತಾರಾಧನೆ ಮಾಡಿ.

ಮಿಥುನ: ಔಷಧ ಹತ್ತಿ ಮತ್ತು ಬಟ್ಟೆ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಹೆಚ್ಚಳ. ಲೇವಾದೇವಿ ವ್ಯವಹಾರದಲ್ಲಿ ತೊಡಗಿದವರಿಗೆ ಆದಾಯದಲ್ಲಿ ಹೆಚ್ಚಳ. ಆರೋಗ್ಯದಲ್ಲಿ ಕೊಂಚ ಮಟ್ಟಿನ ತೊಂದರೆಗಳನ್ನು ಎದುರಿಸಬೇಕಾದೀತು.

ಕರ್ಕಾಟಕ: ಪ್ರವಾಸೋದ್ಯಮ, ಸಂಚಾರ ವ್ಯವಸ್ಥೆಗಳಲ್ಲಿ ತೊಡಗಿಕೊಂಡವರಿಗೆ ಉತ್ತಮ ಅವಕಾಶ. ಕಲಾವಿದರು, ಸಾಹಿತಿಗಳಿಗೆ ಸನ್ಮಾನ ಸಮಾರಂಭಗಳು ಏರ್ಪಡುವ ಸಾಧ್ಯತೆ. ಅನಿರೀಕ್ಷಿತ ಮೂಲಗಳಿಂದ ಆದಾಯ ಬರಲಿದೆ.

ಸಿಂಹ: ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಪದೋನ್ನತಿ ಪ್ರಾಪ್ತವಾಗಲಿದೆ. ಅತ್ಯಂತ ಸಂತೋಷದಾಯಕ ದಿನವಾಗಿ ಪರಿಣಮಿಸಲಿದೆ. ಯೋಜಿತ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ.

ಕನ್ಯಾ: ವ್ಯಸಾಯದಲ್ಲಿ ತೊಡಗಿರುವವರಿಗೆ ಹಣಕಾಸಿನ ಮುಗ್ಗಟ್ಟು. ಬಂಧುಗಳ ಮಧ್ಯಪ್ರವೇಶದಿಂದಾಗಿ ಸಮಸ್ಯೆಗಳು ಪರಿಹಾರವಾಗಲಿವೆ. ಪ್ರೇಮ ಪ್ರಕರಣಗಳಲ್ಲಿ ಯಶಸ್ಸು. ಮಂಗಳಕಾರ್ಯಗಳಲ್ಲಿ ಭಾಗಿಯಾಗುವ ಸಾಧ್ಯತೆ.

ತುಲಾ: ಆಸ್ತಿ ಖರೀದಿ ಮಾಡುವ ಸಾಧ್ಯತೆ. ಹಣಕಾಸಿನ ಅನುಕೂಲದೊಂದಿಗೆ ಉನ್ನತ ಸ್ಥಾನಮಾನ ಲಭ್ಯವಾಗಲಿವೆ. ನಿಮ್ಮ ಕುಯುಕ್ತಿಯು ಬಯಲುಗೊಂಡು ಮಾನಹಾನಿಯನ್ನು ಎದುರಿಸಬೇಕಾದ ಸಂದರ್ಭಗಳು ಎದುರಾಗಲಿವೆ.

ವೃಶ್ಚಿಕ: ವ್ಯವಹಾರದಲ್ಲಿ ಪ್ರಗತಿ. ಉನ್ನತ ಶಿಕ್ಷಣದ ಅವಕಾಶಗಳು ಕೈಗೂಡಲಿದೆ. ವಿವಾದಗಳಲ್ಲಿ ಯಶಸ್ಸು. ಶೃಂಗಾರ ಉಪಕರಣ, ಯಂತ್ರೋಪಕರಣಗಳ ವ್ಯಾಪಾರದಲ್ಲಿ ಅಭಿವೃದ್ಧಿಯೊಂದಿಗೆ ಉತ್ತಮ ಲಾಭ.

ಧನು: ವಾದವಿವಾದಗಳಿಂದಾಗಿ ನಿರಾಸಕ್ತಿ ಮೂಡುವ ಸಾಧ್ಯತೆ. ಶತ್ರುಬಾಧೆಯಿಂದ ಮುಕ್ತರಾಗಿ ನೆಮ್ಮದಿ. ವ್ಯವಹಾರದಲ್ಲಿ ಕಾರ್ಮಿಕರ ಕೊರತೆಯನ್ನು ಎದುರಿಸಿ ನಷ್ಟ ಅನುಭವಿಸಬೇಕಾದೀತು. ಆರೋಗ್ಯದಲ್ಲಿ ಸ್ಥಿರತೆ.

ಮಕರ: ಕಚೇರಿ ವ್ಯವಹಾರಗಳಲ್ಲಿ ಯಶಸ್ಸು. ವ್ಯವಹಾರ ಸಂಪರ್ಕದಿಂದ ಅಭಿವೃದ್ಧಿ. ಯುವಕರಿಗೆ ಭಾಗ್ಯೋದಯವಾಗಲಿದೆ. ವ್ಯಾಪಾರ ಪ್ರತಿನಿಧಿಗಳಿಗೆ ಲೆಕ್ಕ ಪರಿಶೋಧಕರಿಗೆ ಬಿಡುವಿಲ್ಲದ ಕೆಲಸ. ಅತಿಯಾದ ದೇಹಾಲಸ್ಯ.

ಕುಂಭ: ಆರೋಗ್ಯದಲ್ಲಿ ಸುಧಾರಣೆ. ರಾಜಿ ಸಂಧಾನಗಳು ಸಫಲಗೊಂಡು ಪ್ರತಿಷ್ಠಿತ ಸ್ಥಾನವೊಂದನ್ನು ಅಲಂಕರಿಸುವ ಸಾಧ್ಯತೆ. ಶತ್ರುಗಳು ಸೃಷ್ಟಿಸುವ ಸಂಚುಗಳಲ್ಲಿ ಸಿಕ್ಕಿಕೊಳ್ಳದಂತೆ ಎಚ್ಚರಿಕೆ ಅಗತ್ಯ.

ಮೀನ: ನೌಕರಿಯಲ್ಲಿರುವವರಿಗೆ ಬೇಸರವಾಗುವ ಸಾಧ್ಯತೆ. ಮನಸ್ಸಿಗೆ ಅಹಿತಕರವೆನಿಸುವ ಸುದ್ದಿಯೊಂದು ಕೇಳಿಬರುವ ಸಾಧ್ಯತೆ. ದ್ರವ್ಯ ಸಂಗ್ರಹ ಮಾಡುವ ಯೋಗ ಕಂಡುಬರುತ್ತಿದೆ. ಮನೆಯವರ ವಿಚಾರದಲ್ಲಿ ಕಾಳಜಿ ಅಗತ್ಯ.

ನಿಮ್ಮ ಜನ್ಮದಿನ 18-ಆಗಸ್ಟ್: ಇಂದು ಅತ್ಯಂತ ಶುಭದಾಯಕ. ಆರ್ಥಿಕವಾಗಿ ಸಬಲರಾದ ನಿಮ್ಮ ಅತಿಕ್ರಮಣ ಮನೋಭಾವದಿಂದಾಗಿ ವಿರೋಧಿಗಳ ಸಂಖ್ಯೆ ಹೆಚ್ಚಾಗಲಿದೆ. ಸಂಬಂಧಗಳು ಹಳಸುವ ಸಾಧ್ಯತೆ. ಆರ್ಥಿಕ ಮತ್ತು ರಾಜಕೀಯದಲ್ಲಿ ಮುನ್ನಡೆ. ಸಾಮಾಜಿಕ ಗೌರವಗಳಿಗೆ ಕುಂದುಂಟಾಗುವ ಸಾಧ್ಯತೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಉತ್ತಮ ಸಾಧನೆ.

ಪದಬಂಧ 4692


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಾವ ಅಥವಾ ಮೈದುನನ ಹೆಂಡತಿ (4)
3.ತನ್ನ ತರುವಾಯ ಹುಟ್ಟಿದವ! (3)
4.ಊರಿನ ಕಾವಲುಗಾರ (4)
6.ಪರ್ವತದಲ್ಲಿರುವ ಸಂಕ್ರಮಣ ಕಾಲ (2)
7.ಹರಸುತಲಿದ್ದಾಗ ಕಾಣಿಸಿದ ಮಗ (2)
8.ಈತ ಅಭಿನಯಿಸುವವನು (2)
9. ತಪಸ್ವಿ ಇಲ್ಲಿದ್ದಾನೆ (2)
10.ಗೋಡೆಯಲ್ಲಿ ಕೊರೆಯುವ ರಂಧ್ರ (2)
11.ಮಕ್ಷಿಕ ಇಲ್ಲಿ ಕಾಣುತ್ತಿದೆ (2)
13.ತಿರುಗಿದಾಗ ಆದ ಕಳವಳ! (4)
15.ಈತ ದುಡ್ಡಿಲ್ಲದವನು (3)
16.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ

1.ಕಾಂತಿ ಅಥವಾ ಹೊಳಪು (3)
2.ತಿರುವು ಮುರುವಾದ ಮೊಟ್ಟೆ (2)
3.ಬೆಂಕಿಯನ್ನು ಆರಿಸುವ ಸಿಬ್ಬಂದಿ (7)
5.ಬೆಳ್ಳಿ ಹಬ್ಬವಿದು (7)
6.ಪರದಾಟದಲ್ಲಿ ಗಾಳಿಪಟ ಹುಡುಕಿ! (2)
9.ಹಂಗನ್ನು ಹೀಗೂ ಹೇಳುವರು (2)
12.ಬರವಿದ್ದಾಗ ದಿಟ್ಟಿಸಿ ನೋಡಿದ ಆಕಾಶ (3)
14.ಕತ್ತಲು ಹೀಗೆ ಬಂದಿದೆ (2)



4691ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗುಣಲಬ್ಧ 2.ಸನ್ಮತಿ 4.ಮಸ್ತಕ 6.ಉಪಾಯ 7.ಕಾಲಹರಣ 10.ಸಾರಣೆ 11.ಮಲ್ಲಿಗೆ 13.ನಗರ 14.ಅಹವಾಲು

ಮೇಲಿಂದ ಕೆಳಕ್ಕೆ: 1.ಗುಲಾಮ 2.ಸಮಯ 3.ತಿಳಿಗೇಡಿ 5.ಕಯಕಾ 6.ಉದಾಹರಣೆ 8.ಣರಮ 9.ಉಪಮಾನ 10.ಸಾವಿರ 12.ಗೆದ್ದಲು

ಸುಡೊಕು 5078

					7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5077 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಚೆನ್ನೈ: 49 ಸ್ಥಳಗಳಲ್ಲಿ 30 ನಿಮಿಷ ಉಚಿತ ವೈಫೈ

ಚೆನ್ನೈ: ಚೆನ್ನೈ ಮಹಾನಗರದ ದಕ್ಷಿಣ ಭಾಗದ ಸ್ಮಾರ್ಟ್ ಫೋನ್ ಬಳಕೆದಾರರು ಇಲ್ಲಿನ 49 ಕಡೆಗಳಲ್ಲಿ 30 ನಿಮಿಷದವರೆಗೆ ಉಚಿತ ವೈಫೈ ಸೌಲಭ್ಯ ಪಡೆಯಬಹುದಾಗಿದೆ.

ಸ್ಮಾರ್ಟ್‌ಸಿಟಿ ಯೋಜನೆಯಡಿ ಗ್ರೇಟರ್ ಚೆನ್ನೈ ಕಾರ್ಪೊರೇಷನ್ (ಜಿಸಿಸಿ) ಈ ಸಲುವಾಗಿ 49 ಸ್ಥಳಗಳಲ್ಲಿ ಸ್ಮಾರ್ಟ್ ಪೋಲ್‌ಗಳನ್ನು ಅಳವಡಿಸಿದೆ.

ಉಚಿತ ವೈ-ಫೈ ಸಂಪರ್ಕ ಒದಗಿಸುವ ಸ್ಥಳಗಳ ಪಟ್ಟಿಯನ್ನು ಜಿಸಿಸಿ ಮಂಗಳವಾರ ಬಿಡುಗಡೆ ಮಾಡಿದೆ. ಈ ಸೌಲಭ್ಯ ಬಳಸಲು ತಮ್ಮ ಫೋನ್‌ನಿಂದ ನೋಂದಾಯಿಸಿಕೊಂಡು, ಓಟಿಪಿ ಪಡೆಯಬೇಕು ಎಂದು ಜಿಸಿಸಿ ಹೇಳಿದೆ.

ಕೋವಿಡ್: 28 ಲಕ್ಷಕ್ಕೂ ಹೆಚ್ಚು ಜನರಿಗೆ ಪರೀಕ್ಷೆ– ಆರೋಗ್ಯ ಸಚಿವ ಕೆ. ಸುಧಾಕರ್

ಗುಣವಾದವರಿಗೆ ಕ್ಷಯರೋಗ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್‌ನಿಂದ ಗುಣಮುಖರಾಗಿರುವ 28 ಲಕ್ಷಕ್ಕೂ ಹೆಚ್ಚು ಜನರನ್ನು ಕ್ಷಯ ರೋಗ ಪರೀಕ್ಷೆಗೆ ಒಳಪಡಿಸಲಾಗುವುದು' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಇದೇ 31ರವರೆಗೆ ನಡೆಯಲಿರುವ ಕ್ಷಯ ರೋಗ ಪತ್ತೆ ಆಂದೋಲನಕ್ಕೆ ವಿಧಾನಸೌಧದಲ್ಲಿ ಮಂಗಳವಾರ ಚಾಲನೆ ನೀಡಿ ಮಾತನಾಡಿದ ಅವರು, 'ಜನರು ಸ್ವಯಂಪ್ರೇರಿತರಾಗಿ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ಮನವಿ ಮಾಡಿದರು.

'ಕೋವಿಡ್ ಶ್ವಾಸಕೋಶಕ್ಕೆ ಹೆಚ್ಚು ಹಾನಿ ಉಂಟು ಮಾಡುತ್ತದೆ. ಕ್ಷಯ ರೋಗ ಕೂಡ ಶ್ವಾಸಕೋಶಕ್ಕೆ ಹಾನಿ ಮಾಡುತ್ತದೆ. ಕ್ಷಯ ನಿಯಂತ್ರಣಕ್ಕಾಗಿ ಈ ಕ್ರಮ ವಹಿಸಲಾಗಿದ್ದು, ಕೋವಿಡ್‌ನಿಂದ ಗುಣಮುಖರಾದವರ ಪೈಕಿ, 24 ಮಂದಿಯಲ್ಲಿ ಕ್ಷಯ ರೋಗ ಪತ್ತೆಯಾಗಿದೆ' ಎಂದರು.

'2017ರಿಂದ ಕ್ಷಯ ರೋಗ ಪತ್ತೆ ಆರಂಭಿಸಿ 75 ಲಕ್ಷ ಜನರನ್ನು ಗುರುತಿಸಿ, ಶೇ 88ರಷ್ಟು ಜನರಿಗೆ ಪರೀಕ್ಷೆ ಮಾಡಲಾಗಿದೆ. ಈ ಪೈಕಿ ಶೇ 3.9ರಷ್ಟು ಜನರಲ್ಲಿ ರೋಗ ಪತ್ತೆಯಾಗಿದೆ. ಕೋವಿಡ್‌ನಿಂದ 2019 ಮತ್ತು 2020ರಲ್ಲಿ ಪರೀಕ್ಷೆ ಕಡಿಮೆಯಾಗಿದೆ. 2021ರಲ್ಲಿ 1.25 ಕೋಟಿ ಜನರನ್ನು ಪರೀಕ್ಷೆಗೆ ಒಳಪಡಿಸಲು ಗುರಿ ನಿಗದಿಪಡಿಸಲಾಗಿದೆ. ಈಗಾಗಲೇ 79,938 ಜನರನ್ನು ತಪಾಸಣೆ ನಡೆಸಲಾಗಿದ್ದು, 2,714 ಜನರಲ್ಲಿ ಕ್ಷಯ ಪತ್ತೆಯಾಗಿದೆ' ಎಂದರು.

ಲಸಿಕೆಗೆ ಮನವಿ: '18 ವರ್ಷ ದಾಟಿದ ಎಲ್ಲರಿಗೂ ಡಿಸೆಂಬರ್ ಒಳಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಕೇಂದ್ರ ಸಚಿವರೊಂದಿಗೆ ಸಮಾಲೋಚಿಸಿ ಹೆಚ್ಚು ಲಸಿಕೆ ಪೂರೈಸುವಂತೆ ಮನವಿ ಮಾಡಲಾಗುವುದು. ಲಸಿಕೆ ಉತ್ಪಾದಕ ಕಂಪನಿಗಳು ಶೇ 25ರಷ್ಟನ್ನು ಖಾಸಗಿ ವಲಯಕ್ಕೆ ನೀಡಬಹುದು. ಸಿಎಸ್‌ಆರ್ ನಿಧಿಯಡಿ ಲಸಿಕೆ ಖರೀದಿಸಿ ಸರ್ಕಾರಕ್ಕೆ ನೀಡುವಂತೆ ದೊಡ್ಡ ದೊಡ್ಡ ಕಂಪನಿಗಳಲ್ಲಿ ಮನವಿ ಮಾಡಲಾಗುತ್ತಿದೆ. ಇದರಿಂದ ಲಸಿಕೆ ಲಭ್ಯವಾಗಿ ವೇಗವಾಗಿ ನೀಡಲು ಸಾಧ್ಯವಾಗಲಿದೆ' ಎಂದರು.

ಮಕ್ಕಳ ತಪಾಸಣೆಗೆ 'ಆರೋಗ್ಯ ನಂದನ'



ಸುಧಾಕರ್

'ರಾಜ್ಯದಲ್ಲಿರುವ ಸುಮಾರು 1.50 ಕೋಟಿ ಮಕ್ಕಳ ಆರೋಗ್ಯ ತಪಾಸಣೆಗೆ ವಿನೂತನ ಕಾರ್ಯಕ್ರಮ 'ಆರೋಗ್ಯ ನಂದನ'ಕ್ಕೆ ಮುಖ್ಯಮಂತ್ರಿ ಶೀಘ್ರ ಚಾಲನೆ ನೀಡಲಿದ್ದಾರೆ' ಎಂದು ಸುಧಾಕರ್ ತಿಳಿಸಿದರು.

'ರೋಗ ನಿರೋಧಕ ಶಕ್ತಿ ಕಡಿಮೆ ಇರುವ ಮಕ್ಕಳನ್ನು ಗುರುತಿಸಿ, ಪೌಷ್ಟಿಕ ಆಹಾರವನ್ನು ಈ ಯೋಜನೆಯಡಿ ನೀಡಲಾಗುವುದು. ಕೋವಿಡ್ ಸಂಭವನೀಯ ಮೂರನೇ ಅಲೆ ಮಕ್ಕಳ ಮೇಲೆ ಪರಿಣಾಮ ಬೀರಲಿದೆ ಎಂಬ ಅಭಿಪ್ರಾಯ ಹಿನ್ನೆಲೆಯಲ್ಲಿ ಹೊಸ ಕಾರ್ಯಕ್ರಮ ರೂಪಿಸಲಾಗಿದೆ. ಆರೋಗ್ಯ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಂಟಿಯಾಗಿ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಿದೆ' ಎಂದರು.

ರಾಜ್ಯ: 7 ದಿನಗಳಲ್ಲಿ ಗರಿಷ್ಠ ಮರಣ

ರಾಜ್ಯದಲ್ಲಿ ಕೋವಿಡ್ ಪೀಡಿತರಲ್ಲಿ 32 ಮಂದಿ ಮೃತಪಟ್ಟಿರುವುದು ಮಂಗಳವಾರ ದೃಢಪಟ್ಟಿದೆ. ಇವು ಏಳು ದಿನಗಳಲ್ಲಿ ವರದಿಯಾದ ಗರಿಷ್ಠ ಮರಣ ಪ್ರಕರಣಗಳಾಗಿವೆ.

ಆ.11ರಂದು 33 ಮಂದಿ ಮೃತಪಟ್ಟಿದ್ದರು. ಬಳಿಕ ಈ ಸಂಖ್ಯೆ ಇಳಿಕೆ ಕಂಡಿತ್ತು. 14 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 10, ದಕ್ಷಿಣ ಕನ್ನಡದಲ್ಲಿ 5, ಕೋಲಾರ, ಹಾಸನ, ಕೊಡಗು, ಮೈಸೂರು ಹಾಗೂ ಶಿವಮೊಗ್ಗದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉತ್ತರ ಕನ್ನಡ ಸೇರಿದಂತೆ ಏಳು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.46 ರಷ್ಟು ವರದಿಯಾಗಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 37,039ಕ್ಕೆ ಏರಿಕೆ ಕಂಡಿದೆ.

ರಾಜ್ಯದಲ್ಲಿ ಹೊಸದಾಗಿ 1,298 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.31 ಲಕ್ಷ ದಾಟಿದೆ. ಒಂದು ದಿನದಲ್ಲಿ 1.28 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.01ರಷ್ಟು ವರದಿಯಾಗಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 12 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ರಾಯಚೂರು, ಬೀದರ್ ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 288, ಮೈಸೂರಿನಲ್ಲಿ 88 ಹಾಗೂ ಕೊಡಗಿನಲ್ಲಿ 37, ಬೆಂಗಳೂರಿನಲ್ಲಿ 340 ಹಾಗೂ ಉಡುಪಿಯಲ್ಲಿ 122 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ. ಸೋಂಕಿತರಲ್ಲಿ 1,833 ಮಂದಿ ಚೇತರಿಸಿಕೊಂಡಿದ್ದಾರೆ.

ಗುಣಮುಖರಾದವರ ಒಟ್ಟು ಸಂಖ್ಯೆ 28.73 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 21,481ಕ್ಕೆ ಇಳಿಕೆಯಾಗಿದೆ.

154 ದಿನಗಳಲ್ಲೇ ಅತಿ ಕಡಿಮೆ ಪ್ರಕರಣಗಳು

ನವದೆಹಲಿ (ಪಿಟಿಐ): ದೇಶದಲ್ಲಿ ಮಂಗಳವಾರ 24 ಗಂಟೆಗಳ ಅವಧಿಯಲ್ಲಿ ಕೋವಿಡ್–19 ದೃಢಪಟ್ಟ 25,166 ಹೊಸ ಪ್ರಕರಣಗಳು ದಾಖಲಾಗಿವೆ. ಇದು ಕಳೆದ 154 ದಿನಗಳಲ್ಲೇ ಕನಿಷ್ಠ ಪ್ರಕರಣಗಳಾಗಿವೆ. ಇದೇ ಅವಧಿಯಲ್ಲಿ 36,830 ಮಂದಿ ಗುಣಮುಖರಾಗಿದ್ದು, 437 ಜನ ಸಾವಿಗೀಡಾಗಿದ್ದಾರೆ.

ಪ್ರಸ್ತುತ ಸಕ್ರಿಯ ಪ್ರಕರಣಗಳ ಸಂಖ್ಯೆ 146 ದಿನಗಳ ಕನಿಷ್ಠ, 3,69,846 ತಲುಪಿದೆ ಹಾಗೂ ಚೇತರಿಕೆ ಪ್ರಮಾಣ ಶೇ.97.51 ರಷ್ಟಿದೆ.

ಸೆ.8ರೊಳಗೆ ಪ್ರಗತಿ ವರದಿ ಸಲ್ಲಿಕೆಗೆ ಹೈಕೋರ್ಟ್ ಸೂಚನೆ

ಭೂ ಕಬಳಿಕೆಗೆ ನಕಲಿ ದಾವೆ: ವಕೀಲರ ಪರಿಷತ್ತು, ಸಂಘವೂ ಪಾರ್ಟಿ

ಬೆಂಗಳೂರು: ವಾರಸುದಾರರು ಉಪಯೋಗಿಸದ ಖಾಲಿ ಜಾಗವನ್ನು ಕೊಳ್ಳೆ ಹೊಡೆಯಲು ನಕಲಿ ಕಕ್ಷಿದಾರ–ಪ್ರತಿವಾದಿಗಳನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಲಪಟಾಯಿಸುತ್ತಿದ್ದ ಪ್ರಕರಣವನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಾಗಿ ಪರಿಗಣಿಸಿರುವ ಹೈಕೋರ್ಟ್, ಈ ಪ್ರಕರಣದಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಮತ್ತು ಬೆಂಗಳೂರು ವಕೀಲರ ಸಂಘವನ್ನು ಪಾರ್ಟಿಗಳಾಗಿ ಒಳಗೊಳ್ಳುವಂತೆ ನಿರ್ದೇಶನ ನೀಡಿದೆ.

ಮೋಸದ ಮಾರ್ಗದಿಂದ ಆಸ್ತಿ ಹಕ್ಕಿನ ರಾಜಿ ಡಿಕ್ರಿ ಪಡೆಯುತ್ತಿದ್ದ ಬಗ್ಗೆ ತನಿಖೆ ನಡೆಸಲು ಸಿಐಡಿಗೆ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕ ಸದಸ್ಯ ಪೀಠ ಆದೇಶ ನೀಡಿತ್ತು. ತನಿಖೆಯಲ್ಲಿ ಈ ರೀತಿಯ 100ಕ್ಕೂ ಹೆಚ್ಚು ಪ್ರಕರಣಗಳನ್ನು ಸಿಐಡಿ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಪ್ರಕರಣದ ಅಗಾಧತೆ ಪರಿಗಣಿಸಿದ ಏಕ ಸದಸ್ಯ ಪೀಠ, ಅರ್ಜಿಯನ್ನು ಪಿಐಎಲ್(ಸಾರ್ವಜನಿಕ ಹಿತಾಸಕ್ತಿ ಅರ್ಜಿ) ಆಗಿ ಪರಿವರ್ತಿಸಿ ವಿಭಾಗೀಯ ಪೀಠಕ್ಕೆ ಸಲ್ಲಿಸುವಂತೆ ಸೂಚಿಸಿದ್ದರು.

ಪಿಐಎಲ್ ವಿಚಾರಣೆ ಆರಂಭಿಸಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಸಿಐಡಿ ಸಲ್ಲಿಸಿದ ವರದಿ ಪರಿಶೀಲಿಸಿತು. ಸಿಐಡಿ ಕೇಳುತ್ತಿರುವ ಎಲ್ಲಾ ದಾಖಲೆಗಳನ್ನು ಕಂದಾಯ ಇಲಾಖೆ, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ವಕೀಲರ ಸಂಸ್ಥೆಗಳ ಕಚೇರಿಗಳು ಒದಗಿಸಬೇಕು ಎಂದು ನಿರ್ದೇಶನ ನೀಡಿತು.

'ಸಿಐಡಿ ತನಿಖಾ ವರದಿಯನ್ನು ನೋಡಿದರೆ ವಕೀಲರು ಮತ್ತು ನೋಟರಿಗಳು ಭಾಗಿಯಾಗಿದ್ದಾರೆ ಎಂಬುದನ್ನು ತಳ್ಳಿಹಾಕಲು ಆಗುವುದಿಲ್ಲ. ಈ ರೀತಿಯ ವಂಚನೆ ಮತ್ತು ಕಿಡಿಗೇಡಿತನ ತಡೆಗಟ್ಟಲು ವಕೀಲರ ಪರಿಷತ್ತಿನ ಪಾತ್ರ ಅಗತ್ಯವಿದೆ' ಎಂದು ತಿಳಿಸಿದ ಪೀಠ, ವಕೀಲರ ಸಂಸ್ಥೆಗಳನ್ನೂ ಅರ್ಜಿಯಲ್ಲಿ ಒಳಗೊಳ್ಳುವಂತೆ ಅರ್ಜಿದಾರರಿಗೆ ಸೂಚನೆ ನೀಡಿತು.

ಈ ಪ್ರಕರಣದಲ್ಲಿ ಪೀಠಕ್ಕೆ ಸಲಹೆ ನೀಡಲು ವಕೀಲ ಶ್ರೀಧರ ಪ್ರಭು ಅವರನ್ನು ಅಮಿಕಸ್ ಕ್ಯೂರಿ ಆಗಿ ನೇಮಿಸಿತು. ತನಿಖೆಯ ಮುಂದಿನ ಪ್ರಗತಿ ವರದಿಯನ್ನು ಸೆ.8ರೊಳಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು ಎಂದು ತಿಳಿಸಿ, ವಿಚಾರಣೆಯನ್ನು ಸೆ. 13ಕ್ಕೆ ಮುಂದೂಡಿತು.

ಯಶವಂತಪುರ ಮತ್ತು ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳನ್ನು ಒಗ್ಗೂಡಿಸುವಂತೆ 1ನೇ ಎಸಿಎಂಎಂ ನ್ಯಾಯಾಲಯದ ಮುಂದೆಯೂ ಸಿಐಡಿ ಅರ್ಜಿ ಸಲ್ಲಿಸಿದೆ. ಈ ಅರ್ಜಿಯನ್ನು ಕೂಡಲೇ ವಿಚಾರಣೆಗೆ ತೆಗೆದುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಎಸಿಎಂಎಂ ನ್ಯಾಯಾಲಯಕ್ಕೂ ವಿಭಾಗೀಯ ಪೀಠ ಸೂಚನೆ ನೀಡಿತು.

ವಾರಸುದಾರರು ಉಪಯೋಗಿಸದ ಖಾಲಿ ಜಾಗವನ್ನು ಕೊಳ್ಳೆ ಹೊಡೆಯಲು ನಕಲಿ ಕಕ್ಷಿದಾರ–ಪ್ರತಿವಾದಿಗಳನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಆಸ್ತಿ ಲಪಟಾಯಿಸುತ್ತಿದ್ದ ಜಾಲದ ಬಗ್ಗೆ ಏಕ ಸದಸ್ಯ ಪೀಠದ ಮುಂದೆ ಷಾ ಹರಿಲಾಲ್ ಭಿಕಾಬಾಯಿ ಅಂಡ್ ಕಂಪನಿ ಅರ್ಜಿ ಸಲ್ಲಿಸಿತ್ತು. ಏಕ ಸದಸ್ಯ ಪೀಠ ತನಿಖೆಯನ್ನು ಸಿಐಡಿಗೆ ವಹಿಸಿದಬಳಿಕನಾಲ್ವರುವಕೀಲರನ್ನುಪೊಲೀಸರು ಬಂಧಿಸಿದ್ದು, ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಕುಗ್ಗಿದ ಮೋದಿ ಜನಪ್ರಿಯತೆ

ನವದೆಹಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪ್ರಿಯತೆಯು ಸ್ವಲ್ಪಮಟ್ಟಿಗೆ ಕುಗ್ಗಿದ್ದು, 'ಮುಂದಿನ ಪ್ರಧಾನಿ' ಕುರಿತು ಇಂಡಿಯಾ ಟುಡೆ ನಡೆಸಿದ್ದ ಸಮೀಕ್ಷೆಯಲ್ಲಿ ಶೇ 24ರಷ್ಟು ಜನರಷ್ಟೇ ಮೋದಿ ಪರ ಒಲವು ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷ ಆಗಸ್ಟ್ ತಿಂಗಳು ಇದೇ ವಿಷಯ ಕುರಿತು ನಡೆಸಿದ್ದ ಸಮೀಕ್ಷೆಯಲ್ಲಿ ಶೇ 66ರಷ್ಟು ಜನರು ಮೋದಿ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಹೊಸ ಸಮೀಕ್ಷೆಯ ಫಲಿತಾಂಶದ ಪ್ರಕಾರ, ಶೇ 11ರಷ್ಟು ಜನರು ಮುಂದಿನ ಪ್ರಧಾನಿಯಾಗಿ ಯೋಗಿ ಆದಿತ್ಯನಾಥ ಅವರನ್ನು ಕಾಣಲು ಬಯಸಿದ್ದಾರೆ. ಇದೇ ತಿಂಗಳು ನಡೆಸಿದ ಸಮೀಕ್ಷೆಯ ಪ್ರಕಾರ, ಮೋದಿ ಜನಪ್ರಿಯತೆಯು ಕುಗ್ಗಿದ್ದರೂ ಈಗ ಲೋಕಸಭೆಗೆ ಚುನಾವಣೆ ನಡೆದರೂ ಬಿಜೆಪಿಯು ಸುಮಾರು 298 ಸ್ಥಾನ ಗೆಲ್ಲುವ ಮೂಲಕ ಸ್ಪಷ್ಟ ಬಹುಮತ ಪಡೆಯುವ ಸಂಭವವಿದೆ.

ಚಾಂಡಿ ವಿರುದ್ಧ ತನಿಖೆ

ನವದೆಹಲಿ (ಪಿಟಿಐ): ಬಹು ಕೋಟಿ ಸೌರ ಫಲಕ ಹಗರಣದ ಪ್ರಮುಖ ಮಹಿಳಾ ಆರೋಪಿ ಯೊಬ್ಬರು ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಮತ್ತಿತರರ ವಿರುದ್ಧ ದಾಖಲಿಸಿರುವ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸಿಬಿಐ ತನಿಖೆಗೆ ಕೈಗೆತ್ತಿಕೊಂಡಿದೆ.

ಸಾಹಸ ಚಿತ್ರೀಕರಣ: ಬಿಗಿ ಮಾರ್ಗಸೂಚಿ

ಬೆಂಗಳೂರು: ಚಲನಚಿತ್ರ ಚಿತ್ರೀಕರಣದ ವೇಳೆ ಅವಘಡಗಳು ಸಂಭವಿಸುವುದನ್ನು ತಪ್ಪಿಸುವ ಸಲುವಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಾರ್ಗಸೂಚಿ ರೂಪಿಸಿದೆ.

ಇತ್ತೀಚೆಗೆ ರಾಮನಗರ ಸಮೀಪ ಜೋಗರಪಾಳ್ಯದಲ್ಲಿ 'ಲವ್‌ಯೂ ರಚ್ಚು' ಚಿತ್ರೀಕರಣದ ವೇಳೆ ಸಾಹಸ ಕಲಾವಿದ ವಿವೇಕ್ ಮೃತಪಟ್ಟ ಘಟನೆಯ ಹಿನ್ನೆಲೆಯಲ್ಲಿ ವಾಣಿಜ್ಯ ಮಂಡಳಿ ನಿಯಮ ರೂಪಿಸಿದೆ. ಚಿತ್ರ ನಿರ್ಮಾಣದ 15 ವಿಭಾಗಗಳ ಪ್ರತಿನಿಧಿಗಳು, ನಿರ್ಮಾಪಕರು, ವಾಣಿಜ್ಯ ಮಂಡಳಿ ಪದಾಧಿಕಾರಿಗಳ ಸಭೆಯಲ್ಲಿ ಈ ನಿಯಮಗಳನ್ನು ರೂಪಿಸಲಾಗಿದೆ. ಮಂಡಳಿಯ ಗೌರವಾಧ್ಯಕ್ಷ ಸಾ.ರಾ. ಗೋವಿಂದು, ಅಧ್ಯಕ್ಷ ಡಿ.ಆರ್. ಜೈರಾಜ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿವರ ಪ್ರಕಟಿಸಿದರು.

ಏನೇನು ನಿಯಮ?: ಸಾಹಸ ಕಲಾವಿದರು ಸೇರಿದಂತೆ ಎಲ್ಲ ವಿಭಾಗಗಳ ಕಾರ್ಮಿಕರು ಕಡ್ಡಾಯವಾಗಿ ವಿಮಾ ಸುರಕ್ಷೆ ಮಾಡಿಸಿಕೊಂಡಿರಬೇಕು. ವಿಮಾ ಸೌಲಭ್ಯ ಇರುವ ಕಲಾವಿದರನ್ನಷ್ಟೇ ಚಿತ್ರೀಕರಣದಲ್ಲಿ ಬಳಸಿಕೊಳ್ಳಬೇಕು. ಸಾಹಸ ದೃಶ್ಯ, ಅಪಾಯಕಾರಿ ಸನ್ನಿವೇಶಗಳ ಚಿತ್ರೀಕರಣದ ಸ್ಥಳದಲ್ಲಿ ಅಂಬುಲೆನ್ಸ್, ವೈದ್ಯರು, ದಾದಿಯರು ಇರಲೇಬೇಕು. ನಿರ್ಮಾಪಕರು ಈ ಸೌಲಭ್ಯ ಕಲ್ಪಿಸಿರಬೇಕು.

ಅಪಾಯಕಾರಿ ಸನ್ನಿವೇಶ ಚಿತ್ರಿಸುವಾಗ ನುರಿತ ತಂತ್ರಜ್ಞರು, ಕಲಾವಿದರನ್ನಷ್ಟೇ ಬಳಸಿಕೊಳ್ಳಬೇಕು. ಚಿತ್ರತಂಡದ ಎಲ್ಲ ಸದಸ್ಯರಿಗೂ ನಿರ್ಮಾಪಕರು ಗುಂಪು ವಿಮೆ ಮಾಡಿಸಿರಬೇಕು. ಚಿತ್ರೀಕರಣದಲ್ಲಿ ಪಾಲ್ಗೊಳ್ಳುವ ಫೈಟರ್ಸ್, ಇತರ ವಿಭಾಗಗಳ ಸದಸ್ಯರು ತಾವು ಸ್ವಯಂ ಪ್ರೇರಣೆಯಿಂದ ಕೆಲಸ ಮಾಡುವುದಾಗಿ ಒಪ್ಪಿದ ಒಪ್ಪಂದ ಪತ್ರಕ್ಕೆ ಸಹಿ ಹಾಕಿರಬೇಕು. ಯಾವುದೇ ನಾಯಕ ಅಥವಾ ಕಲಾವಿದ ತನ್ನದೇ ಪರಿಕಲ್ಪನೆಯ ಸಾಹಸ ಮಾಡುವುದಿದ್ದರೂ ಅದನ್ನು ಫೈಟ್ ಮಾಸ್ಟರ್ ಮಾರ್ಗದರ್ಶನದಲ್ಲೇ ಮಾಡಿ ಚಿತ್ರೀಕರಿಸಬೇಕು. ಸಾಹಸ ದೃಶ್ಯಗಳಿಗೆ ಸಂಬಂಧಿಸಿ ಫೈಟ್ ಮಾಸ್ಟರ್‌ನ ಹೆಸರನ್ನು ಮಾತ್ರ ಉಲ್ಲೇಖಿಸಬೇಕು.

ಚಿತ್ರೀಕರಣದ ಸಂದರ್ಭದಲ್ಲಿ ಯಾವುದೇ ಕಾರ್ಮಿಕರಿಗೆ ತೊಂದರೆ ಆದಲ್ಲಿ ಅದಕ್ಕೆ ಆಯಾ ವಿಭಾಗದ ಮುಖ್ಯಸ್ಥರೇ ನೇರ ಹೊಣೆ ಹೊರಬೇಕು ಎನ್ನುವ ಅಂಶಗಳು ಮಾರ್ಗಸೂಚಿಯಲ್ಲಿವೆ.

ಚಿತ್ರೀಕರಣದ ಸಂದರ್ಭದಲ್ಲಿ ಸುರಕ್ಷತಾ ನಿಯಮಗಳನ್ನು ಭಾರತೀಯ ದಂಡ ಸಂಹಿತೆಯಲ್ಲೇ ಅಳವಡಿಸಿ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ನಿರ್ಮಾಪಕರಿಗೆ ಎಚ್ಚರಿಸಿದ್ದರು. ಈ ನಡುವೆ ವಾಣಿಜ್ಯ ಮಂಡಳಿಯಿಂದಲೂ ಸ್ವಯಂ ಮಾರ್ಗಸೂಚಿಗಳನ್ನು ರೂಪಿಸಿ ಸಲಹೆ ನೀಡುವಂತೆಯೂ ಸೂಚಿಸಿದ್ದರು.

ನಿಯಮಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ ಎಂದು ಡಿ.ಆರ್. ಜೈರಾಜ್ ತಿಳಿಸಿದರು. ಉಪಾಧ್ಯಕ್ಷ ಉಮೇಶ್ ಬಣಕಾರ್, ನಿರ್ಮಾಪಕ ಕೆ. ಮಂಜು, ಗೌರವ ಕಾರ್ಯದರ್ಶಿ ಎನ್.ಎಂ. ಸುರೇಶ್, ಸಾಹಸ ಕಲಾವಿದರಾದ ಥ್ರಿಲ್ಲರ್ ಮಂಜು, ಡಿಫರೆಂಟ್ ಡ್ಯಾನಿ, ರವಿವರ್ಮ ಇದ್ದರು.

ಗುರು ದೇಶಪಾಂಡೆ ಸಂಪರ್ಕಿಸಿಲ್ಲ

ವಿವೇಕ್ ಸಾವಿನ ಬಳಿಕ ಚಿತ್ರತಂಡದ ಯಾರೂ ನಮ್ಮನ್ನು ಸಂಪರ್ಕಿಸಿಲ್ಲ' ಎಂದು ಅವರ ತಾಯಿ ಜಿ. ಉಮಾ ಹೇಳಿದರು. ವಾಣಿಜ್ಯ ಮಂಡಳಿಯಲ್ಲಿ ತಮ್ಮ ಅಳಲು ತೋಡಿಕೊಂಡ ಅವರು, 'ನಿರ್ಮಾಪಕ ಗುರು ದೇಶಪಾಂಡೆ ಅವರಾಗಲಿ ಅಥವಾ ಬೇರೆ ಯಾರೂ ಕೂಡಾ ತಮ್ಮನ್ನು ಸಂಪರ್ಕಿಸಿಲ್ಲ. ₹ 10 ಲಕ್ಷ ಪರಿಹಾರ ಕೊಡುತ್ತೇವೆ ಎಂದು ಯಾರೂ ತಮಗೆ ಹೇಳಿಲ್ಲ. ಮಗನ ಸಾವಿಗೆ ನ್ಯಾಯ ದೊರಕಬೇಕು. ಅದಕ್ಕಾಗಿ ಇಲ್ಲಿಗೆ ಬಂದಿದ್ದೇವೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಮನವರಿಕೆ ಮಾಡಿದ್ದೇವೆ' ಎಂದರು.

ಸಂಕ್ಷಿಪ್ತ ಸುದ್ದಿ

ಐಎಸ್ ಸಂಪರ್ಕದ ಆರೋಪ: ಇಬ್ಬರು ಮಹಿಳೆಯರ ಬಂಧನ

ಕಣ್ಣೂರು (ಕೇರಳ) (ಪಿಟಿಐ): ಇಸ್ಲಾಮಿಕ್ ಸ್ಟೇಟ್ ಭಯೋತ್ಪಾದಕ ಗುಂಪಿನ ಸಿದ್ಧಾಂತವನ್ನು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ಮಾಡಿದ ಆರೋಪದ ಮೇಲೆ ಇಬ್ಬರು ಮಹಿಳೆಯರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮಂಗಳವಾರ ಬಂಧಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಉಪನಗರ ಠಾಣಾದಲ್ಲಿ ಈ ಇಬ್ಬರು ಮಹಿಳೆಯರನ್ನು ಅವರ ಮನೆಗಳಲ್ಲಿಯೇ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಗುಂಪಿನ ಸಕ್ರಿಯ ಸದಸ್ಯರಾಗಿದ್ದ ಅವರಿಬ್ಬರು ಐಎಸ್ ಸಿದ್ಧಾಂತವನ್ನು ಕ್ರೊನಿಕಲ್ ಫೌಂಡೇಷನ್ ಎಂಬ ಸಾಮಾಜಿಕ ಮಾಧ್ಯಮ ವೇದಿಕೆ ಮೂಲಕ ಪ್ರಚಾರ ಮಾಡಿದ್ದಾರೆ ಎಂದು ಗೊತ್ತಾಗಿದೆ.

'ಗರ್ಭಧಾರಣೆ ಮುಂದುವರಿಸಬೇಕೆ ಎಂದು ನಿರ್ಧರಿಸುವ ಸ್ವಾತಂತ್ರ್ಯ ಮಹಿಳೆಗಿದೆ'

ಕೊಚ್ಚಿ (ಪಿಟಿಐ): ಗರ್ಭಧಾರಣೆಯನ್ನು ಮುಂದುವರಿಸಬೇಕೇ ಎಂದು ನಿರ್ಧರಿಸುವ ಮಹಿಳೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿರುವ ಕೇರಳ ಹೈಕೋರ್ಟ್, ಸೌಮ್ಯ ರೀತಿಯ ಮಾನಸಿಕ ಅಸ್ವಸ್ಥ ತಾಯಿಗೆ ತನ್ನ 22 ವಾರಗಳ ಅಸಹಜ ಭ್ರೂಣವನ್ನು ಗರ್ಭಪಾತ ಮಾಡಿಸಿಕೊಳ್ಳಲು ಅನುಮತಿ ನೀಡಿದೆ.

'ಜನನದ ನಂತರ ಮಗು ಅಸಹಜತೆಯಿಂದ ಬಳಲುವ ಅಥವಾ ಅಂಗವಿಕಲತೆಗೆ ಒಳಗಾಗುವ ಅಪಾಯವಿದ್ದರೆ ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕು ಮಹಿಳೆಗೆ ಇದೆ' ಎಂದೂ ಹೈಕೋರ್ಟ್ ಹೇಳಿದೆ.

ಈ ಪ್ರಕರಣದಲ್ಲಿ ಮಹಿಳೆಯು ಸೌಮ್ಯ ರೀತಿಯ ಮಾನಸಿಕ ಅಸ್ವಸ್ಥತೆಯನ್ನು ಹೊಂದಿದ್ದಾರೆ. ಅವರ ಭ್ರೂಣವು 'ಕ್ಲೈನ್‌ಫೆಲ್ಟರ್ ಸಿಂಡ್ರೋಮ್'ನಿಂದ ಬಳಲುತ್ತಿದೆ ಎಂದು ಮಹಿಳೆಯನ್ನು ಪರೀಕ್ಷಿಸಿದ ವೈದ್ಯಕೀಯ ತಂಡ ವರದಿ ನೀಡಿತ್ತು. ಇದನ್ನು ಆಧರಿಸಿ ನ್ಯಾಯಾಲಯ ಆದೇಶ ನೀಡಿದೆ.


'ಯಾವುದೇ ಜವಾಬ್ದಾರಿ ನಿರ್ವಹಿಸಲು ಸಿದ್ಧ'

ನವದೆಹಲಿ (ಪಿಟಿಐ): 'ತೃಣಮೂಲ ಕಾಂಗ್ರೆಸ್‌ಗೆ(ಟಿಎಂಸಿ) ಬೇಷರತ್ತಾಗಿ ಸೇರ್ಪಡೆಯಾಗಿದ್ದೇನೆ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ನೀಡುವ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಲು ನಾನು ಸಿದ್ಧ' ಎಂದು ಸುಶ್ಮಿತಾ ದೇವ್ ಅವರು ಮಂಗಳವಾರ ಹೇಳಿದರು.

ಟಿಎಂಸಿಯ ಹಿರಿಯ ನಾಯಕರಾದ ಅಭಿಷೇಕ್ ಬ್ಯಾನರ್ಜಿ ಮತ್ತು ಡೆರೆಕ್ ಒ ಬ್ರಿಯನ್ ಅವರ ಉಪಸ್ಥಿತಿಯಲ್ಲಿ ಕೋಲ್ಕತ್ತದಲ್ಲಿ ಸುಶ್ಮಿತಾ ಅವರು ಸೋಮವಾರ ಟಿಎಂಸಿಗೆ ಸೇರಿದ್ದರು.

'ಟಿಎಂಸಿಗೆ ಸೇರುವಾಗ ಯಾವುದೇ ಸಿದ್ಧಾಂತವನ್ನು ನಾನು ರಾಜಿ ಮಾಡಿಕೊಂಡಿಲ್ಲ. ನಾನು ಬೇಷರತ್ತಾಗಿ ಟಿಎಂಸಿಗೆ ಸೇರ್ಪಡೆಯಾಗಿದ್ದೇನೆ.' ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,563
ಇಂದಿನ ಅಂತ್ಯ	16,614
▲	51
ದಿನದ ಗರಿಷ್ಠ	16,628

ವಿನಿಮಯ ದರ

$ ಡಾಲರ್	74.35
£ ಪೌಂಡ್	102.62
€ ಯುರೊ	87.53
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1535)
ಸೋಯಾ (ರಿಫೈನ್ಡ್)	₹1412 (1400)
ಸೂರ್ಯಕಾಂತಿ (ರಿಫೈನ್ಡ್)	₹1500(1500)
ಪಾಮೋಲಿನ್	₹1290 (1295)

ಚಿನ್ನದ ದರ ₹ 446 ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಚಿನ್ನ, ಬೆಳ್ಳಿ ದರ ಏರಿಕೆ ಆಗಿದೆ. 10 ಗ್ರಾಂ ಚಿನ್ನದ ದರ ₹ 446ರಷ್ಟು ಹೆಚ್ಚಾಗಿದ್ದು ₹ 45,460ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 888ರಷ್ಟು ಹೆಚ್ಚಾಗಿ ₹ 62,452ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಮತ್ತು ರೂಪಾಯಿ ಮೌಲ್ಯ ಇಳಿಕೆಯಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ರಿಟೇಲ್ ಮಾರಾಟ ಚೇತರಿಕೆ

ನವದೆಹಲಿ (ಪಿಟಿಐ): ಕೋವಿಡ್ ಪೂರ್ವದ ಸ್ಥಿತಿಗೆ ಹೋಲಿಸಿದರೆ ದೇಶದಲ್ಲಿನ ರಿಟೇಲ್ ಮಾರಾಟ ಪ್ರಮಾಣವು ಜುಲೈನಲ್ಲಿ ಶೇಕಡ 72ರಷ್ಟು ಆಗಿದೆ ಎಂದು ಭಾರತೀಯ ರಿಟೇಲ್ ವರ್ತಕರ ಸಂಘ (ಆರ್‌ಎಐ) ಹೇಳಿದೆ. ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ಕಾಣಿಸಿಕೊಳ್ಳುವುದಕ್ಕೂ ಮೊದಲಿನ, ಅಂದರೆ 2019ರ ಜುಲೈನಲ್ಲಿನ, ಒಟ್ಟಾರೆ ಮಾರಾಟದ ಪ್ರಮಾಣಕ್ಕೆ ಹೋಲಿಸಿ, ಸಂಘ ಈ ಮಾಹಿತಿ ನೀಡಿದೆ.

ಮುಂಬೈ ಧಾರಣೆ

ಶೇಂಗಾ

17-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1545)
ಒಂದು ವಾರದ ಡೆಲಿವರಿ	1535 (1540)
ಸೋಯಾ ಕಚ್ಚಾ	1375 (1385)
ಪಾಮ್ ವಾರದ ಡೆಲಿವರಿ	1288 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1440)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,400 (46,900)

ಬೆಳ್ಳಿ ಕೆ.ಜಿ 64,000 (62,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುಂದಿನ ಹಂಗಾಮಿಗೆ ಸಬ್ಸಿಡಿ ವಿಚಾರ ಸರ್ಕಾರದ ಮುಂದಿಲ್ಲ: ಅಧಿಕಾರಿ

ಸಕ್ಕರೆ ರಫ್ತು ಸಬ್ಸಿಡಿ ಹಿಂದಕ್ಕೆ?

ನವದೆಹಲಿ (ರಾಯಿಟರ್ಸ್): ಸಕ್ಕರೆ ರಫ್ತಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕೇಂದ್ರ ಸರ್ಕಾರವು ಅಕ್ಟೋಬರ್‌ನಿಂದ ಹಿಂಪಡೆಯುವ ಸಾಧ್ಯತೆ ಇದೆ.

'ಮುಂದಿನ ಹಂಗಾಮಿಗೆ ಸಬ್ಸಿಡಿ ನೀಡುವ ವಿಚಾರವು ಸರ್ಕಾರದ ಮುಂದಿಲ್ಲ' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ಸರಬರಾಜು ಸಚಿವಾಲಯದ ಹಿರಿಯ ಅಧಿಕಾರಿ ಸುಧಾಂಶು ಪಾಂಡೆ ಹೇಳಿದ್ದಾರೆ.

'ಈಗಿನ ಪರಿಸ್ಥಿತಿಯಲ್ಲಿ ಸಬ್ಸಿಡಿಯ ಬೆಂಬಲ ನೀಡುವ ಅಗತ್ಯ ಕಾಣಿಸುತ್ತಿಲ್ಲ. ಸಕ್ಕರೆ ರಫ್ತು ಅದರ ಪಾಡಿಗೆ ಅದು ನಡೆಯುತ್ತದೆ ಎಂದಾದರೆ, ಸಬ್ಸಿಡಿಯನ್ನು ನೀಡದೆ ಇರುವುದು ಜಾಗತಿಕ ಮಾರುಕಟ್ಟೆಗೆ ಒಳ್ಳೆಯದು ಕೂಡ' ಎಂದು ಅವರು ಹೇಳಿದ್ದಾರೆ. ಬ್ರೆಜಿಲ್ ನಂತರ ಅತಿಹೆಚ್ಚು ಸಕ್ಕರೆ ಉತ್ಪಾದನೆ ಆಗುವುದು ಭಾರತದಲ್ಲಿ.



ಕೇಂದ್ರವು ಮೂರು ವರ್ಷಗಳಿಂದ ಸಕ್ಕರೆ ರಫ್ತಿಗೆ ಸಬ್ಸಿಡಿ ನೀಡುತ್ತಿದೆ.

ಪ್ರತಿಸ್ಪರ್ಧಿ ದೇಶಗಳು ಭಾರತವು ಸಕ್ಕರೆ ರಫ್ತಿಗೆ ಸಬ್ಸಿಡಿ ಕೊಡುವುದನ್ನು ವಿರೋಧಿಸುತ್ತಿವೆ. ಬ್ರೆಜಿಲ್, ಆಸ್ಟ್ರೇಲಿಯಾ, ಗ್ವಾಟೆಮಾಲ ದೇಶಗಳು ದೂರು ಸಲ್ಲಿಸಿದ ನಂತರ, ಭಾರತ ನೀಡುತ್ತಿರುವ ಸಬ್ಸಿಡಿ ಬಗ್ಗೆ ತೀರ್ಮಾನಿಸಲು ಸಮಿತಿಯೊಂದನ್ನು ರಚಿಸುವುದಾಗಿ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯುಟಿಒ) 2019ರಲ್ಲಿ ತೀರ್ಮಾನಿಸಿತು. ತಾನು ಸಬ್ಸಿಡಿ ನೀಡುತ್ತಿರುವುದು ಡಬ್ಲ್ಯುಟಿಒ ನಿಯಮಗಳ ಉಲ್ಲಂಘನೆ ಅಲ್ಲ ಎಂಬುದು ಭಾರತದ ನಿಲುವು.

ಮುಖ್ಯಾಂಶಗಳು

- ಸಬ್ಸಿಡಿಗೆ ಪ್ರತಿಸ್ಪರ್ಧಿ ದೇಶಗಳಿಂದ ವಿರೋಧ
- ಮುಂದಿನ ಹಂಗಾಮಿನಲ್ಲಿ 60 ಲಕ್ಷ ಟನ್ ಸಕ್ಕರೆ ರಫ್ತು ನಿರೀಕ್ಷೆ

'ಭಾರತದ ಸಕ್ಕರೆಗೆ ಬೇಡಿಕೆ ಹೆಚ್ಚಿರಲಿದೆ. ಹಾಗಾಗಿ ಜಾಗತಿಕ ಮಟ್ಟದಲ್ಲಿ ಬೆಲೆ ಸ್ಥಿರವಾಗಲಿದೆ. ಸಬ್ಸಿಡಿಯ ಅಗತ್ಯ ಎದುರಾಗಲಿಕ್ಕಿಲ್ಲ' ಎಂದು ಪಾಂಡೆ ಹೇಳಿದರು.

ಸಕ್ಕರೆಯ ಬೆಲೆಯು ಹೆಚ್ಚಾಗುತ್ತಿರುವುದರ ಪ್ರಯೋಜನ ಪಡೆಯಲು, ಭಾರತದ ವರ್ತಕರು ರಫ್ತು ಒಪ್ಪಂದಗಳನ್ನು ಮಾಡಿಕೊಂಡಿದ್ದಾರೆ. ರಫ್ತು ಆಗಬೇಕಿರುವ ಐದು ತಿಂಗಳ ಮೊದಲೇ ಒಪ್ಪಂದಗಳು ಆಗಿವೆ. ಬ್ರೆಜಿಲ್‌ನಲ್ಲಿ ಸಕ್ಕರೆ ಉತ್ಪಾದನೆ ಕಡಿಮೆ ಆಗುವ ಸಾಧ್ಯತೆ ಇರುವ ಕಾರಣ, ಖರೀದಿದಾರರು ಭಾರತದಿಂದ ಸಕ್ಕರೆ ತರಿಸಿಕೊಳ್ಳಲು ಮುಂದಾಗುತ್ತಿದ್ದಾರೆ.

'ಬ್ರೆಜಿಲ್‌ನಲ್ಲಿ ಉತ್ಪಾದನೆ ಕಡಿಮೆ ಆಗಲಿದೆ ಎನ್ನಲಾಗಿದೆ. ಹಾಗಾಗಿ, ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆಯು ಹೆಚ್ಚಿದೆ. ಮುಂದಿನ ಹಂಗಾಮಿನಲ್ಲಿ ನಾವು 60 ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡಬಹುದು' ಎಂದು ಸಹಕಾರಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ಎನ್. ಹೇಳಿದರು.

ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ವರ್ಷದಲ್ಲಿ ದೇಶವು ಒಟ್ಟು 71 ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡುವ ನಿರೀಕ್ಷೆ ಇದೆ. ಇಷ್ಟು ಪ್ರಮಾಣದಲ್ಲಿ ರಫ್ತು ಸಾಧ್ಯವಾಗುವುದಕ್ಕೆ ಸಬ್ಸಿಡಿಯ ಕೊಡುಗೆಯೂ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೊಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-40500
ಹಳತು	42500-50500
ಚಿತ್ರದುರ್ಗ	
ಅಪಿ	43700-44129
ಬೆಟ್ಟೆ	36139-36559
ಕೆಂಪುಗೋಟು	30019-30489
ರಾಶಿ	43229-43669
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	27799-35759
ಕೋಕ	23899-34099
ಚಾಲಿ	38689-41199
ಕೆಂಪುಗೋಟು	27890-32369
ರಾಶಿ	39909-42509
ತಟ್ಟಿಬೆಟ್ಟೆ	32419-40109
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	44609-47315
ರಾಶಿ	38100-43799
ಸರಕು	47599-75200
ಗೊರಬಲು	17109-36119
ಸಾಗರ	
ಬಿಳಿಗೋಟು	32929-32929
ಚಾಲಿ	37829-40249
ಕೆಂಪುಗೋಟು	35269-37099
ರಾಶಿ	40699-43939
ಸಿಪ್ಪೆಗೋಟು	7290-20329
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	313-496
ದ್ವಿತಳಿ (ಬಿ.ವಿ)	329-545

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	12600	12525	183.15 ಸೆಂಟ್ಸ್
ಎಸಿ	6150	4800	5025	
ಆರ್‌ಪಿ	6150	5900	6050	ಲಂಡನ್
ಆರ್‌ಸಿ	3405	3300	3465	1848 ಡಾಲರ್ಸ್

₹ 13 ಲಕ್ಷ ಕೋಟಿ ದಾಟಿದ ಟಿಸಿಎಸ್ ಮಾರುಕಟ್ಟೆ ಮೌಲ್ಯ

ನವದೆಹಲಿ/ಮುಂಬೈ (ಪಿಟಿಐ): ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯ ಮಾರುಕಟ್ಟೆ ಮೌಲ್ಯವು ಮಂಗಳವಾರದ ವಹಿವಾಟಿನಲ್ಲಿ ₹ 13 ಲಕ್ಷ ಕೋಟಿ ದಾಟಿದ ಮೈಲಿಗಲ್ಲು ಸೃಷ್ಟಿಸಿತು. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಬಳಿಕ ಈ ಸಾಧನೆ ಮಾಡಿದ ದೇಶದ ಎರಡನೇ ಕಂಪನಿ ಇದಾಗಿದೆ.

ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ದಿನದ ವಹಿವಾಟಿನ ಅಂತ್ಯದ ವೇಳೆಗೆ ಟಿಸಿಎಸ್ ಮಾರುಕಟ್ಟೆ ಮೌಲ್ಯವು ₹ 13.14 ಲಕ್ಷ ಕೋಟಿಗಳಷ್ಟಾಗಿದೆ. ಕಂಪನಿಯ ಷೇರು ಮೌಲ್ಯವು ಶೇಕಡ 2.32ರಷ್ಟು ಏರಿಕೆ ಆಗಿ ಪ್ರತಿ ಷೇರಿನ ಬೆಲೆ ₹ 3,552.40ಕ್ಕೆ ತಲುಪಿದ್ದರಿಂದ ಕಂಪನಿಯು ಈ ಮೈಲಿಗಲ್ಲು ಸಾಧಿಸುವಂತಾಯಿತು.

ಸದ್ಯ ₹ 13.71 ಲಕ್ಷ ಕೋಟಿ ಮಾರುಕಟ್ಟೆ ಮೌಲ್ಯ ಹೊಂದುವ ಮೂಲಕ ರಿಲಯನ್ಸ್ ಇಂಡಸ್ಟ್ರೀಸ್ ದೇಶದ ಅತ್ಯಂತ ಮೌಲ್ಯಯುತ ಕಂಪನಿ ಆಗಿದೆ.

ಹೊಸ ಎತ್ತರಕ್ಕೆ ಷೇರುಪೇಟೆ: ದೇಶದ ಷೇರುಪೇಟೆಗಳು ಮಂಗಳವಾರದ ವಹಿವಾಟಿನಲ್ಲಿ ಹೊಸ ಎತ್ತರಕ್ಕೆ ಏರಿಕೆ ಕಂಡವು. ದಿನದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 210 ಅಂಶ ಏರಿಕೆ ಕಂಡು ದಾಖಲೆಯ 55,792 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿದೆ. ಎನ್‌ಎಸ್‌ಇ ನಿಫ್ಟಿ 51 ಅಂಶ ಹೆಚ್ಚಾಗಿ 16,614 ಅಂಶಗಳಿಗೆ ಹೊಸ ಎತ್ತರವನ್ನು ತಲುಪಿದೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಪಾರ್ವತಿ, ಶಿರಗುಪ್ಪ

- **ಪ್ರಶ್ನೆ: ನಾಮನಿರ್ದೇಶನ ಎಂದರೇನು? ಇದರ ಉಪಯುಕ್ತತೆ ತಿಳಿಸಿ. ಚರ ಹಾಗೂ ಸ್ಥಿರ ಆಸ್ತಿಗಳ ಮೇಲೆ ನಾಮ ನಿರ್ದೇಶನ ಮಾಡಬಹುದೇ?**

ಉತ್ತರ: ಇದು ತುಂಬಾ ಸರಳ ಪ್ರಶ್ನೆ ಎಂದು ಕಂಡರೂ ತುಂಬಾ ಅರ್ಥಪೂರ್ಣ. ಚರ ಆಸ್ತಿಗೆ ಮಾತ್ರ ನಾಮನಿರ್ದೇಶನ ಮಾಡಬಹುದು. ಸ್ಥಿರ ಆಸ್ತಿಗೆ ಉಯಿಲು ಮಾಡಬೇಕು. ಓರ್ವ ವ್ಯಕ್ತಿ ಬ್ಯಾಂಕ್ ಠೇವಣಿ, ಅಂಚೆ ಕಚೇರಿ ಠೇವಣಿ ಅಥವಾ ಇನ್ನಿತರ ಹಣಕಾಸು ಸಂಸ್ಥೆಗಳಲ್ಲಿ ಠೇವಣಿ ಇರಿಸಿ ಮೃತಪಟ್ಟಾಗ, ವಿಮಾ ಪಾಲಿಸಿ ಮಾಡಿಸಿ ಮೃತಪಟ್ಟಾಗ, ಬ್ಯಾಂಕ್ ಲಾಕರ್‌ನಲ್ಲಿ ಒಡವೆ ಇಟ್ಟು ಮೃತಪಟ್ಟಾಗ ನಾಮನಿರ್ದೇಶನ ಇದ್ದಲ್ಲಿ ಸುಲಭವಾಗಿ ಹಣ ಅಥವಾ ಒಡವೆ ಪಡೆಯಬಹುದು. ನಾಮನಿರ್ದೇಶನ ಇಲ್ಲದೇ ಇದ್ದರೆ, ಅವುಗಳನ್ನು ಪಡೆಯಲು ವಾರಸುದಾರರು ಕೋರ್ಟ್ ಮುಖಾಂತರ ಸಕ್ಸೆಶನ್ ಸರ್ಟಿಫಿಕೇಟ್ (succession certificate) ಪಡೆಯಬೇಕಾಗುತ್ತದೆ. ಅದೇ ರೀತಿ, ಸ್ಥಿರ ಆಸ್ತಿಗೆ ಉಯಿಲು ಬರೆಯುವುದು ಸೂಕ್ತ. ನಾಮ ನಿರ್ದೇಶನ ಹಾಗೂ ಉಯಿಲು ಮಾಡುವುದರಿಂದ ಕೋರ್ಟ್, ಕಚೇರಿ ವ್ಯವಹಾರವನ್ನು ಬಹಳಷ್ಟು ತಪ್ಪಿಸಬಹುದು. ಬ್ಯಾಂಕ್ ಠೇವಣಿಗೆ ಓರ್ವ ವ್ಯಕ್ತಿಯನ್ನು ಮಾತ್ರವೇ ನಾಮನಿರ್ದೇಶನ ಮಾಡಬಹುದಾದ್ದರಿಂದ ಹೆಚ್ಚಿನ ಮೊತ್ತದ ಠೇವಣಿ ಇಡುವಾಗ ಠೇವಣಿಯನ್ನು ವಿಂಗಡಿಸಿ, ಬೇರೆ ಬೇರೆಯಾಗಿ ನಾಮ ನಿರ್ದೇಶನ ಮಾಡುವುದು ಸೂಕ್ತ.

ವೀಣಾ, ಬಾಗಲಕೋಟೆ

- **ಪ್ರಶ್ನೆ: ನಾನು ಶಿಕ್ಷಕಿ. ವಯಸ್ಸು 33 ವರ್ಷ. ಪತಿ ಸರ್ಕಾರಿ ನೌಕರ. ವಯಸ್ಸು 35 ವರ್ಷ. ನನ್ನ ಹಾಗೂ ಪತಿಯ ಸಂಬಳ ಹಾಗೂ ಕಡಿತ ಈ ಕೆಳಗಿನಂತಿವೆ.**

	ನನ್ನ ಸಂಬಳ ₹ 36,000	ಪತಿಯ ಸಂಬಳ ₹ 48,000
	ಕಡಿತ	ಕಡಿತ
ಎನ್‌ಪಿಎಫ್	₹3,500	₹4,300
ಕೆಜಿಐಡಿ	₹3,000	₹4000
ಎಲ್‌ಐಸಿ	₹1,100	₹1,000
ಪಿಪಿಎಫ್	₹3,100	₹5,000
ಒಟ್ಟು	₹10,700	₹14,300

ನಮಗೆ ಇಬ್ಬರು ಹೆಣ್ಣು ಮಕ್ಕಳು. ಪ್ರತೀ ಬುಧವಾರ ನಿಮ್ಮ ಅಂಕಣ ಓದುತ್ತೇನೆ. ನಮ್ಮ ಶಾಲೆಯಲ್ಲಿ ನಿಮ್ಮ ಅಂಕಣದ ಮೇಲೆ ಚರ್ಚೆ ಕೂಡ ಮಾಡುತ್ತೇವೆ. ನಮಗೆ ಉತ್ತಮ ಉಳಿತಾಯ ಯೋಜನೆ ತಿಳಿಸಿ.

ಉತ್ತರ: ಸದ್ಯದ ಪರಿಸ್ಥಿತಿಯಲ್ಲಿ ನೀವಿಬ್ಬರೂ ಆದಾಯ ತೆರಿಗೆಗೆ ಒಳಗಾಗುವುದಿಲ್ಲ. ಮನೆ ಬಾಡಿಗೆ, ಮನೆ ಖರ್ಚು ಕಳೆದು ನೀವು ತಿಂಗಳಿಗೆ ₹ 30 ಸಾವಿರ ಉಳಿಸಬಹುದು. ತಕ್ಷಣ ಇಬ್ಬರೂ ಹೆಣ್ಣು ಮಕ್ಕಳ ಹೆಸರಿನಲ್ಲಿ ತಲಾ ₹ 5 ಸಾವಿರವನ್ನು ಸುಕನ್ಯಾ ಸಮೃದ್ಧಿ ಯೋಜನೆಯಲ್ಲಿ ತೊಡಗಿಸಲು ಪ್ರಾರಂಭಿಸಿ. ಉಳಿಯುವ ₹ 20 ಸಾವಿರದಲ್ಲಿ ₹ 10 ಸಾವಿರವನ್ನು ಒಂದು ವರ್ಷದ ಆರ್.ಡಿ. ಮಾಡಿ. ವರ್ಷಾಂತ್ಯಕ್ಕೆ ಬಂಗಾರದ ನಾಣ್ಯ ಕೊಂಡು ಬ್ಯಾಂಕ್ ಲಾಕರಿನಲ್ಲಿ ಇಡಿ. ಈ ಪ್ರಕ್ರಿಯೆ ಮಕ್ಕಳ ಮದುವೆ ತನಕ ನಿಲ್ಲಿಸಬೇಡಿ. ಇನ್ನುಳಿದ ₹ 10 ಸಾವಿರದಲ್ಲಿ ನೀವು ಹಾಗೂ ನಿಮ್ಮ ಪತಿ ತಲಾ ₹ 5 ಸಾವಿರದಂತೆ 10 ವರ್ಷಗಳ ಆರ್.ಡಿ. ಮಾಡಿ. 10 ವರ್ಷ ಮುಗಿಯುತ್ತಲೇ ₹ 16 ಲಕ್ಷ ಪಡೆಯುವಿರಿ.

ರಾಮಣ್ಣ ಶೆಟ್ಟಿ, ಪೀಣ್ಯ ದಾಸರಹಳ್ಳಿ

- **ಪ್ರಶ್ನೆ: ನಾನು ಮತ್ತು ನನ್ನ ಹೆಂಡತಿ ಹಿರಿಯ ನಾಗರಿಕರು. ನಮಗೆ ನಾಲ್ಕು ಮನೆಗಳಿವೆ. ಒಂದರಲ್ಲಿ ವಾಸವಾಗಿದ್ದೇವೆ. ಉಳಿದ ಮೂರು ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದೇವೆ. ನಮಗೆ ನಾಲ್ಕು ಜನ ಮಕ್ಕಳು. ಎಲ್ಲರಿಗೂ ಮದುವೆ ಆಗಿ ಬೇರೆ ಬೇರೆ ಇದ್ದಾರೆ. ನನ್ನ ಹೆಸರಿನಲ್ಲಿ ₹ 50 ಲಕ್ಷ, ನನ್ನ ಹೆಂಡತಿ ಹೆಸರಿನಲ್ಲಿ ₹ 38 ಲಕ್ಷ ಬ್ಯಾಂಕ್ ಠೇವಣಿ ಇದೆ. ನನ್ನ ಹೆಂಡತಿ ಪಡೆಯುವ ಬಾಡಿಗೆ ಹಾಗೂ ಠೇವಣಿ ಮೇಲಿನ ಬಡ್ಡಿಯನ್ನು ನನ್ನ ಆದಾಯಕ್ಕೆ ಸೇರಿಸಬೇಕೇ ಅಥವಾ ಅವಳ ಆದಾಯಕ್ಕೆ ಅವಳೇ ಐ.ಟಿ. ರಿಟರ್ನ್ಸ್ ತುಂಬಬಹುದೇ ತಿಳಿಸಿ.**

ಉತ್ತರ: ನಿಮ್ಮ ಹೆಂಡತಿ ಹೆಸರಿನಲ್ಲಿ ಮನೆ, ಬ್ಯಾಂಕ್ ಠೇವಣಿ ಅವರ ದುಡಿಮೆಯಿಂದ ಬಂದ ಸ್ವತ್ತಾದಲ್ಲಿ ಅಥವಾ ಅವರಿಗೆ ಅವರ ತಂದೆ ತಾಯಿಯಿಂದ ಬಂದ ಸ್ವತ್ತಾದಲ್ಲಿ ಅವುಗಳಿಂದ ಬರುವ ಆದಾಯವನ್ನು ನಿಮ್ಮ ಆದಾಯಕ್ಕೆ ಸೇರಿಸುವ ಅಗತ್ಯವಿಲ್ಲ. ಅವರೇ ಪ್ರತ್ಯೇಕವಾಗಿ ಐ.ಟಿ. ರಿಟರ್ನ್ಸ್ ತುಂಬಬಹುದು. ಆಸ್ತಿ ಹಾಗೂ ಠೇವಣಿ ನಿಮ್ಮ ದುಡಿಮೆಯಿಂದ ಬಂದಿರುವಲ್ಲಿ ನಿಮ್ಮ ಹೆಂಡತಿ ಆದಾಯವನ್ನು ನಿಮ್ಮ ಆದಾಯಕ್ಕೆ ಸೇರಿಸಬೇಕಾಗುತ್ತದೆ ಹಾಗೂ ನೀವೇ ತೆರಿಗೆ ಕೊಡಬೇಕಾಗುತ್ತದೆ. ನಿಮಗೊಂದು ಕಿವಿಮಾತು: ನಿಮ್ಮ ಆಸ್ತಿ ವಿಚಾರದಲ್ಲಿ ಇದುವರೆಗೆ ನೀವು ಉಯಿಲು ಪತ್ರ ಬರೆಯದೇ ಇರುವಲ್ಲಿ ತಕ್ಷಣವೇ ಕಾನೂನು ತಜ್ಞರನ್ನು ವಿಚಾರಿಸಿ ಉಯಿಲು ಬರೆದಿಡಿ. ಉಯಿಲಿಗೆ ಕಾನೂನಿನಂತೆ ಸ್ಟ್ಯಾಂಪ್ ಪೇಪರ್-ನೋಂದಣಿ ಅವಶ್ಯವಿಲ್ಲ. ನೀವು ಬಯಸಿದರೆ ನೋಂದಾಯಿಸಬಹುದು. ಓರ್ವ ವ್ಯಕ್ತಿ ಒಮ್ಮೆ ಉಯಿಲು ಬರೆದರೆ ಎಷ್ಟು ಬಾರಿ ಬೇಕಾದರೂ ಅದನ್ನು ಬದಲಾಯಿಸಬಹುದು. ಕೊನೆಯ ಉಯಿಲು ಮಾತ್ರವೇ ವ್ಯಕ್ತಿಯ ಮರಣಾನಂತರ ಜಾರಿಗೆ ಬರುತ್ತದೆ. ಉಯಿಲು ಬರೆಯದೇ ಇದ್ದರೆ ನಿಮ್ಮ ಕಾಲಾನಂತರ ನಿಮ್ಮ ಹೆಂಡತಿ, ಮಕ್ಕಳು ಸ್ಥಿರ ಆಸ್ತಿ ವಿಚಾರದಲ್ಲಿ ವಾರಸುದಾರರ ಹಕ್ಕು ಪತ್ರ ಪಡೆಯಲು ಹಣ ಖರ್ಚು ಮಾಡಿ, ಕೋರ್ಟು ಕಚೇರಿ ಅಲೆದಾಡಬೇಕಾದೀತು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಎದುರಾಳಿ ಆಟಗಾರರ ಕೆಣಕಾಟಕ್ಕೆ ಭಾರತದ ಕೆ.ಎಲ್. ರಾಹುಲ್ ಎಚ್ಚರಿಕೆ

ಒಬ್ಬರನ್ನು ಕೆಣಕಿದರೆ ತಂಡವೇ ತಿರುಗಿಬೀಳುತ್ತದೆ

ಲಂಡನ್ (ಪಿಟಿಐ): 'ನಮ್ಮ ಒಬ್ಬ ಆಟಗಾರನನ್ನು ಎದುರಾಳಿ ಆಟಗಾರರು ನಿಂದಿಸಿದರೆ, ತಂಡದ ಇನ್ನುಳಿದ ಹತ್ತು ಆಟಗಾರರೂ ತಿರುಗಿಬೀಳುತ್ತಾರೆ. ಆಟದ ಮೂಲಕ ಉತ್ತರ ಕೊಡುತ್ತಾರೆ. ಎರಡನೇ ಟೆಸ್ಟ್‌ನಲ್ಲಿ ಆಗಿದ್ದು ಅದೇ'-

ಭಾರತ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಮಾತುಗಳಿವು. ಲಾರ್ಡ್ಸ್‌ನಲ್ಲಿ ಸೋಮವಾರ ಮುಕ್ತಾಯವಾದ ಟೆಸ್ಟ್‌ನಲ್ಲಿ ಭಾರತ ತಂಡವು 151 ರನ್‌ಗಳಿಂದ ಇಂಗ್ಲೆಂಡ್ ವಿರುದ್ಧ ಜಯಿಸಿತ್ತು.

ಎರಡನೇ ಇನಿಂಗ್ಸ್‌ನಲ್ಲಿ ಕೆಳಕ್ರಮಾಂಕದ ಬ್ಯಾಟ್ಸ್‌ಮನ್ ಮೊಹಮ್ಮದ್ ಶಮಿ ಮತ್ತು ಜಸ್‌ಪ್ರೀತ್ ಬೂಮ್ರಾ ಅಮೋಘ ಜೊತೆಯಾಟದಿಂದ ಭಾರತಕ್ಕೆ ಗೆಲುವಿನ ವೇದಿಕೆ ಸಿದ್ಧಪಡಿಸಿದ್ದರು. ಅಲ್ಲದೇ ಬೌಲಿಂಗ್‌ನಲ್ಲಿಯೂ ಮಿಂಚಿದ್ದ ಅವರು ಭಾರತಕ್ಕೆ ಐತಿಹಾಸಿಕ ಜಯದ ಕಾಣಿಕೆ ನೀಡಿದ್ದರು.

ಆದರೆ ಬೂಮ್ರಾ ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ಆತಿಥೇಯ ಬೌಲರ್ ಮಾರ್ಕ್‌ವುಡ್ ಶಾರ್ಟ್ ಪಿಚ್ ಎಸೆತಗಳನ್ನು ಪ್ರಯೋಗಿಸಿದ್ದರು. ಅವರು ಬೂಮ್ರಾ ತಲೆಯನ್ನೇ ಗುರಿಯಾಗಿಸಿಕೊಂಡಿದ್ದವು. ಜೋ ರೂಟ್, ಜಿಮ್ಮಿ ಆ್ಯಂಡರ್ಸನ್ ಮತ್ತು ಒಲಿ ರಾಬಿನ್ಸನ್ ಅವರೂ ಬ್ಯಾಟ್ಸ್‌ಮನ್‌ಗಳನ್ನು ಕೆಣಕುತ್ತಿದ್ದರು. ಇದರಿಂದಾಗಿ ಮಾತಿನ ಚಕಮಕಿಗಳು ನಡೆದವು.



ಭಾರತ ತಂಡದ ಜಯದ ಸಂಭ್ರಮ –ರಾಯಿಟರ್ಸ್ ಚಿತ್ರ

'ಉಭಯ ತಂಡಗಳೂ ಜಯಗಳಿಸಲು ಪಣತೊಟ್ಟಿದ್ದು ಇದಕ್ಕೆ ಕಾರಣ. ನಾವು ತಂಡವಾಗಿ ಯಾವತ್ತೂ ತಿರುಗೇಟು ನೀಡಲು ಹಿಂಜರಿಯುವುದಿಲ್ಲ' ಎಂದು ರಾಹುಲ್ ಪಂದ್ಯದ ನಂತರದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ನಮ್ಮ ಒಬ್ಬ ಆಟಗಾರನನ್ನು ಕೆಣಕಿದರೆ ಉಳಿದವರೆಲ್ಲರೂ ಎದುರಾಳಿಗಳಿಗೆ ತಿರುಗಿಬೀಳುತ್ತಾರೆ. ಇದು ನಮ್ಮ ಬಳಗದಲ್ಲಿ ಇರುವ ಮಧುರ ಬಾಂಧವ್ಯದ ಪ್ರತೀಕ. ಆದ್ದರಿಂದ ಎದುರಾಳಿಗಳು ನಮ್ಮಲ್ಲಿ ಯಾರನ್ನಾದರೂ ಕೆಣಕುವಾಗ, ಇಡೀ ಭಾರತ ತಂಡವನ್ನು ಕೆಣಕುತ್ತಿದ್ದಾರೆಂದು ಅರಿತುಕೊಳ್ಳಬೇಕು' ಎಂದರು.

'ಬೂಮ್ರಾ ಮತ್ತು ಶಮಿ ಅವರ 89 ರನ್‌ಗಳ ಜೊತೆಯಾಟವು ಅಮೋಘವಾದದ್ದು. ಅದನ್ನು ಬಣ್ಣಿಸಲು ಪದಗಳೇ ಸಾಲುತ್ತಿಲ್ಲ. ಅಂತಹದೊಂದು ಸ್ಫೂರ್ತಿದಾಯಕ ಹೋರಾಟವೇ ಬೌಲರ್‌ಗಳಲ್ಲಿಯೂ ಹುರುಪು ತುಂಬಿತ್ತು. ಊಟದ ವಿರಾಮದಲ್ಲಿ ಡಿಕ್ಲೇರ್ ಮಾಡುವ ಸಂಗತಿ ನಮಗೆಲ್ಲ ಗೊತ್ತಿತ್ತು' ಎಂದರು.

ಎರಡನೇ ಟೆಸ್ಟ್ ಅಂಕಿ ಅಂಶ

- ಇಂಗ್ಲೆಂಡ್ ತಂಡದ ಎದುರು ಲಾರ್ಡ್ಸ್‌ನಲ್ಲಿ ಒಂಬತ್ತನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಅತಿ ಹೆಚ್ಚು ರನ್ ಗಳಿಸಿದವರು

ಆಟಗಾರ	ರನ್	ವರ್ಷ
ಮೊಹಮ್ಮದ್ ಶಮಿ	56*	2021
ಭುವನೇಶ್ವರ ಕುಮಾರ್	52	2014
ಎಲ್.ಅಮರ್ ಸಿಂಗ್	51	1932

- **34**: ಜಸ್‌ಪ್ರೀತ್ ಬೂಮ್ರಾ ಟೆಸ್ಟ್ ಪಂದ್ಯದ ಇನಿಂಗ್ಸ್‌ವೊಂದರಲ್ಲಿ ಗಳಿಸಿದ ಗರಿಷ್ಠ ಸ್ಕೋರ್. ಅವರ ಈ ಹಿಂದಿನ ಗರಿಷ್ಠ ಮೊತ್ತ **28** ಆಗಿತ್ತು.
- **35**ನೇ ಬಾರಿ ಭಾರತ **150**ಕ್ಕಿಂತ ಹೆಚ್ಚು ರನ್ ಅಂತರದಿಂದ ಗೆಲುವು ಸಾಧಿಸಿದೆ. ಇಂಗ್ಲೆಂಡ್ ಎದುರು ಆರನೇ ಬಾರಿ ತಂಡ ಈ ಸಾಧನೆ ಮಾಡಿತು.
- **6**ನೇ ಬಾರಿ ಇಂಗ್ಲೆಂಡ್‌ನ ಆರಂಭಿಕ ಬ್ಯಾಟ್ಸ್‌ಮನ್‌ಗಳು ಟೆಸ್ಟ್‌ನ ಇನಿಂಗ್ಸ್‌ವೊಂದರಲ್ಲಿ ಸೊನ್ನೆ ಸುತ್ತಿದರು.

ಗೆಲುವಿನ ಗುಟ್ಟು ಬಿಚ್ಚಿಟ್ಟ ಕೊಹ್ಲಿ

ಲಂಡನ್ (ಪಿಟಿಐ): 'ಎರಡನೇ ಇನಿಂಗ್ಸ್‌ನಲ್ಲಿ ಸೃಷ್ಟಿಯಾದ ಒತ್ತಡ ಮತ್ತು ಇಂಗ್ಲೆಂಡ್ ಆಟಗಾರರು ಮೊಹಮ್ಮದ್ ಶಮಿ ಮತ್ತು ಜಸ್‌ಪ್ರೀತ್ ಬೂಮ್ರಾ ಅವರನ್ನು ಪದೇ ಪದೇ ಕೆಣಕಿದ್ದು ನಮ್ಮ ತಂಡದಲ್ಲಿ ಛಲ ಮೂಡಿಸಿತು. ಅದು ಅಮೋಘ ಗೆಲುವಿಗೆ ಕಾರಣವಾಯಿತು' ಎಂದು ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಹೇಳಿದರು.

'ನನಗಂತೂ ತಂಡದ ಬಗ್ಗೆ ಸಿಕ್ಕಾಪಟ್ಟೆ ಹೆಮ್ಮೆಯಾಗುತ್ತಿದೆ. 60 ಓವರ್‌ಗಳಲ್ಲಿ ಇಂಗ್ಲೆಂಡ್ ತಂಡವು 272 ರನ್‌ಗಳ ಗೆಲುವಿನ ಗುರಿ ಮುಟ್ಟಬೇಕಿತ್ತು. ಆದರೆ, 51.5 ಓವರ್‌ಗಳಲ್ಲಿಯೇ ನಮ್ಮ ಬೌಲರ್‌ಗಳು ಕೆಲಸ ಮುಗಿಸಿದರು' ಎಂದು ವಿರಾಟ್ ಶ್ಲಾಘಿಸಿದರು.

ಎಎಫ್‌ಸಿ: ಬಿಎಫ್‌ಸಿಗೆ ಜಯದ ವಿಶ್ವಾಸ

ಮಾಲೆ, ಮಾಲ್ಡೀವ್ಸ್ (ಪಿಟಿಐ): ಬೆಂಗಳೂರು ಎಫ್‌ಸಿ ತಂಡವು ಎರಡು ವರ್ಷಗಳ ಬಳಿಕ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡವನ್ನು ಮಣಿಸುವ ಛಲದಲ್ಲಿದೆ. ಎಎಫ್‌ಸಿ ಫುಟ್‌ಬಾಲ್ ಟೂರ್ನಿಯ 'ಡಿ' ಗುಂಪಿನಲ್ಲಿ ಉಭಯ ತಂಡಗಳ ನಡುವಣ ಹಣಾಹಣಿಗೆ ಬುಧವಾರ ವೇದಿಕೆ ಸಜ್ಜಾಗಿದೆ.

ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಮೊದಲ ಪಂದ್ಯದಲ್ಲಿ ಕ್ಲಬ್ ಈಗಲ್ಸ್ ಎದುರು 1-0ಯಿಂದ ಜಯಿಸಿ ವಿಶ್ವಾಸದಲ್ಲಿದೆ.

2019ರಲ್ಲಿ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಎಟಿಕೆಎಂಬಿ ಬಿಎಫ್‌ಸಿಗೆ ಕೊನೆಯ ಬಾರಿ ಮಣಿದಿತ್ತು.

ಕೋಲ್ಕತ್ತಾ ಮೂಲದ ಎಟಿಕೆಎಂಬಿ ತಂಡವು ಈ ಬೇಸಿಗೆಯಲ್ಲಿ ಫ್ರಾನ್ಸ್ ಮಿಡ್‌ಫೀಲ್ಡರ್ ಹ್ಯೂಗೊ ಬೊಮೌಸ್, ಅಮರಿಂದರ್ ಸಿಂಗ್, ಲಿಸ್ಟನ್ ಕೊಲ್ಯಾಸೊ, ಅಶುತೋಷ್ ಮೆಹ್ತಾ ಅವರನ್ನು ಸೇರಿಸಿಕೊಂಡು ಬಲ ವೃದ್ಧಿಸಿಕೊಂಡಿದೆ.ಬಿಎಫ್‌ಸಿ ತಂಡಕ್ಕೆ ಮೊದಲ ಪಂದ್ಯದಲ್ಲಿ ಜಯೇಶ್ ರಾಣೆ ಗೋಲು ತಂದುಕೊಟ್ಟಿದ್ದರು. ಗುರುಪ್ರೀತ್ ಸಿಂಗ್ ಕೂಡ ಗೋಲ್‌ಕೀಪಿಂಗ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದರು. ಅದೇ ಲಯವನ್ನು ಮುಂದುವರಿಸುವ ವಿಶ್ವಾಸದಲ್ಲಿ ಇವರಿಬ್ಬರು ಇದ್ದಾರೆ.

ಪಂದ್ಯ ಆರಂಭ: ಸಂಜೆ 4.30



ಹೈಟಿಯ ಲೆಸ್ ಕೆಯೆಸ್‌ನಲ್ಲಿ ಭೂಕಂಪನ ಹಾಗೂ ಧಾರಾಕಾರ ಮಳೆಯಿಂದಾಗಿ ಅತಂತ್ರಗೊಂಡಿರುವ ನಿವಾಸಿಗಳು ಮಂಗಳವಾರ ಆಹಾರ ಪೊಟ್ಟಣವನ್ನು ಪಡೆದುಕೊಳ್ಳಲು ಮುಗಿಬಿದ್ದರು –ಪಿಟಿಐ ಚಿತ್ರ

ಹೈಟಿ ಭೂಕಂಪ: ಮೃತರ ಸಂಖ್ಯೆ 1,419ಕ್ಕೆ ಏರಿಕೆ

ಲೆಸ್ ಕೆಯೆಸ್, ಹೈಟಿ (ರಾಯಿಟರ್ಸ್): ಭೂಕಂಪನದಿಂದ ತತ್ತರಿಸಿರುವ ಹೈಟಿಯಲ್ಲಿ ಮಂಗಳವಾರ ಧಾರಾಕಾರ ಮಳೆಯಾಗಿದ್ದು, ರಕ್ಷಣಾ ಕಾರ್ಯಕ್ಕೆ ಅಡಚಣೆ ಉಂಟಾಗಿದೆ.

ಭೂಕಂಪದಿಂದ ಮೃತಪಟ್ಟವರ ಸಂಖ್ಯೆ 1,419ಕ್ಕೆ ಏರಿದ್ದು, ಸುಮಾರು 6,900 ಮಂದಿ ಗಾಯಗೊಂಡಿದ್ದಾರೆ.

ಬಿರುಗಾಳಿ, ಧಾರಾಕಾರ ಮಳೆ ಹಾಗೂ ಕೆಲವೆಡೆ ಪ್ರವಾಹ ಪರಿಸ್ಥಿತಿಯು ರಕ್ಷಣಾ ಕಾರ್ಯದ ಮೇಲೆ ಪರಿಣಾಮ ಬೀರಿದೆ. ಅವಶೇಷಗಳ ನಡುವೆ ಸಿಲುಕಿದ್ದವರನ್ನು ರಕ್ಷಿಸಬಹುದು ಎಂಬ ವಿಶ್ವಾಸವು ಕುಗ್ಗಿದೆ.

ಭೂಕಂಪನದಿಂದಾಗಿ ಸುಮಾರು 37,312 ಮನೆಗಳು ಕುಸಿದಿವೆ. ಇದರಿಂದಾಗಿ ಮೃತರ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಂಭವ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ನೀರಜ್ ಚೋಪ್ರಾಗೆ ಮಂಗಳವಾರ ತಮ್ಮ ಊರು ಖಾಂಡ್ರಾಗೆ ಬಂದಾಗ ಅದ್ದೂರಿ ಸ್ವಾಗತ ದೊರೆಯಿತು. ಅವರನ್ನು ತೆರೆದ ವಾಹನದಲ್ಲಿ ಮೆರವಣಿಗೆಯ ಮೂಲಕ ಮನೆಗೆ ಕರೆದೊಯ್ಯಲು ನೂರಾರು ಜನ ಸೇರಿದ್ದರು – ಪಿಟಿಐ ಚಿತ್ರ

ಜ್ವರಕ್ಕೆ ಬಸವಳಿದ ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿರುವ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಮಂಗಳವಾರ ತವರೂರು ಖಾಂಡ್ರಾಗೆ ತೆರಳಿದರು.

ಪಾಣಿಪತ್ ಸಮೀಪದ ಈ ಗ್ರಾಮದಲ್ಲಿ ನೀರಜ್ ಅವರಿಗೆ ಜನರು ಅದ್ದೂರಿ ಸ್ವಾಗತ ನೀಡಿದರು. ತೆರೆದ ವಾಹನದಲ್ಲಿ ಮೆರವಣಿಗೆಯೂ ನಡೆಯಿತು. ಆದರೆ ಜ್ವರ ಮತ್ತು ಸುಸ್ತಿನಿಂದ ಬಸವಳಿದ ನೀರಜ್ ಸ್ವಾಗತ ಕಾರ್ಯಕ್ರಮದ ಮಧ್ಯದಲ್ಲಿಯೇ ನಿರ್ಗಮಿಸಿದರು.

ಎಡೆಬಿಡದ ಓಡಾಟದಿಂದಾಗಿ ಸುಸ್ತಾಗಿರುವ ಅವರಿಗೆ ವಿಶ್ರಾಂತಿ ಅಗತ್ಯವಿದೆ. ಅವರ ಆರೋಗ್ಯದ ಕುರಿತು ಯಾವುದೇ ಆತಂಕವಿಲ್ಲ ಎಂದು ಕುಟುಂಬದ ಆಪ್ತ ಮೂಲಗಳು ತಿಳಿಸಿವೆ.

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ವಿಜಾರಿಯಾಲ್

ಮ್ಯಾಡ್ರಿಡ್ (ಎಪಿ): ವಿಜಾರಿಯಾಲ್ ತಂಡವು ಸ್ಪ್ಯಾನಿಷ್ ಲೀಗ್‌ನ ಮೊದಲ ಪಂದ್ಯದಲ್ಲೇ ಪರದಾಟ ನಡೆಸಿತು. ಸೋಮವಾರ ತಡರಾತ್ರಿ ನಡೆದ ಹಣಾಹಣಿಯಲ್ಲಿ ಆ ತಂಡವು ಗ್ರೆನೆಡಾ ತಂಡದೊಂದಿಗೆ ಗೋಲುರಹಿತ ಡ್ರಾ ಸಾಧಿಸಿತು.

ಸೆರಾಮಿಕಾ ಕ್ರೀಡಾಂಗಣದಲ್ಲಿ ನಡೆದ ಈ ಹಣಾಹಣಿಗೆ ಏಳು ಸಾವಿರ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗಿತ್ತು. ಪಂದ್ಯದಲ್ಲಿ ಎರಡೂ ತಂಡಗಳ ನಡುವೆ ಭಾರಿ ಪೈಪೋಟಿ ನಡೆದರೂ ಗೋಲು ದಾಖಲಾಗಲಿಲ್ಲ. 82ನೇ ನಿಮಿಷದಲ್ಲಿ ವಿಜಾರಿಯಾಲ್‌ನ ಜುವಾನ್ ಫೊಯ್ತ್ ಹಳದಿ ಕಾರ್ಡ್ ಪಡೆದರು.

ಇನ್ನೊಂದು ಪಂದ್ಯದಲ್ಲಿ ಎಲ್ಚೆ ತಂಡವೂ ಅಟ್ಲೆಟಿಕೊ ಬಿಲ್ಬಾವ್ ತಂಡದ ಎದುರು ಗೋಲುರಹಿತ ಡ್ರಾ ಸಾಧಿಸಿತು.

ಕೆಎಸ್‌ಸಿಎ ಕ್ರಿಕೆಟ್: ವಿಶ್ವನಾಥ್ ಭರ್ಜರಿ ಶತಕ

ಬೆಂಗಳೂರು: ವಿಶ್ವನಾಥ್ ಎಚ್.ಕೆ. ಅವರ ಅಮೋಘ ಶತಕದ (ಔಟಾಗದೆ 163, 146ಎ, 21 ಬೌಂಡರಿ, 1 ಸಿಕ್ಸರ್) ಬಲದಿಂದ ಆರ್.ವಿ. ಇಂಜಿನಿಯರಿಂಗ್ ಕಾಲೇಜು ತಂಡವು ಕೆಎಸ್‌ಸಿಎ ಗುಂಪು ಒಂದರ ಮೂರನೇ ಡಿವಿಷನ್ ನಾಸರ್ ಸ್ಮಾರಕ ಟ್ರೋಫಿ ಟೂರ್ನಿಯಲ್ಲಿ ಜಯ ಗಳಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಒಂಬತ್ತು ರನ್‌ಗಳಿಂದ ವಿಶ್ವೇಶ್ವರಪುರಂ ಕ್ರಿಕೆಟ್ ಕ್ಲಬ್‌ಅನ್ನು ಮಣಿಸಿತು. ವಿಶ್ವೇಶ್ವರಪುರಂ ತಂಡದ ರಿತಿನ್ ಕ್ರಿಸ್ಟಿ ಸಿಡಿಸಿದ ಭರ್ಜರಿ ಶತಕ (167, 135 ಎ. 16 ಬೌ. 6 ಸಿ.) ವ್ಯರ್ಥವಾಯಿತು.

ಸಂಕ್ಷಿಪ್ತ ಸ್ಕೋರು: ಆರ್.ವಿ. ಇಂಜಿನಿಯರಿಂಗ್ ಕಾಲೇಜು: 50 ಓವರ್‌ಗಳಲ್ಲಿ 6ಕ್ಕೆ 311 (ವಿಶ್ವನಾಥ್ ಎಚ್.ಕೆ. ಔಟಾಗದೆ 163, ಶ್ರೇಯಸ್ ಎನ್. 61, ಪಿಯೂಷ್ ಸಿಂಗ್ 36; ಆದಿತ್ಯ ಎಚ್.ಎನ್. 33ಕ್ಕೆ 2). ವಿಶ್ವೇಶ್ವರಪುರಂ ಸಿಸಿ (2): 50 ಓವರ್‌ಗಳಲ್ಲಿ 302 ಆಲೌಟ್ (ರಿತಿನ್ ಕ್ರಿಸ್ಟಿ ಸಿ 167, ಅಶ್ವಿನ್ ಸಂತೋಷ್ 29, ಎಂ.ಕಾರ್ತಿಕೇಯನ್ 31; ಪಿಯೂಷ್ ಸಿಂಗ್ 46ಕ್ಕೆ 2, ವಿಶ್ವನಾಥ್ ಎಚ್.ಕೆ. 39ಕ್ಕೆ 2). ಫಲಿತಾಂಶ: ಆರ್.ವಿ. ಇಂಜಿನಿಯರಿಂಗ್ ಕಾಲೇಜು ತಂಡಕ್ಕೆ 9 ರನ್‌ಗಳ ಜಯ.

'ನೀವೆಲ್ಲ ಮಾದರಿ ಆಗಿದ್ದೀರಿ'

ಪ್ಯಾರಾಲಿಂಪಿಕ್ಸ್ ಸ್ಪರ್ಧಿಗಳನ್ನು ಶ್ಲಾಘಿಸಿದ ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): 'ನೀವೆಲ್ಲರೂ ಜಯಶಾಲಿಗಳು ಮತ್ತು ಮಾದರಿಯಾಗಿದ್ದೀರಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ಯಾರಾ ಅಥ್ಲೀಟ್‌ಗಳನ್ನು ಶ್ಲಾಘಿಸಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್‌ಗೆ ತೆರಳುತ್ತಿರುವ 10 ಮಂದಿ ಅಥ್ಲೀಟ್‌ಗಳು, ಅವರ ಕುಟುಂಬದ ಸದಸ್ಯರು ಹಾಗೂ ಕೋಚ್‌ಗಳೊಂದಿಗೆ ಮಂಗಳವಾರ ಅವರು ವರ್ಚುವಲ್ ಸಂವಾದ ನಡೆಸಿದರು.

ಆಗಸ್ಟ್ 24ರಿಂದ ಸೆಪ್ಟೆಂಬರ್ ಐದರವರೆಗೆ ಪ್ಯಾರಾಲಿಂಪಿಕ್ಸ್ ನಡೆಯಲಿದೆ. ಆಗಸ್ಟ್ 27ರಂದು ಆರ್ಚರಿ ಸ್ಪರ್ಧೆಗಳೊಂದಿಗೆ ಭಾರತದ ಅಭಿಯಾನ ಆರಂಭವಾಗಲಿದೆ.

'ಕಷ್ಟದ ಪರಿಸ್ಥಿತಿಗಳ ನಡುವೆಯೂ ಹೋರಾಟದ ಮನೋಭಾವ ಉಳಿಸಿಕೊಂಡಿದ್ದೀರಿ. ನಿಮ್ಮ ಪರಿಶ್ರಮ ಮತ್ತು ಶಕ್ತಿಯ ಕಾರಣದಿಂದ ಈ ಹಂತ ತಲುಪಿದ್ದೀರಿ. ಬಹುದೊಡ್ಡ ವೇದಿಕೆಯಲ್ಲಿ ದೇಶವನ್ನು ಪ್ರತಿನಿಧಿಸಲು ಹೊರಟಿದ್ದೀರಿ. ನೀವೆಲ್ಲರೂ ಜಯಶಾಲಿಗಳು. ಒತ್ತಡಕ್ಕೆ ಒಳಗಾಗಬೇಡಿ. ನಿಮಗೆ ಸಾಧ್ಯವಾದಷ್ಟು ಉತ್ತಮ ಸಾಮರ್ಥ್ಯ ತೋರುತ್ತೀರಿ ಎಂಬ ವಿಶ್ವಾಸವಿದ್ದು, ಪದಕಗಳು ಒಲಿಯಲಿವೆ' ಎಂದು ಮೋದಿ ನುಡಿದರು.

ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ದೇವೇಂದ್ರ ಜಜಾರಿಯಾ ಮತ್ತು ಮರಿಯಪ್ಪನ್ ತಂಗವೇಲು ಸಂವಾದದಲ್ಲಿ ಇದ್ದರು.



ಪ್ಯಾರಾ ಅಥ್ಲೀಟ್‌ಗಳೊಂದಿಗೆ ಮಂಗಳವಾರ ವರ್ಚುವಲ್ ಸಂವಾದ ನಡೆಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ– ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಪಿಒಕೆ ಅಧ್ಯಕ್ಷರಾಗಿ ಸುಲ್ತಾನ್ ಮಹಮೂದ್ ಆಯ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಅಧ್ಯಕ್ಷರಾಗಿ ಸುಲ್ತಾನ್ ಮಹಮೂದ್ ಅವರನ್ನು ಮಂಗಳವಾರ ಆ ಪ್ರದೇಶದ ಶಾಸಕಾಂಗ ಸಭೆ ಆಯ್ಕೆ ಮಾಡಿದೆ.

ಆಡಳಿತಾರೂಢ ಪಾಕಿಸ್ತಾನ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಪಕ್ಷದ ಬೆಂಬಲದೊಂದಿಗೆ ಮಹಮೂದ್ ಅವರು ಜುಲೈ 25ರಂದು ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು.

ಮಹಮೂದ್ ಇವರು, ಸರ್ದಾರ್ ಮಸೂದ್ ಖಾನ್ ಅವರ ಉತ್ತರಾಧಿಕಾರಿಯಾಗಲಿದ್ದು, ಖಾನ್ ಅವರ ಅಧಿಕಾರಾವಧಿ ಇದೇ 24ರಂದು ಕೊನೆಗೊಳ್ಳಲಿದೆ.

ಮಲೇಷ್ಯಾ: ಹೊಸ ಪ್ರಧಾನಿಗಾಗಿ ಹುಡುಕಾಟ

ಕ್ವಾಲಾಲಂಪುರ (ಎಪಿ): ಪ್ರಧಾನಿ ಮುಹಿದ್ದೀನ್ ಯಾಸೀನ್ ರಾಜೀನಾಮೆ ನೀಡಿದ ನಂತರ, ಮಲೇಷ್ಯಾದ ರಾಜ, ಕೊರೊನಾ ಸಾಂಕ್ರಾಮಿದ ನಡುವೆ ಹೊಸ ಪ್ರಧಾನಿಯ ಹುಡುಕಾಟದಲ್ಲಿ ತೊಡಗಿದ್ದು, ಈ ಸಂಬಂಧ ಮಂಗಳವಾರ ರಾಜಕೀಯ ಪಕ್ಷಗಳ ಮುಖ್ಯಸ್ಥರನ್ನು ಭೇಟಿಯಾಗಲು ಸಜ್ಜಾಗಿದ್ದಾರೆ.

ಕೊರೊನಾ ಸಾಂಕ್ರಾಮಿಕವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ ಎಂಬ ಸಾರ್ವಜನಿಕರ ಆರೋಪದ ಹಿನ್ನೆಲೆಯಲ್ಲಿ ಸೋಮವಾರ ಪ್ರಧಾನಿ ಮುಹಿದ್ದೀನ್ ಯಾಸೀನ್ ಮತ್ತು ಸಚಿವ ಸಂಪುಟದ ಸಹೋದ್ಯೋಗಿಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ದೇಶಕ್ಕೆ ಉತ್ತರಾಧಿಕಾರಿ ಬರುವವರೆಗೂ ಮುಹಿದ್ದೀನ್ ಅವರನ್ನೇ ಹಂಗಾಮಿ ಪ್ರಧಾನಿಯನ್ನಾಗಿ ನೇಮಿಸಲಾಗಿದೆ.

ಕೇವಲ 1 ಪ್ರಕರಣ, 3 ದಿನ ನ್ಯೂಜಿಲೆಂಡ್ ಬಂದ್

ವೆಲ್ಲಿಂಗ್ಟನ್ (ಎಪಿ): ಸಮುದಾಯದಲ್ಲಿ ಕೇವಲ ಒಂದೇ ಒಂದು ಕೊರೊನಾ ವೈರಸ್ ಸೋಂಕಿನ ಪ್ರಕರಣ ಪತ್ತೆಯಾಗುತ್ತಿದ್ದಂತೆ ನ್ಯೂಜಿಲೆಂಡ್ ಸರ್ಕಾರ ಮಂಗಳವಾರ ಇಡೀ ರಾಷ್ಟ್ರದಲ್ಲಿ ಮೂರು ದಿನಗಳ ಲಾಕ್‌ಡೌನ್ ಘೋಷಿಸಿದೆ.

ಇನ್ನು 8ನೇ ತಿಂಗಳಿಗೆ ಮತ್ತೊಂದು ಲಸಿಕೆ?

ವಾಷಿಂಗ್ಟನ್ (ಎಪಿ): ಕೊರೊನಾ ವೈರಸ್ ವಿರುದ್ಧ ಇನ್ನಷ್ಟು ರಕ್ಷಣೆ ಪಡೆಯಲು ಎಲ್ಲ ಅಮೆರಿಕನ್ನರಿಗೆ 8 ತಿಂಗಳ ಬಳಿಕ ಬೂಸ್ಟರ್ ಲಸಿಕೆ ನೀಡಬೇಕೆಂದು ಅಮೆರಿಕದ ಆರೋಗ್ಯ ತಜ್ಞರು ಶಿಫಾರಸು ಮಾಡುವ ನಿರೀಕ್ಷೆ ಇದೆ.

ಯುಎಇಯಲ್ಲಿ ಟ್ವೆಂಟಿ–20 ವಿಶ್ವಕಪ್ ಟೂರ್ನಿ; ನವೆಂಬರ್ 14ರಂದು ಫೈನಲ್

ಅ.24ರಂದು ಭಾರತ- ಪಾಕ್ ಮುಖಾಮುಖಿ

ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಪ್ರಾಥಮಿಕ ಸುತ್ತು (ಕ್ವಾಲಿಫೈಯರ್)			
ಅ.17	ಒಮನ್–ಪಪುವಾ ನ್ಯೂಗಿನಿ	ಮಸ್ಕತ್	ಮಧ್ಯಾಹ್ನ 3.30
ಅ.17	ಬಾಂಗ್ಲಾದೇಶ–ಸ್ಕಾಟ್ಲೆಂಡ್	ಮಸ್ಕತ್	ರಾತ್ರಿ7.30
ಅ.18	ಐರ್ಲೆಂಡ್–ನೆದರ್ಲೆಂಡ್ಸ್	ಅಬುಧಾಬಿ	ಮಧ್ಯಾಹ್ನ 3.30
ಅ.18	ಶ್ರೀಲಂಕಾ–ನಮಿಬಿಯಾ	ಅಬುಧಾಬಿ	ರಾತ್ರಿ7.30
ಅ.19	ಸ್ಕಾಟ್ಲೆಂಡ್–ಪಪುವಾ ನ್ಯೂಗಿನಿ	ಮಸ್ಕತ್	ಮ.3.30
ಅ.19	ಒಮನ್–ಬಾಂಗ್ಲಾದೇಶ	ಮಸ್ಕತ್	ರಾತ್ರಿ7.30
ಅ.20	ನಮಿಬಿಯಾ–ನೆದರ್ಲೆಂಡ್ಸ್	ಅಬುಧಾಬಿ	ಮ.3.30
ಅ.20	ಶ್ರೀಲಂಕಾ–ಐರ್ಲೆಂಡ್	ಅಬುಧಾಬಿ	ರಾತ್ರಿ7.30
ಅ.21	ಬಾಂಗ್ಲಾದೇಶ–ಪಪುವಾ ನ್ಯೂಗಿನಿ	ಮಸ್ಕತ್	ಮ.3.30
ಅ.21	ಒಮನ್–ಸ್ಕಾಟ್ಲೆಂಡ್	ಮಸ್ಕತ್	ರಾತ್ರಿ7.30
ಅ.22	ನಮಿಬಿಯಾ–ಐರ್ಲೆಂಡ್	ಶಾರ್ಜಾ	ಮ.3.30
ಅ.22	ಶ್ರೀಲಂಕಾ–ನೆದರ್ಲೆಂಡ್ಸ್	ಶಾರ್ಜಾ	ರಾತ್ರಿ7.30
ಸೂಪರ್ 12			
ಅ.23	ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	ಅಬುಧಾಬಿ	ಮ.3.30
ಅ.23	ಇಂಗ್ಲೆಂಡ್–ವೆಸ್ಟ್ ಇಂಡೀಸ್	ದುಬೈ	ರಾತ್ರಿ7.30
ಅ.24	ಭಾರತ–ಪಾಕಿಸ್ತಾನ	ದುಬೈ	ರಾತ್ರಿ7.30
ಅ.24	ಕ್ವಾಲಿಫೈಯರ್ ಎ1–ಕ್ವಾಲಿಫೈಯರ್ ಬಿ2	ಶಾರ್ಜಾ	ಮ.3.30
ಅ.25	ಅಫ್ಗಾನಿಸ್ತಾನ–ಕ್ವಾಲಿಫೈಯರ್ ಬಿ1	ಶಾರ್ಜಾ	ರಾತ್ರಿ7.30
ಅ.26	ದಕ್ಷಿಣ ಆಫ್ರಿಕಾ–ವೆಸ್ಟ್ ಇಂಡೀಸ್	ದುಬೈ	ಮ.3.30
ಅ.26	ಪಾಕಿಸ್ತಾನ–ನ್ಯೂಜಿಲೆಂಡ್	ಶಾರ್ಜಾ	ರಾತ್ರಿ7.30
ಅ.27	ಇಂಗ್ಲೆಂಡ್–ಕ್ವಾಲಿಫೈಯರ್ ಬಿ2	ಅಬುಧಾಬಿ	ಮ.3.30
ಅ.27	ಕ್ವಾಲಿಫೈಯರ್ ಬಿ1–ಕ್ವಾಲಿಫೈಯರ್ ಎ2	ಅಬುಧಾಬಿ	ರಾತ್ರಿ7.30
ಅ.28	ಆಸ್ಟ್ರೇಲಿಯಾ–ಕ್ವಾಲಿಫೈಯರ್ ಎ1	ದುಬೈ	ಮ.3.30
ಅ.29	ವೆಸ್ಟ್ ಇಂಡೀಸ್–ಕ್ವಾಲಿಫೈಯರ್ ಬಿ2	ಶಾರ್ಜಾ	ಮ.3.30
ಅ.29	ಪಾಕಿಸ್ತಾನ–ಅಫ್ಗಾನಿಸ್ತಾನ	ದುಬೈ	ರಾತ್ರಿ7.30
ಅ.30	ದಕ್ಷಿಣ ಆಫ್ರಿಕಾ–ಕ್ವಾಲಿಫೈಯರ್ ಎ1	ಶಾರ್ಜಾ	ಮ.3.30
ಅ.30	ಆಸ್ಟ್ರೇಲಿಯಾ–ಇಂಗ್ಲೆಂಡ್	ದುಬೈ	ರಾತ್ರಿ7.30
ಅ.31	ಅಫ್ಗಾನಿಸ್ತಾನ–ಕ್ವಾಲಿಫೈಯರ್ ಎ2	ಅಬುಧಾಬಿ	ಮ.3.30
ಅ.31	ಭಾರತ–ನ್ಯೂಜಿಲೆಂಡ್	ದುಬೈ	ರಾತ್ರಿ7.30
ನ1	ಇಂಗ್ಲೆಂಡ್–ಕ್ವಾಲಿಫೈಯರ್ ಎ1	ಶಾರ್ಜಾ	ರಾತ್ರಿ7.30
ನ2	ದಕ್ಷಿಣ ಆಫ್ರಿಕಾ–ಕ್ವಾಲಿಫೈಯರ್ ಬಿ2	ಅಬುಧಾಬಿ	ಮ.3.30
ನ2	ಪಾಕಿಸ್ತಾನ–ಕ್ವಾಲಿಫೈಯರ್ ಎ2	ಅಬುಧಾಬಿ	ರಾತ್ರಿ7.30
ನ.3	ನ್ಯೂಜಿಲೆಂಡ್–ಕ್ವಾಲಿಫೈಯರ್ ಬಿ1	ದುಬೈ	ಮ.3.30
ನ.3	ಭಾರತ–ಅಫ್ಗಾನಿಸ್ತಾನ	ಅಬುದಾಭಿ	ರಾತ್ರಿ7.30
ನ.4	ಆಸ್ಟ್ರೇಲಿಯಾ–ಕ್ವಾಲಿಫೈಯರ್ ಬಿ2	ದುಬೈ	ಮ.3.30
ನ.4	ವೆಸ್ಟ್ ಇಂಡೀಸ್–ಕ್ವಾಲಿಫೈಯರ್ ಎ1	ಅಬುಧಾಬಿ	ರಾತ್ರಿ7.30
ನ5	ನ್ಯೂಜಿಲೆಂಡ್–ಕ್ವಾಲಿಫೈಯರ್ ಎ2	ಶಾರ್ಜಾ	ಮ.3.30
ನ.5	ಭಾರತ–ಕ್ವಾಲಿಫೈಯರ್ ಬಿ1	ದುಬೈ	ರಾತ್ರಿ7.30
ನ.6	ಆಸ್ಟ್ರೇಲಿಯಾ–ವೆಸ್ಟ್ಇಂಡೀಸ್	ಶಾರ್ಜಾ	ಮ.3.30
ನ6	ಇಂಗ್ಲೆಂಡ್–ದಕ್ಷಿಣ ಆಫ್ರಿಕಾ	ಶಾರ್ಜಾ	ರಾತ್ರಿ7.30
ನ7	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಅಬುಧಾಬಿ	ಮ.3.30
ನ7	ಪಾಕಿಸ್ತಾನ–ಕ್ವಾಲಿಫೈಯರ್ ಬಿ1	ಶಾರ್ಜಾ	ರಾತ್ರಿ7.30
ನ8	ಭಾರತ–ಕ್ವಾಲಿಫೈಯರ್ ಎ2	ಅಬುಧಾಬಿ	ರಾತ್ರಿ7.30
ನಾಕೌಟ್ ಹಂತ			
ನ.10	ಮೊದಲ ಸೆಮಿಫೈನಲ್	ಅಬುಧಾಬಿ	ರಾತ್ರಿ7.30
ನ11	ಎರಡನೇ ಸೆಮಿಫೈನಲ್	ದುಬೈ	ರಾತ್ರಿ7.30
ನ.14	ಫೈನಲ್	ದುಬೈ	ರಾತ್ರಿ7.30

ಮೂಲ: ಐಸಿಸಿ ವೆಬ್‌ಸೈಟ್

ದುಬೈ (ಪಿಟಿಐ): ಭಾರತ ತಂಡವು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬದ್ಧ ಎದುರಾಳಿ ಪಾಕಿಸ್ತಾನದ ಎದುರಿನ ಪಂದ್ಯದೊಂದಿಗೆ ತನ್ನ ಅಭಿಯಾನ ಆರಂಭಿಸಲಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ.

ಭಾರತವು ಸೂಪರ್ 12 ಹಂತದಲ್ಲಿ ಪಾಕಿಸ್ತಾನ, ನ್ಯೂಜಿಲೆಂಡ್, ಅಫ್ಗಾನಿಸ್ತಾನ ಮತ್ತು ಕ್ವಾಲಿಫೈಯರ್‌ನಲ್ಲಿ ಎ ಮತ್ತು ಬಿ ಗುಂಪಿನಿಂದ ಅರ್ಹತೆ ಗಳಿಸಿದ ತಂಡಗಳನ್ನು ಎದುರಿಸಲಿದೆ. ಅ.24ರಂದು ದುಬೈನಲ್ಲಿ ನಡೆಯುವ ಪಂದ್ಯದಲ್ಲಿ ಭಾರತ ಮತ್ತು ಪಾಕ್ ಮುಖಾಮುಖಿಯಾಗಲಿವೆ.

ಪ್ರಾಥಮಿಕ ಸುತ್ತು (ಕ್ವಾಲಿಫೈಯರ್) ಅಕ್ಟೋಬರ್ 17ರಂದು ಒಮನ್‌ನಲ್ಲಿ ಆರಂಭವಾಗಲಿದೆ. ಎ ಗುಂಪಿನಲ್ಲಿ ಶ್ರೀಲಂಕಾ, ಐರ್ಲೆಂಡ್, ನೆದರ್ಲೆಂಡ್ಸ್ ಮತ್ತು ನಮಿಬಿಯಾ, ಬಿ ಗುಂಪಿನಲ್ಲಿ ಬಾಂಗ್ಲಾದೇಶ, ಸ್ಕಾಟ್ಲೆಂಡ್, ಪಪುವಾ ನ್ಯೂಗಿನಿ ಮತ್ತು ಒಮನ್ ತಂಡಗಳು ಸ್ಪರ್ಧಿಸಲಿವೆ.

ಪ್ರತಿ ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆದ ತಂಡಗಳು ಸೂಪರ್ 12ರ ಹಂತಕ್ಕೆ ಪ್ರವೇಶಿಸಲಿವೆ. ಈ ಹಂತದ ಮೊದಲ ಪಂದ್ಯವು ಅ.23ರಂದು ನಡೆಯಲಿದೆ. ಅಬುಧಾಬಿಯಲ್ಲಿ ನಡೆಯುವ ಆ ಪಂದ್ಯದಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗಲಿವೆ. ಅದೇ ದಿನ ನಡೆಯುವ ಎರಡನೇ ಪಂದ್ಯದಲ್ಲಿ ದುಬೈನಲ್ಲಿ ಎರಡು ಬಾರಿ ಚಾಂಪಿಯನ್ ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ತಂಡಗಳು ಸೆಣಸಲಿವೆ.



ಭಾರತ ತಂಡದ ಅಭಿಮಾನಿಗಳು

ನವೆಂಬರ್ 10 ಮತ್ತು 11ರಂದು ಸೆಮಿಫೈನಲ್ ಪಂದ್ಯಗಳು ಆಯೋಜನೆಗೊಂಡಿವೆ. 14ರಂದು ಫೈನಲ್ ನಡೆಯಲಿದ್ದು, ನ.15 ಅನ್ನು ಮೀಸಲು ದಿನವನ್ನಾಗಿ ಇರಿಸಲಾಗಿದೆ.

ಈ ಟೂರ್ನಿಗೆ ಭಾರತವು ಆತಿಥ್ಯ ವಹಿಸುತ್ತಿದೆ. ಕೋವಿಡ್ ಕಾರಣದಿಂದಾಗಿ ತಟಸ್ಥ ಸ್ಥಳವಾದ ಯುಎಇ ಮತ್ತು ಒಮನ್‌ನಲ್ಲಿ ಆಯೋಜಿಸಲಾಗುತ್ತಿದೆ. ಅಕ್ಟೋಬರ್ ವೇಳೆಗೆ ಭಾರತದಲ್ಲಿ ಕೋವಿಡ್ ಮೂರನೇ ಅಲೆಯ ಪ್ರಕರಣಗಳು ಹೆಚ್ಚುವ ಸಾಧ್ಯತೆ ಇರುವುದರಿಂದ ಟೂರ್ನಿಯನ್ನು ಸ್ಥಳಾಂತರಿಸಲಾಗಿದೆ.

‘ಯುಎಇ ನಮಗೆ ತವರಿದ್ದಂತೆ. ಇನ್ನೊಮ್ಮೆ ಚಾಂಪಿಯನ್ ಆಗಿ ಹೊರಹೊಮ್ಮುವ ವಿಶ್ವಾಸ ಮತ್ತು ಸಾಮರ್ಥ್ಯ ನಮ್ಮ ತಂಡಕ್ಕೆ ಇದೆ’ ಎಂದು ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ ಹೇಳಿದ್ದಾರೆ.

2016ರಲ್ಲಿ ಚಾಂಪಿಯನ್ ಆಗಿದ್ದ ವೆಸ್ಟ್ ಇಂಡೀಸ್ ತಂಡದ ಕೀರನ್ ಪೊಲಾರ್ಡ್ ‘ಸೂಪರ್ 12ರ ಹಂತದಲ್ಲಿ ಉತ್ತಮ ಪೈಪೋಟಿ ನಮಗೆ ಇದೆ. ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಸವಾಲು ಎದುರಿಸಲು ನಾವು ಕಾತುರರಾಗಿದ್ದೇವೆ‘ ಎಂದಿದ್ದಾರೆ.

ಜೂನಿಯರ್ ಕುಸ್ತಿ: ಫೈನಲ್‌ಗೆ ರವಿಂದರ್

ಯುಫಾ, ರಷ್ಯಾ (ಪಿಟಿಐ): ಉತ್ತಮ ಸಾಮರ್ಥ್ಯ ತೋರಿದ ರವಿಂದರ್ ಅವರು ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ. ಮಂಗಳವಾರ ನಡೆದ 61 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಅವರು ಅರ್ಮೇನಿಯಾದ ಲೆವಿಕ್ ಮಿಖಾಯೆಲ್ಯಾನ್ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಮಣಿಸಿದರು.

ರವಿಂದರ್, 2018ರಲ್ಲಿ ಏಷ್ಯನ್ ಕೆಡೆಟ್ ಚಾಂಪಿಯನ್ ಆಗಿದ್ದರು. 2019ರಲ್ಲಿ 23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ.

ಗೌರವ್ ಬಲಿಯಾನ್ (79 ಕೆಜಿ ವಿಭಾಗ) ಹಾಗೂ ದೀಪಕ್ (97 ಕೆಜಿ) ಕಂಚಿನ ಪದಕಗಳನ್ನು ಗೆದ್ದುಕೊಂಡರು. ಕಂಚಿನ ಪದಕದ ಬೌಟ್‌ನಲ್ಲಿ ಗೌರವ್ ಜರ್ಮನಿಯ ರಿಚರ್ಡ್ ಶೋಡರ್ ಎದುರು ಗೆದ್ದರೆ, ದೀಪಕ್ ಹಂಗರಿಯ ಮಿಲಾನ್ ಕೊರ್ಸಾಗ್ ಎದುರು ಗೆದ್ದರು.

ಟಿಟಿ: ಅರ್ಚನಾಗೆ ರೋಚಕ ಜಯ

ಬುಡಾಪೆಸ್ಟ್ (ಪಿಟಿಐ): ಕರ್ನಾಟಕದ ಅರ್ಚನಾ ಕಾಮತ್ ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಟೂರ್ನಿಯ ಅಮೋಘ ಜಯಗಳಿಸಿ ಪ್ರೀಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.



ಅರ್ಚನಾ ಕಾಮತ್

ಒಲಿಂಪಿಯನ್ ಮಣಿಕಾ ಬಾತ್ರಾ ಮತ್ತು ಶ್ರೀಜಾ ಅಕುಲ್ ಕೂಡ ತಮ್ಮ ಸುತ್ತಿನಲ್ಲಿ ಪ್ರಯಾಸದ ಜಯ ಸಾಧಿಸಿ 16ರ ಘಟ್ಟಕ್ಕೆ ಪ್ರವೇಶಿಸಿದ್ದಾರೆ. 32ರ ಘಟ್ಟದಲ್ಲಿ 60ನೇ ರ್‍ಯಾಂಕ್‌ನ ಮಣಿಕಾ 7-11, 11-7, 11-6, 13-15, 11-5ರಿಂದ ಜರ್ಮನಿಯ ಸಬೀನಾ ವಿಂಟರ್ ವಿರುದ್ಧ ಗೆದ್ದರು.

ಅರ್ಚನಾ 11-8, 11-9, 6-11, 5-11, 11-9ರಿಂದ ರಷ್ಯಾದ ಯಾನಾ ನೊಸ್ಕೊವಾ ವಿರುದ್ಧ, ಶ್ರೀಜಾ ಅಕುಲ್ ಅವರು11-8, 6-11, 14-12, 2-11, 11-7ರಿಂದ ಸ್ವೀಡನ್‌ನ ಲಿಂಡಾ ಬರ್ಗ್‌ಸ್ಟ್ರಾರ್ಮ್ ವಿರುದ್ಧ ಗೆದ್ದರು.